ರಂಜನೆ ಬೋಧನೆ

ಲಂಕೇಶ್

ಡಿಸೆಂಬರ್ 19, 2007 ರೂ.10/-





ಹಂತಕ ಅಶೋಕ್ ಪೈ ಯಾರು?

ಅಕ್ಕರ್ ನಾಗಣ್ಣನಿಗೆ ಪೆಟ್ಟು

...ಡೇಜಾ ...ಟ್




ಯಜ್ಞಪುರುಷ ಕೃಷ್ಣನಿಂದ ಕಾಂಗ್ರೆಸ್ ನಾಶ



ನೂರೈವತ್ತು ಮದುವೆಗಳ ಮೋಸದ ಸರದಾರ



ಚಿತ್ರದುರ್ಗ: ಮತ್ತೆ ವಕ್ಕರಿಸಿದ ಭ್ರಷ್ಟ ಗುಬ್ಬಿ ಹನುಮಂತಪ್ಪ



ಸಾಹಿತ್ಯ ಸಮ್ಮೇಳನಕ್ಕೆ ಹಿಂದೂ ವೈರಸ್



ಕುಕ್ಕೆ ಸುಬ್ರಹ್ಮಣ್ಯ: ಸರ್ಪ ಸಂಸ್ಕಾರದ ಸೈತಾನರು!

ಬಿಡಿ ಚಿತ್ರಗಳು

● ಪಾರ್ವತೀಶ ●

ಯಡವಟ್ಟು ಭಾಷಣ ಮಾಡಿದರೆ....

ನಿಮಗೆ ಪೂರಾಪಿಂತ ಗೊತ್ತಿರಬಹುದು. ವಿಜಯ ಕರ್ನಾಟಕದಲ್ಲಿ ಆಗಾಗ್ಗೆ ಬೆತ್ತಲೆ ಜಗತ್ತೆಂಬ ಕಾಲಂ ಬರೆಯುತ್ತಿದ್ದಾರೆ ಈತ. ಹಸಿಹಸಿ ಚಿಂತನೆ, ಆವೇಶಗಳ ಈತನ ಬರವಣಿಗೆಯಲ್ಲಿ RSS ನ under current ಸದಾ ಇರುತ್ತದೆ. ಒಂದು ರೀತಿಯಲ್ಲಿ ಬಾಲ(ಕ) ಚಿಂತಕ ಇದ್ದಂತೆ. ಜೊತೆಗೆ ಭಾಷಣ ಮಾಡುವ ಚಟವೂ ಇದೆ.

ಮೊನ್ನೆ ಏನಾಯಿತೆಂದರೆ ಮೂಡಬಿದಿರೆಯ ಕಾಲೇಜೊಂದಕ್ಕೆ ಈ ಸಿಮ್ಮ ಭಾಷಣಕ್ಕೆಂದು ಹೋಗಿದೆ. ಮಾಮೂಲಿನಂತೆ ಮುಸ್ಲಿಮರನ್ನು



ಹೀಯಾಳಿಸಿ, ಪ್ರಗತಿಪರರನ್ನು ಬೈಯ್ದು ಕೊನೆಗೆ ಕಲ್ಕುಳಿ ವಿಠಲ ಹೆಗ್ಡೆ ವಿಚಾರ ಪ್ರಸ್ತಾಪಿಸಿದೆ.

"ವಿಠಲ್ ಹೆಗ್ಡೆ ಒಬ್ಬ ಶ್ರೀಮಂತ ಜಮೀನ್ದಾರ. ಗಿರಿಜನರ, ದಲಿತರ ಬಗ್ಗೆ ಕಾಳಜಿ ತೋರಿಸುವ ನಾಟಕ ಆಡುತ್ತಿದ್ದಾರೆ. ಆದರೆ ಅವರ ಮಗನನ್ನು ಫಾರಿನ್‌ನಲ್ಲಿಟ್ಟು ಓದಿಸುತ್ತಿದ್ದಾರೆ" ಅಂತೆಲ್ಲಾ ಆವೇಶದಿಂದ ಘರ್ಜಿಸಿ ಸುಸ್ತು ಮಾಡಿಕೊಂಡಿದೆ ಈ ಸಿಮ್ಮ.

ಆದರೆ ಯಡವಟ್ಟಾಗಿದ್ದು ಎಲ್ಲೆಂದರೆ ಕೊನೆಯಲ್ಲಿ ಕಾಲೇಜಿನ ಪ್ರಿನ್ಸಿಪಾಲರು ಮಾತಾಡುತ್ತಾ "ವಿಠಲ್ ಹೆಗ್ಡೆಯವರ ಏಕೈಕ ಪುತ್ರ ನಮ್ಮ ಕಾಲೇಜಿನಲ್ಲೇ ಓದುತ್ತಿದ್ದಾನೆ. ಆತ ಪ್ರತಿಭಾವಂತ ಸಭ್ಯ ವಿದ್ಯಾರ್ಥಿ" ಎಂದು ನಿಜಸಂಗತಿ ಹೇಳಿದಾಗ.

ನರಿ ಕೂಗು ಗಿರಿ ಮುಟ್ಟೀತೆ?

ಇ-ಮೇಲ್‌ನಲ್ಲಿ ನಕ್ಸಲ್ ಗಂಗಾಧರ- ಚೆಡ್ಡಿ ಗಂಗಾಧರ್

ಭೂಗತ ಮಾವೋಯಿಸ್ಟ್ ಪಕ್ಷದ ಕೆಲವು ಹೇಳಿಕೆಗಳು ಗಂಗಾಧರ್ ಎಂಬುವವರ ಹೆಸರಿನಲ್ಲಿ ಆಗಾಗ್ಗೆ ಕಾಣಿಸಿಕೊಳ್ಳುತ್ತಿರುತ್ತದೆ. ಕೆಲವೊಮ್ಮೆ e-mail ಮೂಲಕವೂ ಪತ್ರಿಕಾ ಕಚೇರಿ, ಟಿವಿ ಚಾನೆಲ್‌ಗಳಿಗೆ ಈ ಹೇಳಿಕೆಗಳು ರವಾನೆಯಾಗುತ್ತವೆ.

ಇತ್ತೀಚೆಗೆ ಪೊಲೀಸರ ಚಿತಾವಣೆಯಿಂದ ದಲಿತರ ಮೇಲಿನ ದೌರ್ಜನ್ಯದ ಕೇಸಿಗೆ ಒಳಗಾದ ವಿಠಲ್ ಹೆಗ್ಡೆ ದುಗುಡದಿಂದ ಜಾಮೀನಿಗೆ ಓಡಾಡುತ್ತಿದ್ದಾಗ ಗಂಗಾಧರ್ ಹೆಸರಿನಲ್ಲಿ ಎಲ್ಲಾ ಕಡೆಗೂ ಒಂದು ಇ-ಮೇಲ್ ರವಾನೆಯಾಗಿದೆ.

"ನಮ್ಮ ಪಕ್ಷದ ಬೆಂಬಲಿಗ ವಿಠಲ್ ಹೆಗ್ಡೆಗೆ ತೊಂದರೆ ಕೊಟ್ಟರೆ ನಾವು ಸುಮ್ಮನಿರಲ್ಲ, ಅವರು ನಮಗೆ ಹಣ ಸಂಗ್ರಹಿಸಿ ಕೊಡುತ್ತಿದ್ದಾರೆ, ಮಲೆನಾಡಿನ ಗಿರಿಜನರು ನಮ್ಮ ಗೆರಿಲ್ಲಾಗಳಿಗೆ ಆಶ್ರಯ-ಊಟ ಕೊಡುವಂತೆ ಮಾಡಿದ್ದಾರೆ..." ಎಂಬಿತ್ಯಾದಿ ಕತೆ ಕಟ್ಟಿರುವ ಹೇಳಿಕೆ ಅದು.

ನಕ್ಸಲ್ ಹೋರಾಟದ ಬಗ್ಗೆಯೇ ಭಿನ್ನಾಭಿಪ್ರಾಯ ಹೊಂದಿರುವ ವಿಠಲ್‌ರನ್ನು ನಕ್ಸಲ್ ಬೆಂಬಲಿಗ ಎಂದು ಬಿಂಬಿಸುವ ಈ ಪತ್ರ ಬಂದಿರುವುದು ganga_dhara2OO7@ (ಟೂ ಓ ಓ ಸೆವೆನ್)ನಿಂದ. ಆದರೆ ಮಾವೋವಾದಿ ಗಂಗಾಧರ್‌ರ ಐಡಿ ganga_dhara2007 (ಟೂ ಜಿರೋ ಜೀರೋ ಸೆವೆನ್) ಎಂದಿದೆ.

ಕಂಪ್ಯೂಟರ್ ಕಲಿತವರ ಕಿತಾಪತಿ ಇದು.

ಆಹಾ... ದಡ್‌ಮನಿ ಮದ್ವೆಯಂತೆ.....!

ಕನ್ನಡ ಪತ್ರಿಕೋದ್ಯಮದ ನೇತಾರ, ಮಹಾನ್ ಪತ್ರಕರ್ತ ಬಸವರಾಜ ದೊಡ್ಡಮನಿ ಮುಂದಿನವಾರ ಮದುವೆಯಾಗಲಿದ್ದಾರೆ. ಬಹುಶಃ ಕನ್ನಡ ಪತ್ರಿಕಾ ಕ್ಷೇತ್ರದ 21 ನೇ ಶತಮಾನದ ಮಹೋನ್ನತ ಘಟನೆ ಇದಿರ ಬಹುದು... ಎಂಬ ದೌಟು ಬರುವಂತೆ ಈ ಮದುವೆಯ ಆಹ್ವಾನ ಪತ್ರಿಕೆ ಪ್ರಿಂಟಾಗಿದೆ.

ವಿಜಯ ಕರ್ನಾಟಕ, ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಉದಯವಾಣಿಗಳಲ್ಲಿ ಈ ದೊಡ್ಡಮನಿಯ ಮದುವೆ ಸುದ್ದಿ ಬ್ಯಾನರ್ ಹೆಡ್‌ಲೈನ್‌ನಲ್ಲಿ ಕಾಣಿಸಿಕೊಂಡಿದೆ ಎಂಬ ಕಲ್ಪನೆ ಬರುವಂತೆ ಈ ಇನ್ವಿಟೇಷನ್ ಪ್ರಿಂಟ್ ಮಾಡಿಸಿದ್ದಾರೆ ನೂತನ ವರ ಮಹಾಶಯ.

"ಆಹಾ ನನ್ ಮದ್ವೆಯಂತೆ, ಓಹೋ ನನ್ ಮದ್ವೆಯಂತೆ, ನಿನಗೂ ನನಗೂ ಏನಂತೆ... ಲೋಕವೆಲ್ಲಾ ಗುಲ್ಲಂತೆ ಟಾಂ....ಟಾಂ, ಟಾಂ" ಎಂಬ


ವಿಜಯ ಕ

ಇಂದು ದೊಡ್ಡಮನಿ ಮದುವೆ

ಹಳೇ ಸಿನಿಮಾ ಹಾಡಿನಂತಿಲ್ಲವೆ ಈತನ ಭ್ರಾಂತು.

ಇದನ್ನು ಭ್ರಮೆ, ಚೇಷ್ಟೆ ಅಂದುಕೊಂಡರೆ ನಿಮ್ಮ ಔದಾರ್ಯ. ಅಧಿಕಪ್ರಸಂಗಿತನ ಅಂದರೇನೇ ವಾಸ್ತವ. ಅದಿರಲಿ ಬಿಡಿ, ಮೊಬೈಲ್ ಆನ್ ಮಾಡಿದೇಟಿಗೆ "ಹಲೋ ನಾವು ಜರ್ನಲಿಸ್ಟ್ ದೊಡ್ಮನಿಯವರು ಮಾತಾಡ್ತಿರೋದು" ಅಂತಲೇ ಮಾತು ಶುರು ಮಾಡುವ ಈತ ಪತ್ರಿಕಾ ಚಳವಳಿಯ ಹರಿಕಾರ ಅಂತಲೂ ತಮಗೆ ತಾವೇ ಒಂದು ಬಿರುದು ಮಂಜೂರು ಮಾಡಿಕೊಂಡಿದ್ದಾರೆ. ಇದಕ್ಕೂ ಒಂದು ತಮಾಷೆಯ ಹಿನ್ನೆಲೆ ಇದೆ. ಒಂದು ದಿನ ಈ ಹುಬ್ಬಳ್ಳಿಯ ದೊಡ್ಮನಿ ದಿಢೀರನೆ ಮಾಗಡಿ ಬಸ್‌ಸ್ಟ್ಯಾಂಡಿಗೆ ಆಗಮಿಸಿ ಅವತ್ತಿನ ಸಂಯುಕ್ತ ಕರ್ನಾಟಕ ಪತ್ರಿಕೆಯ 100 ಪ್ರತಿಗಳನ್ನು ತಲಾ ಒಂದೂವರೆ ರೂಪಾಯಿಯಂತೆ ಖರೀದಿಸಿ ಆಮೇಲೆ ಅದನ್ನೇ 50 ಪೈಸೆಗೊಂದರಂತೆ ಮಾರಿ ಪರಾರಿಯಾಗಿದ್ದ. "ಯಾಕಪ್ಪ ಇಂಥ ಕೆಲಸ ಮಾಡಿದೆ" ಅಂತ ಕೇಳಿದವರಿಗೆ "ಜನ ಕನ್ನಡ ಪತ್ರಿಕೆ ಓದಲೀಂತ ನಾನು ಈ ಚಳವಳಿ ಮಾಡ್ತಿದ್ದೀನಿ, ನೋಡ್ತಾ ಇರಿ, next ಬಳ್ಳಾರೀಲೂ ಹಿಂಗೇ ಮಾಡೋನಿದ್ದೀನಿ" ಅಂದಿತ್ತು ಈ ದೊಡ್ಮನಿ. ಜನ ಅವತ್ತೆ ಇಂವಾ ದೊಡ್ಮನಿ ಅಲ್ಲ ದಡ್ಮನಿ ಅಂತ ತೀರ್ಮಾನಿಸಿದ್ದರು. ಆಮೇಲೆ ಲೋಕಪ್ರಿಯ ಪೇಪರ್ ಕಂಡು ಹಿಡಿದ ದೊಡ್ಮನಿ ಸಿದ್ಧಗಂಗಾ ಸ್ವಾಮಿಗೆ ನೂರು ವರ್ಷ ತುಂಬಿದ ವಿಚಾರ ಕೇಳಿ "ಅವರ ಬಗ್ಗೆ ವಿಶೇಷಾಂಕ ತರ್ತೀನಿ" ಅಂತ ಕಾಸೆತ್ತಲು ಹೊರಟಿದ್ದ. ಆ ಪ್ರಾಜೆಕ್ಟ್ ಲಾಗ ಹೊಡೆಯಿತು. ಅವತ್ತು ನಾಪತ್ತೆಯಾದ ದೊಡ್ಮನಿಯವರು ಈಗ ಬ್ರಹ್ಮಾವರ ಪ್ರಾಂತ್ಯದಲ್ಲಿ ಸಂಚರಿಸಿ ಮಲ್ಲಿಕಾ ಎಂಬುವವರನ್ನು ಪತ್ತೆಹಚ್ಚಿ ಮದುವೆಯಾಗಿದ್ದಾರೆ.

ಮಜಾ ಅಂದರೆ "ಯಾರ್ರಿ ಈ ಮಹಾನ್ ಪತ್ರಕರ್ತ ದೊಡ್ಮನಿ" ಅಂತ ಪತ್ರಕರ್ತ ಗೆಳೆಯರನ್ನು ಕೇಳಿದರೆ "ಓ.... ಅವನನ್ನು ಸಹಿಸಿಕೋಬಹುದು, ಇನ್ನೂ ಖರಾಬ್ ಪತ್ರಕರ್ತರೂ ಇದ್ದಾರೆ. ಕೈಲಿ ಒಂದು ಪತ್ರಿಕೆ ಅಂತಾ ಇರದಿದ್ದರೂ ಪ್ರೆಸ್‌ಕ್ಲಬ್‌ನಲ್ಲಿ ಕೂತು ದರ್ಬಾರ್ ಮಾಡ್ತಾರ್ಯೆ" ಅಂದು ಬಿಟ್ಟರು. ಮದುವೆಯಂಥ ಶುಭಕಾರ್ಯ ನಡೆಯುವಾಗ ಶುಭ ಅಂತ ನಾಲ್ಕು ಒಳ್ಳೇ ಮಾತಾಡಬೇಕಲ್ವ,

ಈ ದೊಡ್ಮನಿಯನ್ನು ಮದುವೆಯಾಗಿರುವ ಮಲ್ಲಿಕಾರವರಿಗೆ ಒಳ್ಳೆಯದಾಗಲಿ. ಈ ದಡ್ಮನಿಯ ಪತ್ರಿಕಾ ಚೇಷ್ಟೆಗಳನ್ನು, ಹುಂಬತನಗಳನ್ನು ಅರಗಿಸಿ ಕೊಂಡು ಆತನಿಗೆ ಸದ್ಬುದ್ಧಿ ಬರುವಂತೆ, ಸನ್ಮಂಗಳವ ನ್ನುಂಟು ಮಾಡುವಂತೆ ಬದಲಾಯಿಸುವ ಶಕ್ತಿ ಆಕೆಗೆ ಬರಲಿ ಅಂತ ಪತ್ರಕರ್ತ ಮಿತ್ರರ ಹಾರೈಕೆ.

'ಒಂದಲ್ಲಾ ಒಂದೂರಿನಲ್ಲಿ' ಎಂಬ ಪತ್ರಿಕೆ

ಲಂಕೇಶರ ಕೊನೆಯ ಕೆಲ ವರ್ಷಗಳಲ್ಲಿ ಅವರ ಗೆಳೆಯರಾಗಿದ್ದ ಮಹಾಬಲಮೂರ್ತಿ ಕೊಡ್ಲೆಕೆರೆ ಒಂದು ಹೊಸ ಪತ್ರಿಕೆ ಮಾಡಲು ಹೊರಟಿದ್ದಾರೆ. ಈ ಪತ್ರಿಕೆಯ ಹೆಸರೇ ವಿಶಿಷ್ಟವಾಗಿದೆ. 'ಒಂದಲ್ಲಾ ಒಂದೂರಿನಲ್ಲಿ' ಎಂದು.

ಸಣ್ಣ ಕತೆಗಳು, ವಿಮರ್ಶೆಗಳು ಮಾತ್ರ ಇದರಲ್ಲಿರುತ್ತವೆ ಎಂದು ಕೊಂಡಿರುವ ಮಹಾಬಲ ಒಂದೂರಿನ ಮೊದಲ ಪ್ರಾಯೋಗಿಕ ಸಂಚಿಕೆ ತಂದಿದ್ದಾರೆ. ಇದರಲ್ಲಿ ಡಾ. ಜಿ.ಎಸ್. ಅಮೂರರ 'ಜರ್ಮನಿಯಲ್ಲೊಂದು ಘಟಶ್ರಾದ್ಧ' ಎಂಬ ಲೇಖನ ಗಮನ ಸೆಳೆಯುವಂತಿದೆ. ಅನಂತಮೂರ್ತಿ ಯವರ 'ಘಟಶ್ರಾದ್ಧ' ಹಾಗೂ ಆಲ್ಡಸ್ ಹಕ್ಸ್ಲೀ ಎಂಬುವನ 'Nuns at Luncheon' ಎಂಬ ಕತೆಯ ನಾಯಕಿಯರ ಏಕಾಂಗಿ ಬದುಕು, ಕ್ರಿಶ್ಚಿಯನ್ ಹಾಗೂ ಹಿಂದೂ ಧರ್ಮ ಸಂಪ್ರದಾಯಗಳ ಕ್ರೌರ್ಯ ಪ್ರಭಾವಗಳನ್ನು ಹೋಲಿಸಿ ಅಮೂರ್ ಚೆನ್ನಾಗಿ ವಿವರಿಸುತ್ತಾರೆ. ಈ ಹೊಸ ಪತ್ರಿಕೆ ಲೇಖನ, ಕತೆಗಳಲ್ಲಿ ಕೆಲ ವಿದೇಶಿಯರ ಫೋಟೋಗಳನ್ನು ಮಹಾಬಲ ಮುದ್ರಿಸಿದ್ದಾರೆ. ಆದರೆ ಯಾಕೆಂದು ಗೊತ್ತಾಗಲಿಲ್ಲ.




'ಒಂದಲ್ಲಾ ಒಂದೂರಿನಲ್ಲಿ' ಹೊಸಬರಿಂದಲೂ ಕತೆ ಬರೆಸಿದರೆ ಪತ್ರಿಕೆಗೆ ಇನ್ನಷ್ಟು ಕಸುವು ಬರಬಹುದು.

ಮಹಾಬಲಮೂರ್ತಿಯವರ ಈ ಪ್ರಯತ್ನಕ್ಕೆ ಯಶ ಸಿಗಲಿ. ಆಸಕ್ತರು ಅವರನ್ನು 9448313270 ನಲ್ಲಿ ಮಾತಾಡಿಸಿ. ●

ಎರಡೂವರೆ ರೂಪಾಯಿಗಳಿಗೆ ತಡಕಾಡಿದ ನೆಹರೂ

ಜಗತ್ತಿನಲ್ಲೇ ಅತಿದೊಡ್ಡ ಪ್ರಜಾಪ್ರಭುತ್ವ ಎಂಬ ಖ್ಯಾತಿ ಪಡೆದಿರುವ ಭಾರತದಲ್ಲಿ ಚುನಾವಣೆಗಳ ಸಂದರ್ಭದಲ್ಲಿ ವಾಸ್ತವವಾಗಿ ನಡೆಯುವುದು ಜನರ ಆಯ್ಕೆಯಲ್ಲ, ಬದಲಾಗಿ ತೋಳ್ಬಲ ಮತ್ತು ಹಣ ಬಲದ ಜಯ. ಇತ್ತೀಚೆಗಂತೂ ಸ್ಥಳೀಯ ಚುನಾವಣೆಗಳಿಗೇ ಲಕ್ಷಾಂತರ ರೂಪಾಯಿಗಳನ್ನು ಸುರಿಸುವ ಅಭ್ಯರ್ಥಿಗಳು ಶಾಸನಸಭೆ ಮತ್ತು ಪಾರ್ಲಿಮೆಂಟಿಗೆ ಕೋಟ್ಯಂತರ ರೂಪಾಯಿಗಳನ್ನು ವೆಚ್ಚ ಮಾಡುತ್ತಾರೆ.



ಆದರೆ ಹಿಂದೆಲ್ಲಾ ಪರಿಸ್ಥಿತಿ ಹೀಗಿರಲಿಲ್ಲ, ಆಗ ಹೇಗಿತ್ತು ಎಂಬುದನ್ನು ಮಹಾತ್ಮಾಗಾಂಧಿಯವರ ಮೊಮ್ಮಗ ಮತ್ತು ಪಶ್ಚಿಮ ಬಂಗಾಳದ ಹಾಲಿ ರಾಜ್ಯಪಾಲ ಗೋಪಾಲಕೃಷ್ಣ ಗಾಂಧಿ ತಮ್ಮ ಲೇಖನವೊಂದರಲ್ಲಿ ನೆನಪಿಸಿ ಕೊಂಡಿದ್ದಾರೆ.

ಅದು 1937 ರಲ್ಲಿ ನಡೆದ ಚುನಾವಣಾ ಪ್ರಚಾರ ಸಂದರ್ಭ. ಅಲಹಾಬಾದಿನ ಕಾಂಗ್ರೆಸ್ ಅಭ್ಯರ್ಥಿಯ ಪರ ಪ್ರಚಾರ ಮಾಡಲು ಜವಹರಲಾಲ್ ನೆಹರೂ ಬಂದಿದ್ದರು. ತಮ್ಮ ಭಾಷಣವನ್ನು ರಾತ್ರಿ 8.30 ಕ್ಕೆ ಮುಗಿಸಿದ ನೆಹರು ಕಾಂಗ್ರೆಸ್ ಅಭ್ಯರ್ಥಿಯತ್ತ ತಿರುಗಿ "ನಾನಿನ್ನು ಹೊರಡಲೇ?" ಎಂದು ಕೇಳಿದರು. ಹೇಗಿದ್ದರೂ ಅವರು ಬಂದಿದ್ದ ಕೆಲಸ ಮುಗಿದಿತ್ತೆಂದು ಆತ "ಓಕೆ ಸಾರ್" ಅಂದ. ಅಲ್ಲಿಂದ ಲಾಲ್‌ಬಹದ್ದೂರ್ ಶಾಸ್ತ್ರಿಯವರೊಂದಿಗೆ ಹೊರಟ ನೆಹರೂ ತುಂಬಾ ಬೇಜಾರು ಮಾಡಿಕೊಂಡಿದ್ದರು. ಅವರಿದ್ದ ಕಾರು ಸುಮಾರು ಒಂದು ಫರ್ಲಾಂಗ್ ದೂರ ಹೋದನಂತರ "ನಾನು ಹೊರಡಲೇ ಎಂದ ಕೂಡಲೇ ನನಗೊಂದು ಕಪ್ ಟೀ ಕೂಡ ಕೊಡದೆ ಕಳುಹಿಸಿದರಲ್ಲ" ಎಂದು ತಮ್ಮ ಬೇಸರವನ್ನು ವ್ಯಕ್ತಪಡಿಸಿ ಹತ್ತಿರದಲ್ಲೇ ಎಲ್ಲಾದರೂ ಟೀ ಸಿಗುತ್ತಾ ಎಂದು ನೆಹರೂ ಕೇಳಿದ್ದಕ್ಕೆ ಶಾಸ್ತ್ರಿಯವರಿಗೆ ರೈಲ್ವೆ ನಿಲ್ದಾಣದಲ್ಲಿರುವ ಹೋಟೆಲ್ ನೆನಪಾಗಿ ಅಲ್ಲಿಗೆ ಟೀ ಕುಡಿಯಲೆಂದು ಹೋಗುತ್ತಾರೆ.


ಎಲ್ಲರೂ ಟೀ ಕುಡಿಯುತ್ತಾರೆ, ಆದರೆ ಬಿಲ್ ಬಂದಾಗ ಅದನ್ನು ಪಾವತಿಸುವುದಕ್ಕೆ ಎಲ್ಲರೂ ತಡಕಾಡುತ್ತಾರೆ. ನೆಹರೂ ಜೇಬಿನಲ್ಲಿ ಒಂದೂಕಾಲು ರೂಪಾಯಿ, ಪೂರ್ಣಿಮಾ ಬ್ಯಾನರ್ಜಿಯವರ ಬಳಿ ಇನ್ನೊಂದು ರೂಪಾಯಿ ಮಾತ್ರ ಇರುತ್ತದೆ. ಶಾಸ್ತ್ರಿಯವರೂ ತಮ್ಮಲ್ಲಿದ್ದ ಒಂದಿಷ್ಟು ಚಿಲ್ಲರೆ ಹಣವನ್ನು ಸೇರಿಸಿ ಬಿಲ್ ಮೊತ್ತವಾದ ಎರಡೂವರೆ ರೂಪಾಯಿಗಳನ್ನು ನೀಡಿ ಅಲ್ಲಿಂದ ಹೊರಡುತ್ತಾರೆ. "ನಮ್ಮಲ್ಲಿ ಎರಡೂವರೆ ರೂಪಾಯಿಗಳು ಇರಲಿಲ್ಲವೆಂದಾಗಿದ್ದರೆ ಎಷ್ಟು ಮುಜುಗರವಾಗುತಿತ್ತು" ಎಂದು ಶಾಸ್ತ್ರಿಯವರು ಹೇಳಿಕೊಂಡಿದ್ದಾರೆ.

ಇವತ್ತು ಲಕ್ಷಾಂತರ, ಕೋಟ್ಯಂತರ ರೂಪಾಯಿಗಳಿಲ್ಲದೆ ನಡೆಯದ ನಮ್ಮ ಚುನಾವಣಾ ಪ್ರಕ್ರಿಯೆ ಈ ದೇಶದ ಪ್ರಜಾಪ್ರಭುತ್ವವನ್ನು ಎಷ್ಟು ಗಟ್ಟಿಗೊಳಿಸಿದೆಯಲ್ಲವೇ?!

ಅದೇ ರಾಗ ಅದೇ ಬುರುಡೆ

ನಮ್ಮ ರಾಜಕಾರಣಿಗಳು ಅಧಿಕಾರದಲ್ಲಿದ್ದಾಗ ಒಂದು ರಾಗ, ವಿರೋಧ ಪಕ್ಷದಲ್ಲಿದ್ದಾಗ ಇನ್ನೊಂದು ರಾಗ ಹಾಡುವುದು ನಮಗೆಲ್ಲ ಗೊತ್ತಿರುವ ವಿಚಾರವಾಗಿದೆ. ಆದರೂ ಅದಕ್ಕೊಂದು ಇತ್ತೀಚಿಗಿನ ಉದಾಹರಣೆಯನ್ನು ಇಲ್ಲಿ ನೀಡುತ್ತಿದ್ದೇವೆ. ಮಹಾರಾಷ್ಟ್ರದ ನೆಲದಲ್ಲೇ ಬೆಳೆದ ಶಿವಸೇನೆ ಎಂಬ ಸ್ಥಳೀಯ ಹಿಂದೂತ್ವವಾದಿ ಸಂಘಟನೆಯು ಅಧಿಕಾರದಲ್ಲಿದ್ದಾಗ ರೈತರ ಸಾಲಮನ್ನಾ ಮಾಡುವುದನ್ನು ವಿರೋಧಿಸಿತ್ತು. ಬೇರೆಯವರೆಲ್ಲ ತಾವು ಪಡೆದ ಸಾಲಗಳನ್ನು ತೀರಿಸುವಾಗ ರೈತರಿಗೇಕೆ ವಿಶೇಷ ರಿಯಾಯಿತಿ ಎಂದು ಶಿವಸೇನೆ ಅಂದು ವಾದಿಸಿತ್ತು.

ಆದರೆ ಈಗ ಅದೇ ಶಿವಸೇನೆ ಭಿನ್ನವಾದ ರಾಗವನ್ನು ಹಾಡುತ್ತಿದೆ. ರೈತರಿಗೆ ಸಾಲಮನ್ನಾ ಮಾಡಬೇಕೆಂದು ಇವತ್ತು ಸೇನೆಯ ನಾಯಕ ಉದ್ಧವ್ ಠಾಕ್ರೆ ವಾದಿಸುತ್ತಿದ್ದಾನೆ. ಇದಕ್ಕೆ ಕಾರಣವೂ ಇದೆ. ಈಗ ಅಧಿಕಾರ ಕಳೆದು ಕೊಂಡಿರುವ ಶಿವಸೇನೆ ಮತ್ತೆ ಅಧಿಕಾರಕ್ಕೆ ಬರಬೇಕೆಂದಿದ್ದರೆ ಅದಕ್ಕೆ ಮಹಾರಾಷ್ಟ್ರದ ರೈತರ ಓಟುಗಳು ಬೇಕಿದೆ!


ಉದ್ಧವ್ ಠಾಕ್ರೆ

ಅಂದಹಾಗೆ ಹೀಗೆ ರಾಗ ಬದಲಿಸಿದವರಲ್ಲಿ ಶಿವಸೇನೆ ಮೊದಲನೆಯದೂ ಅಲ್ಲ, ಕೊನೆಯದೂ ಅಲ್ಲ, ಆಂಧ್ರದ ಚಂದ್ರಬಾಬು ನಾಯ್ಡು ಕೂಡ ಅಧಿಕಾರದಲ್ಲಿದ್ದಾಗ ತಾನು ರಾಜ್ಯದ ಸಿಇಓ ಎಂಬಂತೆ ಪೋಸು ಕೊಡುತ್ತಿದ್ದ, ಆದರೆ ಅಧಿಕಾರ ಕಳೆದುಕೊಂಡ ನಂತರ ತಾನು ಮಣ್ಣಿನ ಮಗ ಎಂಬಂತೆ 'ರೈತರ ಪರ'ವಾಗಿ ಹೂಂಕರಿಸುತ್ತಿದ್ದಾನೆ.

ಅಷ್ಟು ದೂರ ಯಾಕೆ? ನಮ್ಮ ಚೆಲುವ ಕನ್ನಡನಾಡಿನಲ್ಲೂ ಅಧಿಕಾರದಲ್ಲಿದ್ದಾಗ ಜನವಿರೋಧಿಗಳಾಗಿ ವರ್ತಿಸಿದವರೂ, ಅಧಿಕಾರದಿಂದ ಕಿತ್ತೊಗೆಯಲ್ಪಟ್ಟ ನಂತರ ಮಣ್ಣಿನ ಮಕ್ಕಳಂತೆ ವರ್ತಿಸುವ ರಾಜಕಾರಣಿಗಳೂ ಇದ್ದಾರೆ. ಆದರೆ ನಮ್ಮ ರಾಜ್ಯದ ದುರಂತ ಯಾವುದೆಂದರೆ ಇಂತಹ ಬುರುಡೇ ದಾಸರು ಎಲ್ಲಾ ರಾಜಕೀಯ ಪಕ್ಷಗಳಲ್ಲಿದ್ದಾರೆ. ಜೈಕನ್ನಡಾಂಬೆ!

ರೊಟ್ಟಿಯ ಹಸಿವನ್ನು ನೀಗಿಸುವುದಕ್ಕಿಂತ ಪ್ರೇಮದ ಹಸಿವನ್ನು ನೀಗಿಸುವುದು ಕಷ್ಟಕರ -ಮದರ್ ಥೆರೆಸಾ

ಒಂದು ನದಿಯ ಬೆಲೆ ಎಷ್ಟು?

ಒಂದು ನದಿಯ ಮ್ಯಾಕ್ಸಿಮಮ್ ರೀಟೈಲ್ ರೇಟ್ ಎಷ್ಟು?

ಸಾವಿರಾರು ಹೆಕ್ಟೇರ್ ಜಮೀನುಗಳಿಗೆ ನೀರುಣಿಸುವ, ಲಕ್ಷಾಂತರ ಜನರಿಗೆ ಕುಡಿಯುವ ನೀರನ್ನು ಒದಗಿಸುವ, ಹಲವು ಜಿಲ್ಲೆಗಳ ಸಾಮಾಜಿಕ ಮತ್ತು ಆರ್ಥಿಕ ಬೆನ್ನೆಲುಬಾಗಿರುವ ನದಿಯೊಂದರ ಬೆಲೆಯನ್ನು ನಿಗದಿ ಪಡಿಸುವುದು ಹೇಗೆ?

ಕಾವೇರಿ ನದಿಯ ಬೆಲೆ ಎಷ್ಟು? ಕೃಷ್ಣೆಯ ಮೌಲ್ಯವೆಷ್ಟು? ತುಂಗೆ, ಭದ್ರೆಯರನ್ನು ಎಷ್ಟು 'ದಕ್ಷಿಣೆ'ಗೆ



ಮಾರುತ್ತೇವೆ?

ಈ ಪ್ರಶ್ನೆಗಳು ನಿಮಗೆ ಅಸಂಬದ್ಧವಾಗಿ ಕಾಣಿಸಬಹುದು. ಆದರೆ ಬರುವ ದಿನಗಳಲ್ಲಿ ಹೀಗೆ ನಮ್ಮ ರಾಜ್ಯದ ನದಿಗಳನ್ನೇ ಸರ್ಕಾರಗಳು ಖಾಸಗಿ ಕಂಪನಿಗಳಿಗೆ ಮಾರುವ ಸಾಧ್ಯತೆ ಇರುವುದರಿಂದ ಇಲ್ಲಿ ಉಲ್ಲೇಖಿಸಲಾಗಿದೆ. ಯಾಕೆಂದರೆ ಜನರ ಬದುಕಿಗೆ, ಈ ಭೂಮಿಯ ಉಳಿಯುವಿಕೆಗೆ ಅತಿ ಮುಖ್ಯವಾಗಿರುವ ನೀರನ್ನು, ನದಿಗಳನ್ನು ಮಾರುವ ಪ್ರಕ್ರಿಯೆಗಳು ನಮ್ಮ ದೇಶದ ಹಲವಾರು ಕಡೆ ಈಗಾಗಲೇ ನಡೆದಿದ್ದು ನಾಳೆ ಕರ್ನಾಟಕದಲ್ಲೂ ಸಂಭವಿಸುವ ಎಲ್ಲಾ ಸೂಚನೆಗಳೂ ಇವೆ.

ಇದಕ್ಕೊಂದು ಲೇಟೆಸ್ಟ್ ಉದಾಹರಣೆ ಯಾವುದೆಂದರೆ ಮಹಾರಾಷ್ಟ್ರದ ಜಲ ಸಂಪನ್ಮೂಲ ಸಚಿವ ರಾಮರಾಜೆ ನಾಯ್ಕ ನಿಂಬಾಳ್ಕರ್ ಎಂಬಾತ ಅಲ್ಲಿನ ಪ್ರಮುಖ ನದಿಗಳಲ್ಲಿ ಒಂದಾಗಿರುವ, 208 ಕಿ.ಮೀ. ಉದ್ದಕ್ಕೂ ಹರಿಯುವ, ನಾಲ್ಕು ಜಿಲ್ಲೆಗಳ ಜೀವಾಳವಾಗಿರುವ ನಿರಾ ಎಂಬ ನದಿಯನ್ನೇ ಖಾಸಗಿ ಕಂಪನಿಗೆ ಮಾರಲು ಸಿದ್ಧತೆ ನಡೆಸಿರುವುದು. ಕೇವಲ ಒಂದು ಸಾವಿರ ಕೋಟಿ ರೂಪಾಯಿಗಳನ್ನು ನೀಡಿದರೆ ಅಲ್ಲಿನ ಸರ್ಕಾರವು ನಿರಾ ನದಿಯನ್ನು, ಅದಕ್ಕೆ ನಿರ್ಮಿಸಿರುವ ಅಣೆಕಟ್ಟು ಮತ್ತು ಚಾನೆಲ್ಲುಗಳ ಸಹಿತ ಖಾಸಗಿಯವರಿಗೆ ನೀಡಲಿದೆ. ಈಗಾಗಲೇ ಈ ನದಿಯನ್ನು ಖರೀದಿಸಲು ನಾಲ್ಕು ಖಾಸಗಿ ಕಂಪನಿಗಳು ಮುಂದಾಗಿವೆ.

ಜನ ಪ್ರತಿನಿಧಿಗಳ ಸರ್ಕಾರವೇ, ಜನರನ್ನು ಕೇಳದೇ ಹೀಗೆ ನದಿಯೊಂದನ್ನು ಖಾಸಗಿಯವರಿಗೆ ಮಾರುವುದಕ್ಕೆ ಮುಂದಾಗಿರಲು ಕಾರಣವೇನು? ಉತ್ತರ ಸರಳ: ದೇಶದ ಜಲಸಂಪನ್ಮೂಲವನ್ನು ಖಾಸಗೀಕರಿಸುವುದು ನಮ್ಮ ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳಲ್ಲಿ ಒಂದು! ಮತ್ತು ವಿಶ್ವಬ್ಯಾಂಕ್, ಐಎಂಎಫ್ ಮತ್ತು ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಂತಹ ಸಂಸ್ಥೆಗಳಿಂದ ನಾವು ಸಾಲ ಪಡೆಯಬೇಕೆಂದರೆ ಅವರು ವಿಧಿಸುವ ಷರತ್ತುಗಳಲ್ಲಿ ನದಿಗಳನ್ನು ಖಾಸಗೀಕರಿಸುವುದು ಪ್ರಮುಖ!

ಈಗಾಗಲೇ ಜಾಗತೀಕರಣ, ಉದಾರಿಕರಣ ಮತ್ತು ಖಾಸಗೀಕರಣ ಎಂಬ ಮೂರು ಮಂತ್ರಗಳ ಭರಾಟೆಯಲ್ಲಿ ನಮ್ಮ ದೇಶದ ನೈಸರ್ಗಿಕ ಸಂಪತ್ತನ್ನು ಖಾಸಗಿ ಕಂಪನಿಗಳಿಗೆ ಮಾರಾಟ ಮಾಡಲಾಗಿದೆ. ಇವತ್ತು ಅದಿರಿನ ಮಾರಾಟದಿಂದ ರಾಜ್ಯ ಬೊಕ್ಕಸಕ್ಕೆ ಚಿಲ್ಲರೆ ಕಾಸು ಬರುತ್ತಿದ್ದರೂ ಹಲವಾರು ಗಣಿ ಧಣಿಗಳು ಜನ್ಮವೆತ್ತಿದ್ದಾರೆ. ವಿದ್ಯುಚ್ಛಕ್ತಿಯಿಂದ ಹಿಡಿದು ರಸ್ತೆಗಳ ತನಕ ಖಾಸಗಿಯವರಿಗೆ ನೀಡಲಾಗಿದೆ. ಒಂದೆಡೆ SEZ ಗಳಿಗೆ ಸಾವಿರಾರು ಎಕರೆ ಕೃಷಿ ಭೂಮಿಯನ್ನು ನೀಡುತ್ತಿದ್ದರೆ, ಇನ್ನೊಂದೆಡೆ ಖಾಸಗಿ ನಗರಗಳನ್ನೇ ನಿರ್ಮಿಸಿಕೊಳ್ಳಲು ಅನುಮತಿ ನೀಡಲಾಗುತ್ತಿದೆ. ಹಾಗೆಯೇ ನೀರನ್ನೂ ಖಾಸಗಿ ಕಂಪನಿಗಳ ಹಿಡಿತಕ್ಕೆ ವರ್ಗಾಯಿಸಲಾಗುತ್ತಿದೆ. ಅಂದರೆ ದೇಶವನ್ನೇ, ಅದರಲ್ಲಿನ ಸಂಪತ್ತನ್ನೇ, ಬಿಡಿಬಿಡಿಯಾಗಿ ಬಿಕರಿ ಮಾಡಲಾಗುತ್ತಿದೆ.

ಜಗತ್ತಿನಾದ್ಯಂತ ಇವತ್ತು ನೀರಿನ ಬೇಡಿಕೆ ಎಷ್ಟು ಹೆಚ್ಚುತ್ತಿದೆ ಎಂದರೆ, ಜನಸಂಖ್ಯೆಗಿಂತ ದುಪ್ಪಟ್ಟು ವೇಗದಲ್ಲಿ ಏರುತ್ತಿದೆ. ಅಷ್ಟೇ ಅಲ್ಲ, ಜಾಗತಿಕವಾಗಿ ನೀರಿನ 'ಉದ್ಯಮ'ದ ಮಾರುಕಟ್ಟೆ ವಹಿವಾಟು ಸುಮಾರು 500 ಬಿಲಿಯನ್ ಡಾಲರ್‌ನಷ್ಟಿದ್ದು, ಭಾರತದಲ್ಲೇ ಅದು ಎರಡು ಬಿಲಿಯನ್ ಡಾಲರ್ ಉದ್ಯಮವಾಗಿದೆ. ಈ ಕಾರಣದಿಂದಾಗಿಯೇ 'ಫಾರ್ಚೂನ್' ಎಂಬ ಪತ್ರಿಕೆ ನೀರನ್ನು '21 ನೇ ಶತಮಾನದ ತೈಲ' ಎಂದು ವರ್ಣಿಸಿದೆ. ಇಷ್ಟು ದೊಡ್ಡ ಮೊತ್ತದ 'ಉದ್ಯಮ'ವನ್ನು ತಮ್ಮದಾಗಿಸಿಕೊಳ್ಳಲು ಖಾಸಗಿ ಕಂಪನಿಗಳು ಮುಂದಾಗಿದ್ದರೆ, ಅವುಗಳಿಗೆ ಈ ದೇಶದ ಸಂಪತ್ತನ್ನೇ ಧಾರೆ ಎರೆಯಲು ನಮ್ಮ ಘನ ಸರ್ಕಾರಗಳು ಸಜ್ಜಾಗಿ ನಿಂತಿವೆ.

ನಮ್ಮ ದೇಶದಲ್ಲಿ ಹೀಗೆ ನದಿಯೊಂದನ್ನು ಖಾಸಗಿ ಕಂಪನಿಗೆ ಪ್ರಥಮವಾಗಿ ಮಾರಿದ್ದು ಛತ್ತೀಸ್‌ಘಡದ ಸರ್ಕಾರ. ಶಿವನಾಥ್ ಎಂಬ ನದಿಯ 23 ಕಿ.ಮೀ. ಹರಿವನ್ನು ರೇಡಿಯಸ್ ವಾಟರ್ ಎಂಬ ಕಂಪನಿಗೆ 22 ವರ್ಷಗಳ ಗುತ್ತಿಗೆಯ ಮೇಲೆ ನೀಡಲಾಗಿತ್ತು. ಅಷ್ಟೇ ಅಲ್ಲ ಈ ಕಂಪನಿಯು ಸ್ಥಾಪಿಸಲಿದ್ದ ಯೋಜನೆಯನ್ನು ನಿರ್ವಹಿಸಲು ರಾಜ್ಯದ ಕೈಗಾರಿಕಾ ಅಭಿವೃದ್ಧಿ ಮಂಡಳಿಗೆ ಆರ್ಥಿಕ ಶಕ್ತಿ ಇಲ್ಲ ಎಂದು ನೆಪ ನೀಡಿದ್ದ ಮಂಡಳಿಯೇ ಅದೇ ಯೋಜನೆಯನ್ನು ನಿರ್ವಹಿಸಲು



ರೇಡಿಯಸ್ ವಾಟರ್ ಕಂಪನಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಿತ್ತು!

ಈ ಇಡೀ ವಹಿವಾಟು ಎಷ್ಟು ಅಸಂಬದ್ಧತೆಗಳಿಂದ ಕೂಡಿತ್ತೆಂದರೆ ಒಂದೆಡೆ ನದಿಯ ಹತ್ತಿರ ವಾಸಿಸುತ್ತಿದ್ದ ಜನರಿಗೆ ಕುಡಿಯುವ ನೀರನ್ನೂ ನಿರಾಕರಿಸಲಾಗಿತ್ತಲ್ಲದೆ, ಒಪ್ಪಂದದ ಪ್ರಕಾರ ಸ್ಥಳೀಯ ಕಾರ್ಖಾನೆಗಳು ಬಳಸದೇ ಇದ್ದ ನೀರಿಗೂ ಅಲ್ಲಿನ ಸರ್ಕಾರ ಹಣ ತೆರುವಂತಾಗಿತ್ತು.

ಕೊನೆಗೆ ಈ ಯೋಜನೆ ವಿರುದ್ಧ ದೊಡ್ಡ ಆಂದೋಲನ ಸೃಷ್ಟಿಯಾಗಿ ರೇಡಿಯಸ್ ವಾಟರ್‌ನೊಂದಿಗಿನ ಒಪ್ಪಂದವನ್ನು ರದ್ದು ಮಾಡಲಾಯಿತು. ಆದರೆ ಎರಡು ವರ್ಷಗಳಲ್ಲಿ ರಾಜ್ಯ ಬೊಕ್ಕಸದಿಂದ ರೇಡಿಯಸ್ ವಾಟರ್ ಸಂಸ್ಥೆಗೆ ಸುಮಾರು ಒಂದು ಕೋಟಿ ಮೂವತ್ತು ಲಕ್ಷ ರೂಪಾಯಿಗಳನ್ನು ಪಾವತಿಸಲಾಗಿತ್ತಲ್ಲದೆ, ಒಪ್ಪಂದವನ್ನು ಮುರಿದಿದ್ದಕ್ಕೆ ದಂಡವನ್ನು ತೆರಬೇಕಾಯಿತು. ಹೀಗೆ ಜನರ ಹಣವನ್ನು ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕೆ ಪೋಲು ಮಾಡಿದ್ದರು.


ಎರಡು ವರ್ಷಗಳ ಹಿಂದೆ ADB ಯೋಜನೆಯಡಿ ಬಿಲಾಸ್ಪುರ್ ಡ್ಯಾಮ್‌ನಿಂದ ಜೈಪುರ ನಗರಕ್ಕೆ ನೀರು ಸರಬರಾಜು ಮಾಡುತ್ತಿರುವುದನ್ನು ವಿರೋಧಿಸಿ, ತಮ್ಮ ಭೂಮಿಗೂ ನೀರನ್ನು ನೀಡಬೇಕೆಂದು ಒತ್ತಾಯಿಸಿ ರಾಜಸ್ಥಾನದ ಟಾಂಕ್ ಪ್ರದೇಶದ ರೈತರು ಪ್ರತಿಭಟಿಸಲಾರಂಭಿಸಿದರು. ಅವರ ಮೇಲೆ ಪೊಲೀಸರನ್ನು ಛೂ ಬಿಟ್ಟ ರಾಜಸ್ಥಾನದ ಬಿಜೆಪಿ ಸರ್ಕಾರ ಪ್ರತಿಭಟನಾನಿರತ ಐವರು ರೈತರನ್ನು ಕೊಂದು ಹಾಕಿತ್ತು. ಈ ಕಗ್ಗೊಲೆಯನ್ನು ಖಂಡಿಸಲು ಟಾಂಕ್ ಪ್ರದೇಶಕ್ಕೆ ಧಾವಿಸಿದ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಹತರಾದ ರೈತರ ಸಂಸಾರಗಳಿಗೆ ಪರಿಹಾರ ಧನವನ್ನು ನೀಡಿ ಹಿಂದಿರುಗಿದ್ದರು.

ಆದರೆ ಅದೇ ಹೊತ್ತಿಗೆ ಸೋನಿಯಾ ಗಾಂಧಿಯವರದ್ದೇ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದ ದೆಹಲಿಯ ಸರ್ಕಾರ ರಾಜಧಾನಿಯ ನೀರು ಸರಬರಾಜು ವ್ಯವಸ್ಥೆಯನ್ನು ಸುಯೆಜ್ ಎಂಬ ಫ್ರೆಂಚ್ ಕಂಪನಿಗೆ ಎರಡು ಮಿಲಿಯನ್ ಡಾಲರ್ ಮೊತ್ತಕ್ಕೆ ಹತ್ತು ವರ್ಷಗಳ ಅವಧಿಗೆ ಮಾರಿತ್ತು. ಅದೂ ಎಂತಹ ಒಪ್ಪಂದದ ಪ್ರಕಾರ? ಸುಯೆಜ್ ಕಂಪನಿಗೆ ದೆಹಲಿ ಜಲಮಂಡಳಿ ಜಾಗ, ವಿದ್ಯುತ್ ಮತ್ತು ಶುದ್ಧೀಕರಣದ ವೆಚ್ಚವನ್ನು ನೀಡುತ್ತದಲ್ಲದೆ, ಪ್ರತಿದಿನ ಗಂಗಾ ನದಿಯಿಂದ 635 ಮಿಲಿಯನ್ ಲೀಟರ್ ನೀರನ್ನೂ ನೀಡುತ್ತದೆ. ಅಷ್ಟೇ ಅಲ್ಲ, ಅದೇ ನೀರನ್ನು ದೆಹಲಿ ಜಲಮಂಡಳಿಯು ಹೆಚ್ಚು ದರವನ್ನು ನೀಡಿ ಸುಯೆಜ್‌ನಿಂದ ಖರೀದಿಸಿ ಜನರಿಗೆ ಸರಬರಾಜು ಮಾಡುತ್ತದೆ. ಈ ಮಧ್ಯೆ ಸುಯಜ್ ಕಂಪನಿಗೆ (ಒಪ್ಪಂದದ ಪ್ರಕಾರವೇ) ಲಾಭವಾಗಲೆಂದು ನೀರಿನ ಬೆಲೆಯನ್ನು ಹತ್ತುಪಟ್ಟು ಹೆಚ್ಚಿಸಿದೆ.

ನೀರು, ವಿದ್ಯುತ್, ಜಾಗ, ಹಣ ಎಲ್ಲವೂ ನಮ್ಮದು. ಆದರೆ ಲಾಭ ಮಾತ್ರ ಸುಯಜ್ ಕಂಪನಿಗೆ; ನಷ್ಟ ದೆಹಲಿಯ ಪ್ರಜೆಗಳಿಗೆ. ಇದೆಂತಹ ನ್ಯಾಯ? ಎಂತಹ ಒಪ್ಪಂದ?

ಖಾಸಗೀಕರಣದ ಪ್ರತಿಪಾದಕರ ಪ್ರಕಾರ ಸರ್ಕಾರಿ ಇಲಾಖೆಗಳಿಂದ ಕುಡಿಯುವ ನೀರಿನ ಸರಬರಾಜನ್ನು ವ್ಯವಸ್ಥಿತವಾಗಿ ಮಾಡಲಾಗುವುದಿಲ್ಲ. ಆದ್ದರಿಂದ ಅವುಗಳನ್ನು ಖಾಸಗಿಯವರಿಗೆ ನೀಡಿದರೆ ಅವರು ಅದನ್ನು ಸರಿಯಾಗಿ ನಡೆಸಿಕೊಂಡು ಹೋಗುತ್ತಾರೆ. ಹಾಗೆಯೇ ಅವರು ನೀಡುವ ಮತ್ತೊಂದು ನೆಪ ಯಾವುದೆಂದರೆ ಕಡಿಮೆ ದರದಲ್ಲಿ ಸರ್ಕಾರಿ ಸಂಸ್ಥೆಗಳು ನೀರನ್ನು ಒದಗಿಸುವುದರಿಂದ ಜನ ಅದರ ಮೌಲ್ಯವನ್ನು ಅರ್ಥ ಮಾಡಿಕೊಳ್ಳದೆ ಪೋಲು ಮಾಡುತ್ತಾರೆ. ಖಾಸಗಿ ಕಂಪನಿಗಳು ನೀರಿನ ದರವನ್ನು ಏರಿಸುವುದರಿಂದ ಜನರು ಸಹಜವಾಗಿಯೇ ಅದನ್ನು ಸದ್ಬಳಕೆ ಮಾಡುತ್ತಾರೆ.

ವಾಸ್ತವವಾಗಿ ಇದ್ಯಾವುದೂ ಸತ್ಯವಲ್ಲ. ಯಾಕೆಂದರೆ ದೆಹಲಿ ಸೇರಿದಂತೆ ಇತರ ದೇಶಗಳ ನಗರಗಳಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ನೀರು ಸರಬರಾಜು ಮಾಡುವಲ್ಲಿ ಖಾಸಗಿ ಕಂಪನಿಗಳು ಸರ್ಕಾರಿ ಸಂಸ್ಥೆಗಳಿಗಿಂತ ಹೆಚ್ಚಿನ ದಕ್ಷತೆಯನ್ನೇನು ಪ್ರದರ್ಶಿಸಿಲ್ಲ. ಅಷ್ಟೇ ಅಲ್ಲ, ಭಾರತದಂತಹ ದೇಶಗಳಲ್ಲಿ ಕುಡಿಯುವ ನೀರಿನ ಬೆಲೆಯನ್ನು ಹೆಚ್ಚಿಸಿದ್ದರಿಂದ ಅಸಂಖ್ಯಾತ ಬಡ ಜನರಿಗೆ ಶುದ್ಧವಾದ ಕುಡಿಯುವ ನೀರೂ ಕೈಗೆಟುಕದಂತಾಗಿದೆ.



ಇವತ್ತು ನದಿಗಳನ್ನು ಮಾತ್ರವಲ್ಲ, ಅಂತರ್ಜಲವನ್ನೂ ಖಾಸಗೀಕರಿಸಲಾಗುತ್ತಿದೆ. ಉದಾಹರಣೆಗೆ ಆಂಧ್ರದ ಕಮ್ಮಮ್ ಜಿಲ್ಲೆ ಚಿನ್ನೈ ಹತ್ತಿರವಿರುವ ಅಥೂರ್ ಹಳ್ಳಿ ಮತ್ತು ಕೇರಳ ಪ್ಲಾಚಿಮಾಡದಲ್ಲಿ ಕೋಕಕೋಲಾ ಕಂಪನಿಗೆ ಅಂತರ್ಜಲವನ್ನು ಉಪಯೋಗಿಸುವ ಹಕ್ಕನ್ನು ನೀಡಲಾಗಿದೆ. ಅದರಲ್ಲೂ ಪ್ಲಾಚಿಮಾಡದ ಸಮೃದ್ಧ ಕೃಷಿ ಭೂಮಿಯನ್ನು ಕೋಕಾಕೋಲಾ ಕಂಪನಿಗೆ ನೀಡಲಾಗಿತ್ತಲ್ಲದೆ ಅದರ ಹತ್ತಿರದಲ್ಲೇ ಹಲವಾರು ಜಲಾಶಯ ಮತ್ತು ಚಾನಲ್‌ಗಳಿದ್ದು ಪ್ರತಿದಿನ ಒಂದು ಮಿಲಿಯನ್ ಲೀಟರ್‌ನಷ್ಟು ನೀರನ್ನು ಆ ಕಂಪನಿಯು ಹೊರತೆಗೆಯುತ್ತಿತ್ತು. ಇದರಿಂದಾಗಿ ಎರಡು ಸಾವಿರ ಜನ ಅವಲಂಭಿಸಿದ್ದ ಸುತ್ತಮುತ್ತಲಿನ ಕೃಷಿ ಭೂಮಿ ಬರಡಾಯಿತಲ್ಲದೆ ಹತ್ತಿರದಲ್ಲಿನ ಬಾವಿಗಳೂ ಬತ್ತಿಹೋದವು. ಅಷ್ಟೇ ಅಲ್ಲದೆ, ಅಷ್ಟೊಂದು ಪ್ರಮಾಣದಲ್ಲಿ ಕೋಕಾಕೋಲಾ ಕಂಪನಿಯು ನೀರನ್ನು ತೆಗೆಯುತ್ತಿದ್ದರಿಂದ ಸ್ಥಳೀಯ ಬಾವಿಗಳಲ್ಲಿ ಕ್ಯಾಲ್ಸಿಯಂ ಮತ್ತು ಮ್ಯಾಗ್ನೇಶಿಯಂ ಪ್ರಮಾಣ ಹೆಚ್ಚಾಗಿದ್ದು ಜನರ ಆರೋಗ್ಯ ಕೆಡಲಾರಂಭಿಸಿತು. ಕೊನೆಗೆ ಪ್ಲಾಚಿಮಾಡದ ಜನ ತೀವ್ರತರವಾದ ಪ್ರತಿರೋಧವನ್ನು ವ್ಯಕ್ತಪಡಿಸಿದ್ದರಿಂದ ಕೋಕಾಕೋಲಾ ಅಲ್ಲಿ ತನ್ನ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿ ತಮಿಳುನಾಡಿಗೆ ವಲಸೆ ಹೋಯಿತು. ಆದರೆ ಈಗ ತಮಿಳುನಾಡಿನಲ್ಲೂ ಕೋಕಾಕೋಲಾ ವಿರುದ್ಧ ಜನ ಪ್ರತಿಭಟಿಸಲಾರಂಭಿಸಿದ್ದಾರೆ.

ಜನರನ್ನು ಸಂಕಷ್ಟಕ್ಕೆ ದೂಡುತ್ತಿರುವ, ವ್ಯಾಪಕ ವಿರೋಧಕ್ಕೆ ಗುರಿಯಾಗಿರುವ ನೀರಿನ ಖಾಸಗೀಕರಣ



ಕಂಡಹಾಗೆ

ನೀತಿಯನ್ನು ನಮ್ಮ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈಗಲೂ ಯಾಕೆ ಮುಂದುವರೆಸುತ್ತಿವೆ ಎಂಬುದಕ್ಕೆ ಕಾರಣ ಇದೆ. ಅದು ವಿಶ್ವಬ್ಯಾಂಕ್, IMF ಮತ್ತು ADB ದಂತಹ ಸಂಸ್ಥೆಗಳ ಒತ್ತಾಯ. ಭಾರತದಂತಹ ದೇಶಗಳಿಗೆ 'ಅಭಿವೃದ್ಧಿಗೆಂದು' ಬಿಲಿಯನ್ ಗಟ್ಟಲೆ ಡಾಲರ್‌ಗಳನ್ನು ಸಾಲದ ರೂಪದಲ್ಲಿ ನೀಡುವ ಈ ಸಂಸ್ಥೆಗಳು ನೀರು ಮತ್ತು ವಿದ್ಯುತ್‌ನಂತಹ ಸಾರ್ವಜನಿಕ ಸೇವೆಗಳನ್ನು ಖಾಸಗೀಕರಿಸಬೇಕೆಂಬ ಷರತ್ತು ವಿಧಿಸುತ್ತವೆ. ಅಷ್ಟೇ ಅಲ್ಲ, ಅವುಗಳು ಖಾಸಗಿ ಕಂಪನಿಗಳ ಪಾಲಾದ ನಂತರ ಈ ಕಂಪನಿಗಳು ಲಾಭವನ್ನು ಕಾಣುವಂತೆ ಒಪ್ಪಂದವನ್ನು ಮಾಡಿಕೊಳ್ಳಬೇಕು ಎಂದೂ ಆದೇಶಿಸುತ್ತವೆ. ಅಕಸ್ಮಾತ್ ಜನವಿರೋಧದಿಂದಾಗಿ ಅಂತಹ ಒಪ್ಪಂದಗಳನ್ನು ರದ್ದುಗೊಳಿಸಿದರೆ ಸರ್ಕಾರದ ವಿರುದ್ಧವೇ 'ಕಾನೂನಿನ' ಕ್ರಮ ತೆಗೆದುಕೊಳ್ಳುವಂತೆ ಈ ಸಂಸ್ಥೆಗಳು ಎಚ್ಚರ ವಹಿಸುತ್ತವೆ.

ಈಗಾಗಲೇ ಭಾರತದ ಅಭಿವೃದ್ಧಿಗೆಂದು ಅಪಾರ ಸಾಲ ಪಡೆದಿರುವ ಭಾರತದ ಸರ್ಕಾರ ವಿಶ್ವಬ್ಯಾಂಕ್ ನಿಯಮದಂತೆ ತನ್ನ ನ್ಯಾಷನಲ್ ವಾಟರ್ ಪಾಲಿಸಿಯನ್ನು ಬದಲಾಯಿಸಿಕೊಂಡಿದೆಯಲ್ಲದೆ, ನೀರಿನ ಖಾಸಗೀಕರಣವನ್ನು ಪ್ರೋತ್ಸಾಹಿಸುತ್ತಿದೆ. ಅಂದಹಾಗೆ ಈ ನ್ಯಾಷನಲ್ ವಾಟರ್ ಪಾಲಿಸಿಯು ನದಿಗಳ ಜೋಡಣೆಯನ್ನೂ ಮುಕ್ತಕಂಠದಿಂದ ಬೆಂಬಲಿಸುತ್ತದೆ. ಮೇಲುನೋಟಕ್ಕೆ ನದಿ ಜೋಡಣೆ ಯೋಜನೆಯ ಉದ್ದೇಶವು ಬರಪೀಡಿತ ಪ್ರದೇಶಗಳಿಗೆ ನೀರನ್ನು ಹರಿಸುವುದಾಗಿದ್ದರೂ, ಅದರ ಅಂತರಾಳದಲ್ಲಿ ನೀರಿನ ಖಾಸಗೀಕರಣ ಉದ್ದೇಶವೇ ಅಡಗಿದೆ.

ಈ ಎಲ್ಲ ಕಾರಣಗಳಿಂದಾಗಿಯೇ ಮೊದಲೇ ಕೇಳಿದ್ದು ಕಾವೇರಿ ನದಿಯ ರೇಟು ಎಷ್ಟು? ಕೃಷ್ಣೆಯ ಮೌಲ್ಯ




ವೆಷ್ಟು? ತುಂಗ, ಭದ್ರೆಯರ ಬೆಲೆ ಎಷ್ಟು? ಎಂದು.

ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣದಿಂದಾಗಿ ಇವತ್ತು ನಾವು ನಡೆದಾಡುವ ರಸ್ತೆ ನಮ್ಮದಲ್ಲ, ನಾಳೆ ನಾವು ವಾಸಿಸುವ ನಗರವೂ ನಮ್ಮದಲ್ಲ, ನಾಡಿದ್ದು ನಾವು ಕುಡಿಯುವ ನೀರೂ ನಮ್ಮದಲ್ಲ, ಆಚೆ ನಾಡಿದ್ದು ನಾವು ಉಸಿರಾಡುವ ಗಾಳಿಯೂ ನಮ್ಮದಾಗಿರುವುದಿಲ್ಲ, ಇದೆಲ್ಲ ಆದ ನಂತರ ನಮ್ಮ ದೇಶವೂ ನಮ್ಮದಾಗಿರುವುದಿಲ್ಲ.

ಇದೆಲ್ಲವೂ ನಡೆಯುತ್ತಿರುವುದು ಯಾವುದೋ ಸರ್ವಾಧಿಕಾರಿಯ ರಾಜ್ಯದಲ್ಲಲ್ಲ, ಮತ್ತ್ಯಾವುದೋ ಬನಾನ ರಿಪಬ್ಲಿಕ್‌ನಲ್ಲಲ್ಲ, ಬದಲಾಗಿ ಅತಿದೊಡ್ಡ ಪ್ರಜಾಪ್ರಭುತ್ವವಾದ ಭಾರತದಲ್ಲಿ, ಜನರಿಂದ ಆಯ್ಕೆಯಾದ ಜನನಾಯಕರೇ ದೇಶವನ್ನು ಹರಾಜು ಹಾಕುತ್ತಿದ್ದಾರೆ. ಜನ ಮಾತ್ರ ಹೈರಾಣಾಗಿ ಸುಮ್ಮನೆ ನೋಡುತ್ತಿದ್ದಾರೆ....

-ಗೌರಿ ಲಂಕೇಶ್

ಮೈಸೂರ್ ರೋಮಿಯೊ



ಮದುವೆಯಾಗುವುದಾಗಿ ನಂಬಿಸಿ ನೂರಾ ಐವತ್ತಕ್ಕೂ ಹೆಚ್ಚು ಯುವತಿಯರಿಗೆ ವಂಚನೆ, ಆ ಪೈಕಿ ಹಲವರೊಂದಿಗೆ ದೇಹ ಸಂಬಂಧವನ್ನು ಬೆಳೆಸಿಕೊಂಡು ಅವರ ಬದುಕು ನರಕ ಮಾಡಿದ ದ್ರೋಹ, ಮನೆ, ಸೈಟು, ಜಮೀನು ಕೊಡಿಸುವುದಾಗಿ ಮಂಗಳೂರು, ದಾವಣಗೆರೆ, ಬಂಟ್ವಾಳ, ಮೂಡುಬಿದರೆ, ಬೆಂಗಳೂರಿನಲ್ಲಿ ಹತ್ತಾರು ಜನರಿಗೆ ಮೋಸ, ಇದೆಲ್ಲದರ ಒಟ್ಟು ಮೊತ್ತ ಎರಡು ಕೋಟಿಗೂ ಅಧಿಕ.

ಇಷ್ಟೂ ಸಾಲದೆಂಬಂತೆ ಇವನಿಂದ ಮದುವೆಯ ಭರವಸೆ ಪಡೆದು ವಂಚನೆಗೊಳಗಾದ ಹಾಸನದ ಇಬ್ಬರು ಹುಡುಗಿಯರ ಆತ್ಮಹತ್ಯೆ, ಅಸಾಧ್ಯ ಚೀಟರ್ ರಾಮಕೃಷ್ಣನ ಬಯೋಡಾಟಾ ಇದು!


ಆದರೆ ಇದಕ್ಕಿಂತ ದುರಂತ ಇನ್ನೊಂದಿದೆ. ಇಷ್ಟು ಪಾತಕಗಳನ್ನು ಕಳೆದ 15 ವರ್ಷಗಳಿಂದ ಮಾಡಿಕೊಂಡು ಬಂದಿದ್ದ ರಾಮಕೃಷ್ಣನ ಮೇಲೆ ಜುಜುಬಿ 420 ಕೇಸ್ ಹಾಕಿ ಸುಮ್ಮನಾಗಲಾಗಿದೆ.

ಇದು ಮೈಸೂರು ಪೊಲೀಸರ ಕಾರ್ಯವೈಖರಿ!!

ಸಾರಾಂಶದಲ್ಲಿ ಹೇಳಬೇಕೆಂದರೆ ಕರ್ನಾಟಕದ ಇತಿಹಾಸದಲ್ಲೇ ಇಂಥದ್ದೊಂದು ಮಹಾ ಮೋಸ, ವಂಚನೆಗಳ ಘಟನೆ ಒಬ್ಬ ವ್ಯಕ್ತಿಯಿಂದ ಆಗಿರಲಿಲ್ಲ, ಇಂಥ ಪ್ರಕರಣ ಮೇಲೆದ್ದು ಬಂದಾಗ ಎಷ್ಟು ಚುರುಕಿನಿಂದ ತನಿಖೆ ಮಾಡಬೇಕಿತ್ತೊ ಆ ಉತ್ಸಾಹವನ್ನು ಮೈಸೂರು ಪೊಲೀಸರು ಯಾಕೆ ತೋರಿಸುತ್ತಿಲ್ಲ ಎಂಬ ಪ್ರಶ್ನೆ ಮೈಸೂರು ಜನರನ್ನು ಈಗ ಕಾಡುತ್ತಿದೆ.


ಕಳೆದ ನವೆಂಬರ್ 26 ರಂದು ಬೆಂಗಳೂರಿನ ರಾಜರಾಜೇಶ್ವರಿ ನಗರದ ದೇವಸ್ಥಾನದಲ್ಲಿ ಸುಧಾ ಎಂಬ ಹೊಸ ವಧುವಿನ ಜೊತೆ ತನ್ನ ನೂರೈವತ್ತನೆ ಎಂಗೇಜ್‌ಮೆಂಟ್ ಮಾಡಿಕೊಳ್ಳುವಾಗ ಅದೇ ತನ್ನ ಮದುವೆ ಶಿಕಾರಿಯ ಅಂತಿಮ ಘಟ್ಟ ಅಂತ ರಾಮಕೃಷ್ಣನಿಗೆ ಅಂದಾಜಿರಲಿಲ್ಲ, ಅವತ್ತು ಸುಧಾಗೆ ಉಂಗುರ ತೊಡಿಸಿ ಮದುವೆಯಾಗುವ ಆಸೆ ತೋರಿಸಿ ಐವತ್ತು ಸಾವಿರ ಕ್ಯಾಷ್, ನೆಕ್ಲೇಸ್ ಕಿತ್ತುಕೊಂಡು ನಾಪತ್ತೆಯಾಗಿದ್ದ ರಾಮಕೃಷ್ಣ ಆದರೆ ತಾನು ಮೈಸೂರು ಕೃಷಿ ಇಲಾಖೆಯಲ್ಲಿ AEE ಆಗಿದ್ದೇನೆಂದು ಹೇಳಿಕೊಂಡಿದ್ದನಲ್ಲ, ಈ ಹುಡುಗಿ ಸುಧಾ ಏನೋ ಮಾತಾಡಲು ಅವನ ಆಫೀಸ್ ಫೋನ್ ನಂಬರ್ ಪತ್ತೆಹಚ್ಚಿ ಮಾತಾಡಿದ್ದಾಳೆ. ಅಲ್ಲೊಬ್ಬ ರಾಮಕೃಷ್ಣ ಇದ್ದಿದ್ದು ನಿಜ. ಆದರೆ ಅವರು ಮಾಜಿ ಸಚಿವ ವಿ.ಎಚ್. ಗೌಡರ ಅಳಿಯನಾಗಿದ್ದ. ಸುಧಾ ಮಾತಾಡಿದ ವರಸೆ ಕೇಳಿ ಅನುಮಾನಪಟ್ಟ ಅವರು ನೇರ ಆಫೀಸಿಗೇ ಕರೆಸಿಕೊಂಡು ವಿವರ ಕೇಳಿದ್ದಾರೆ. ನಂತರ ಅದನ್ನೇ ಸರಸ್ವತಿಪುರಂ ಪೊಲೀಸರಿಗೂ ತಿಳಿಸಿ ಕಾರು, ಕ್ಯಾಷ್ ಕೊಡುವುದಾಗಿ ಸುಧಾಳಿಂದ ಫೋನ್ ಮೂಲಕ ಹೇಳಿಸಿ ರಾಮಕೃಷ್ಣನಿಗೆ ಬಲೆ ಬೀಸಿದ್ದಾರೆ.

ಈ ವಂಚಕ ಹೇಳಿದಂತೆ ಬಂದೇಬಿಟ್ಟ. ಇನ್ಸ್‌ಪೆಕ್ಟರ್ ಹರೀಶ್ ಕುಮಾರ್, ರವಿ ಹಾಗೂ ಲಕ್ಷ್ಮೀನಾರಾಯಣ್ ಅವನ ಹೆಡಮೂರಿ ಕಟ್ಟಿ ಒದ್ದು ಸ್ಟೇಷನ್ನಿಗೆ ಎಳೆದುಕೊಂಡು ಬಂದರು. ಅವತ್ತು ಅವನ ಮೊಬೈಲು ತಡಕಿದಾಗಲೇ ರಾಮಕೃಷ್ಣನ ಮದುವೆ ಲೀಲಾ ವಿನೋದಗಳ ಹಲವು ಸ್ಯಾಂಪಲ್‌ಗಳು ಸಿಕ್ಕವು.



ಮಂಗಳೂರಿನಲ್ಲಿ ಮನೆ ಕಟ್ಟಿಸಿದ್ದೇನೆ ಎಂದಿದ್ದ ನಕಲಿ ಆಹ್ವಾನಪತ್ರಿಕೆ

ಈ ರಾಮಕೃಷ್ಣ ಟಿ. ನರಸೀಪುರ ತಾಲ್ಲೂಕಿನ ದೊಡ್ಡ ಮೂಳಿಗರವಾಡಿಯವನು. ಹೆಂಡತಿ ಯಶೋದ ಮಂಡ್ಯ ಟೌನ್ ಗುತ್ತಲಿನವಳು. ಇವಳೂ ಕಡಿಮೆ ಏನಲ್ಲ, ಅವತ್ತು ರಾಮಕೃಷ್ಣ ಅರೆಸ್ಟಾದ ತಕ್ಷಣ ಮೈಸೂರು ಕ್ರೈಂ ಬ್ರಾಂಚ್ ಪೊಲೀಸರು ಯಶೋದಾಗೆ ಫೋನ್ ಮಾಡಿ 'ಮನೆ ಅಡ್ರೆಸ್ ಕೊಡಿ' ಅಂದರೆ ಮೈಸೂರಿನ ಬೃಂದಾವನ ಎಕ್ಸ್‌ಟೆನ್‌ಷನ್ ವಿಳಾಸ ಕೊಟ್ಟಿದ್ದಾಳೆ. ಆದರೆ ಆ ಮನೆ ಅವರ ಅಕ್ಕ-ಭಾವನದ್ದು.


ಇನ್ಸ್‌ಪೆಕ್ಟರ್ ಹರೀಶ್ ಮತ್ತು ಲಕ್ಷ್ಮಿನಾರಾಯಣ

ಯಶೋಧಾ ಇದ್ದಿದ್ದು ನಂಜನಗೂಡಿನಲ್ಲಿ, ಇವಳೆಂಥ ಐನಾತಿ ಹೆಂಗಸೆಂದರೆ ಪೊಲೀಸರಿಗೇ ರಾಂಗ್ ಅಡ್ರೆಸ್ ಕೊಟ್ಟು ಕೊನೆಗೆ ಅವರು ನಂಜನಗೂಡಿನ ಮನೆ ಪತ್ತೆ ಮಾಡಿ ಬರುವಷ್ಟರಲ್ಲಿ ಮನೇಲಿದ್ದ ಲಕ್ಷಾಂತರ ಬೆಲೆಯ ಒಡವೆ, ಕ್ಯಾಷ್‌ಗಳನ್ನು ಗುತ್ತಲಿನ ತನ್ನ ತೌರು ಮನೆಗೆ ಸಾಗಿಸಿ ಬಿಟ್ಟಿದ್ದಳು.

ಇದೆಲ್ಲಾ ಗೊತ್ತಾದ ಮೇಲೂ ಪೊಲೀಸರು ಯಶೋದಾಳನ್ನು ಅರೆಸ್ಟ್ ಮಾಡಿಲ್ಲ ಎಂದರೆ ನೀವು ನಂಬುತ್ತೀರಾ?


1993 ರಿಂದಲೂ ಈ ಚೀಟಿಂಗ್ ದಂಧೆ ನ... ಕೊಂಡು ಬಂದಿರುವ ರಾಮಕೃಷ್ಣನ ಜೊತೆ ಅವನ ಹೆಂ... ಯಶೋದ ಮತ್ತು ಶ್ರೀಧರ, ಮಂಜ ಎಂಬುವ... ಶಾಮೀಲಾಗಿ ಅನೇಕರಿಗೆ ವಂಚಿಸಿದ್ದಾರೆ.

ಇಂಥವರಿಗೆ ಪೊಲೀಸರೇಕೆ ದಯೆ ತೋರಿಸುತ್ತಿದ್ದಾರೆ ಅರ್ಥವಾಗುತ್ತಿಲ್ಲ.

ಬಲಿಯಾದವರ ಸಂಕಟ

ಮಂಡ್ಯದ ಮಾಜಿ ಎಂಎ... ಕೃಷ್ಣಪ್ಪನವರ ಬಾಲಂಗೋಚಿಯ... ಒಂದು ಕಾಲದಲ್ಲಿ ಓಡಾಡಿಕೊಂ... ರಾಮಕೃಷ್ಣ ಮೂರು ಪ್ರಯತ್ನದ ನಂ... ಎಸ್‌ಎಸ್‌ಎಲ್‌ಸಿ ಪಾಸಾಗಿದ್ದ. ಆ... ಸೆನೆಟರ್ ಆಗಿದ್ದ ಕೃಷ್ಣಪ್ಪನವರೇ ... ಮೆಂಡ್ ಮಾಡಿ ಶಿವಮೊ... ಕುವೆಂಪು ವಿವಿ ವ್ಯಾಪ್ತಿಗೆ ಸೇ... ದಾವಣಗೆರೆ ಕಾಲೇಜೊಂದರಲ್ಲಿ ರಾ... ಕೃಷ್ಣನಿಗೆ ಅಟೆಂಡರ್ ಕೆಲಸ ಕೊ...ದ್ದರು. ಅಲ್ಲಿ ತಕ್ಷಣವೇ ಸೈಟು, ಜಮೀನು ಕೊಡಿಸುತ್ತೇನೆಂ... ಯಾರ್‍ಯಾರಿಂದಲೋ 30 ಲಕ್ಷದವರೆಗೂ ಕಿತ್ತ ರಾಮ... ಕೊನೆಗೆ ಕೈ ಎತ್ತಿಬಿಟ್ಟ. ಕೊನೆಗೆ ಅದರಿಂದ ಕೆಲಸ... ಹೋಯಿತು. ಆಮೇಲೆ ಒಂದಷ್ಟು ದಿನ ದಿನಸಿ ಅಂ... ನಡೆಸಿಕೊಂಡಿದ್ದ. ಅದೂ ಉದ್ಧಾರವಾಗದೇ ಹೋದ... ರಾಮಕೃಷ್ಣ ಫುಲ್‌ಟೈಂ ಚೀಟಿಂಗ್ ದಂಧೆ ಶುರುವಿ...ಕೊಂಡ. ಮನೆ, ಸೈಟು, ಜಮೀನು ಕೊಡಿಸುತ್ತೇನೆಂ... ವಂಚಿಸುವ ಕೆಲಸದ ಜೊತೆಗೆ ಮದುವೆ ಆಮಿಷ ...

ದುರ್ಗ: ಮತ್ತೆ ವಕ್ಕರಿಸಿದ ಭ್ರಷ್ಟ ಹನುಮಂತಪ್ಪ



ತನ್ನ ಭ್ರಷ್ಟತೆಯ ಕುಖ್ಯಾತಿಯಿಂದಾಗಿ ಕೆಲಸದಿಂದ ವಜಾಗೊಂಡು ಮನೆಯಲ್ಲಿ ಕುಳಿತಿದ್ದ ಹೊಳಲ್ಕೆರೆ ಪುರಸಭೆಯ ಮಾಜಿ ಮುಖ್ಯಾಧಿಕಾರಿ ಎಂ.ಹನುಮಂತಪ್ಪ ಅಲಿಯಾಸ್ ಗುಬ್ಬಿಹನುಮಂತಪ್ಪ ಮಾನವೀಯತೆಯ ಆಧಾರದ ಮೇಲೆ ಮರುನೇಮಕಗೊಂಡಿದ್ದಾನೆ.

ಸಣ್ಣಪುಟ್ಟ ಆರೋಪಗಳಿಗಾಗಿ ಕೆಲಸ ಕಳೆದುಕೊಂಡ ನೂರಾರು ನೌಕರರು ಭವಿಷ್ಯದ ಭರವಸೆಯಿಲ್ಲದೇ ಅತಂತ್ರ ಪರಿಸ್ಥಿತಿಯಲ್ಲಿ ದಿನಗಳನ್ನು ದೂಡುತ್ತಿರುವಾಗ, ಸೇವೆಯಲ್ಲಿದ್ದಾಗ ತಾನು ನಡೆದದ್ದೇ ದಾರಿ ಎಂಬಂತೆ ರಾಜಾರೋಷವಾಗಿ ಭ್ರಷ್ಟಾಚಾರ ನಡೆಸಿ ವಜಾ ಆಗಿದ್ದ ಗುಬ್ಬಿ ಹನುಮಂತಪ್ಪ ಮಾನವೀತಯತೆ ಆಧಾರದ ಮೇಲೆ ಮರುನೇಮಕವಾಗಿರುವುದು ಅನೇಕರಲ್ಲಿ ಅಚ್ಚರಿ ಮೂಡಿಸಿದರೆ, ಭ್ರಷ್ಟ ನೌಕರರಲ್ಲಿ ಭರವಸೆ ಮೂಡಿಸಿದೆ.

1990ನೇ ಇಸವಿಯಲ್ಲಿ ಅನುಕಂಪಾಧಾರಿತ ಕೋಟಾದಲ್ಲಿ ಎಸ್.ಡಿ.ಸಿ.ಯಾಗಿ ಚಿತ್ರದುರ್ಗ ನಗರಸಭೆಯಲ್ಲಿ ಕೆಲಸಕ್ಕೆ ಸೇರಿಕೊಂಡ ಹನುಮಂತಪ್ಪ ಆನಂತರ ಎಫ್‌ಡಿಸಿಯಾಗಿ ಬಡ್ತಿ ಪಡೆದು ಸುಮಾರು ಎಂಟತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿದ. ನಂತರ ಚಳ್ಳಕೆರೆ ಪುರಸಭೆಗೆ ರೆವಿನ್ಯೂ ಆಫೀಸರ್ ಆಗಿ ಹೊರಟ. ಮುಂದೇ ಆರೇ ತಿಂಗಳಲ್ಲಿ ಸ್ವಂತ ವೇತನ ಶ್ರೇಣಿಯ ಮೇಲೆ ಪುರಸಭೆಯ ಮುಖ್ಯಾಧಿಕಾರಿಯಾದ.

ಗುಬ್ಬಿ ಹನುಮಂತಪ್ಪ ತನ್ನ ಕೈಚಳಕದ ನಿಜವಾದ ವಿಶ್ವರೂಪ ದರ್ಶನ ಮಾಡಿದ್ದೇ ಅವಾಗ. ಆಶ್ರಯ ಮನೆ, ಅನುದಾನ ಹಂಚಿಕೆ, ದಿನಗೂಲಿ ನೌಕರರ ನೇಮಕಾತಿ, ಪುರಸಭೆಯ ಅನುದಾನ ಬಳಕೆ ಹಾಗೂ ಟೆಂಡರ್ ನಿರ್ವಹಣೆಯ ಸಂದರ್ಭದಲ್ಲಿ ಪಾಲಿಸಬೇಕಾದ ನೀತಿನಿಯಮಗಳನ್ನು ಗಾಳಿಗೆ ತೂರಿ ತನ್ನಿಚ್ಛೆ ಬಂದಂತೆ ಅಧಿಕಾರದ ದುರುಪಯೋಗ ಮಾಡಿದ.

ಕಾಮಗಾರಿಗಳ ಅಕ್ರಮ ನಿರ್ವಹಣೆ

ತ್ಯಾಗರಾಜನಗರ ಪಂಪ್‌ಹೌಸ್ ಗೋಡೆ ನಿರ್ಮಾಣ ಸಂಬಂಧ 7.00 ಲಕ್ಷ ಕಾಮಗಾರಿ, ಪುರಸಭೆಯ ಹಳೇ ಟೌನ್‌ಹಾಲ್ ದುರಸ್ತಿ ಸಂಬಂಧ 7 ಲಕ್ಷ. ರೂ ಕಾಮಗಾರಿ, ಪುರಸಭೆ ಬಳಿ 6 ಲಕ್ಷ ವೆಚ್ಚದ 4 ಮಳಿಗೆಗಳನ್ನೊಳಗೊಂಡ ವಾಣಿಜ್ಯ ಸಂಕೀರ್ಣದ ನಿರ್ಮಾಣದ ಕಾಮಗಾರಿ... ಇಷ್ಟೂ ಕಾಮಗಾರಿಗಳಿಗೆ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯದೇ ಪುರಸಭೆಯ ಅನುಮೋದನೆ ಪಡೆದು ನಿರ್ವಹಿಸಲಾಗಿತ್ತು, 10ನೇ ಹಣಕಾಸು ನಿಧಿಯಿಂದ 100 ಸೋಡಿಯಂ ಲೈಟುಗಳ ಖರೀದಿಗಾಗಿ ಜಿಲ್ಲಾಧಿಕಾರಿಗಳು 5 ಲಕ್ಷ ರೂ.ಗಳಿಗೆ ಮಂಜೂರಾತಿ ನೀಡಿದ್ದರೆ, ಹನುಮಂತಪ್ಪ 7,65, 161 ರೂ. ಮೌಲ್ಯದ ಸೋಡಿಯಂ ಲೈಟು ಖರೀದಿಸಿದ್ದ. ಉಳಿದ 2,65.161 ರೂ.ಗಳ ಅನುದಾನಕ್ಕೆ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯದೇ ಖರೀದಿ ಕಾರ್ಯ ಮುಗಿಸಿದ್ದ. ಶೇ.18ರ ಯೋಜನೆಯಲ್ಲಿ ರೂ. 1.82 ಲಕ್ಷ ಶೌಚಾಲಯದ ಕಾಮಗಾರಿ ತುಂಡುಗುತ್ತಿಗೆ ಮೇಲೆ ನಿರ್ವಹಿಸಿದ್ದರೂ ಇದಕ್ಕೆ ಸಂಬಂಧಪಟ್ಟ ಮೊಹರುಗಳು-ಸರ್ಟಿಫಿಕೇಟ್‌ಗಳು ಇರುವುದಿಲ್ಲ.

ದಿನಗೂಲಿ ನೇಮಕಾತಿ

2000ದಲ್ಲಿ ಪೌರಸೇವಾ ನೌಕರರು ತಮ್ಮ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮುಷ್ಕರದ ಹಾದಿ ಹಿಡಿದಿದ್ದರು. ಈ ಸಂದರ್ಭದಲ್ಲಿ ನಾಗರಿಕರ ಹಿತದೃಷ್ಟಿಯಿಂದ ಪೌರಸೇವೆಗಳಿಗೆ ಬದಲಿ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಅಂದಿನ ಜಿಲ್ಲಾಧಿಕಾರಿ ನೀಡಿದ್ದ ಆದೇಶವನ್ನೇ ನೆಪವಾಗಿಟ್ಟುಕೊಂಡು ಚಳ್ಳಕೆರೆ ಪುರಸಭೆಗೆ ಆತನ ಸಹೋದರನನ್ನು ಒಳಗೊಂಡಂತೆ 58 ಜನ ದಿನಗೂಲಿ ಕಾರ್ಮಿಕರನ್ನು ನೇಮಕ ಮಾಡಿಕೊಂಡಿದ್ದ.

ಮುಷ್ಕರ ಮುಗಿದನಂತರ ತಾತ್ಕಾಲಿಕ ಸೇವೆಗೆ ತೆಗೆದುಕೊಂಡಿದ್ದ ನೌಕರರನ್ನು ಬಿಡುಗಡೆ ಮಾಡಬೇಕಿತ್ತು, ಆದರೆ ಗುಬ್ಬಿ ಹನುಮಂತಪ್ಪ ಈ ದಿನಗೂಲಿ ನೌಕರರ ನೇಮಕಾತಿಯ ಸಂದರ್ಭದಲ್ಲಿ ಅದ್ಯಾವ ಭರವಸೆ ನೀಡಿದ್ದನೋ, ರೋಲ್‌ಕಾಲ್ ವ್ಯವಹಾರ ಕುದುರಿಸಿಕೊಂಡಿದ್ದನೋ ಕಾಯಂ ನೌಕರರ ಜೊತೆ ಇವರ ಸೇವೆಯನ್ನು ಮುಂದುವರಿಸಿದ.

ಹನುಮಂತಪ್ಪ ಕೆ.ಆರ್. ಪುರ ಪುರಸಭೆಗೆ ವರ್ಗಾವಣೆಯಾದ ನಂತರ ಚಳ್ಳಕೆರೆ ಪುರಸಭೆಗೆ ಡಿ.ಎಚ್. ರಾಯ ಎಂಬುವರು ಮುಖ್ಯಾಧಿಕಾರಿಯಾಗಿ ಬಂದು ಈ ಅಲ್ಪಕಾಲಿಕ ಸೇವೆಗೆ ತೆಗೆದುಕೊಂಡಿದ್ದ ದಿನಗೂಲಿ ನೌಕರರ ವೇತನ ತಡೆಹಿಡಿದರು. ಇದನ್ನು ಪ್ರಶ್ನಿಸಿ ಇದೇ ನೌಕರರು ಹೈಕೋರ್ಟ್ ಮೆಟ್ಟಿಲೇರಿ ತಡೆಯಾಜ್ಞೆ ತರುವ ಹೊತ್ತಿಗೆ ಅವರನ್ನು ಸೇವೆಯಿಂದ ರಿಲೀವ್ ಮಾಡಲಾಗಿತ್ತು, ಅದಾಗಲೇ ಹನುಮಂತಪ್ಪನ ಈ ಅಕ್ರಮ ನೇಮಕಾತಿಯಿಂದಾಗಿ 12, 36, 290 ರೂ.ನಷ್ಟ ಸಂಭವಿಸಿತ್ತು.

ಆಶ್ರಯ-ಅಕ್ರಮಗಳ ಸರಮಾಲೆ

ಚಳ್ಳಕೆರೆ ಪುರಸಭೆಯಲ್ಲಿ 1990-2000, 2000-2001ರ ಸಾಲಿನ ಆಶ್ರಯ ಯೋಜನೆಯಲ್ಲಂತೂ ಇದೇ ಹನುಮಂತಪ್ಪ ಒಂದರ ಮೇಲೊಂದು ಅಕ್ರಮಗಳನ್ನೆಸಗಿದ್ದ, ಇವುಗಳ ಸ್ಯಾಂಪಲ್ ಹೀಗಿದೆ. ಸದರಿ ಯೋಜನೆಯಲ್ಲಿ ಒಟ್ಟು 38 ಖಾಲಿ ನಿವೇಶನಗಳಿಗೆ 8,56,000 ರೂ. ಪಾವತಿ ಮಾಡಿದ್ದಾನೆ. ಮನೆಗಳ ನಿರ್ಮಾಣ ಹಂತ ಕಡೆಗಣಿಸಿ ಒಟ್ಟು 18 ಮನೆಗಳಿಗೆ 1,78,000 ರೂ., 15 ಮನೆಗಳಿಗೆ 1,62,000ರೂ. ಲಕ್ಷ ಪಾವತಿಸಿದ್ದಾನೆ. ಒಂದು ಆಶ್ರಯ ಮನೆ ನಿರ್ಮಾಣದ ಯೂನಿಟ್ ಕಾಸ್ಟ್ 25 ಸಾವಿರ ಇದ್ದರೂ ಹನುಮಂತಪ್ಪ ಸುಮಾರು 17 ಮನೆಗಳಿಗೆ 96,000 ರೂ.ಗಳನ್ನು ಅಧಿಕವಾಗಿ ಪಾವತಿಸಿದ್ದ.

ಅನುಮೋದಿತ ಪಟ್ಟಿಯಲ್ಲಿರುವ ಫಲಾನುಭವಿಗಳನ್ನು ಬದಲಾಯಿಸಿ ಅಕ್ರಮ ಫಲಾನುಭವಿಗಳನ್ನು ಸೇರ್ಪಡೆ ಮಾಡಿ ಒಟ್ಟು 8 ಮನೆಗಳಿಗೆ 1.62,000 ರೂ. ಪಾ... ಮಾಡಿದ್ದ. ರಾಜಮ್ಮ ಕೋಂ ಗೋಪಾಲರಾವ್ ಎಂ...ವನಿಗೆ 1999ರಲ್ಲಿ 26,000 ರೂ. ಬಿಡುಗಡೆ ಮಾ... ಇದೇ ರಾಜಮ್ಮನಿಗೆ 2000-01ರಲ್ಲಿ ಪುನಃ 25,0... ರೂ. ಬಿಡುಗಡೆ ಮಾಡಲಾಗಿದೆ. ಅಂದಾಜು 9 ಮನೆಗ... ಸೆಲ್ಫ್ ಚೆಕ್ ಬರೆದುಕೊಂಡು 78,000 ರೂ. ... ಮಾಡಿಕೊಂಡಿದ್ದಾನೆ. ಇದೇ ಯೋಜನೆಯಲ್ಲಿ ... ಫಲಾನುಭವಿಗಳು ತಮಗೆ ಹಣ ತಲುಪಿಲ್ಲವೆಂದು ಹೇ... ನೀಡಿದ್ದು ಅದರ ಮೊತ್ತವೇ 5,81,000 ರೂ.ಗಳ...


ಈ ಹಗರಣದ ಕುರಿತಂತೆ ಅಂದಿನ ಜಿಲ್ಲಾಧಿ... ಎಸ್.ಜಿ. ಹೆಗಡೆ, ಎಂ. ಹನುಮಂತಪ್ಪ, ಎಸ್‌ಡಿಸಿ ಎ... ಮಂಜುನಾಥ್, ಡಿ ಗ್ರೂಪ್ ನೌಕರ ತಿಪ್ಪೇಸ್ವಾ... ಎಂಬುವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿ... ಅವರ ವಿಚಾರಣೆ ಇನ್ನೂ ಮುಗಿದಿಲ್ಲ.

ಹೀಗೆ ಚಳ್ಳಕೆರೆಯೊಂದರಲ್ಲೇ ತಾನು ಶಾಶ್ವತ... ಮನೆಗೆ ಹೋಗಲು ಸಾಕಾಗುವಷ್ಟು ಹಗರಣಗಳ... ನಡೆಸಿದ್ದ ಹನುಮಂತಪ್ಪ ಚಳ್ಳಕೆರೆಯಿಂದ ವರ್ಗಾವಣೆಯ... ಕೆ.ಆರ್. ಪುರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗಲೇ ದಿನಗೂ... ನೌಕರರ ಅಕ್ರಮ ನೇಮಕಾತಿ ವಿಚಾರಣೆ ನಂತರ ಚಳ್ಳ... ಪುರಸಭೆ ವೇತನ ನಿಧಿಯಿಂದ 12,36,290 ರೂ. ಪಾ... ಮಾಡಿದ್ದಕ್ಕೆ ಸೇವೆಯಿಂದ ಅಮಾನತು ಮಾಡಲಾಯಿ...

ಹುಡುಗಿಯರನ್ನು ವಂಚಿಸುವ ಕೆಲಸಕ್ಕೂ ಕೈಹಾಕಿದ. ನಮ್ಮ ಸಮಾಜದಲ್ಲಿ ಮದುವೆಯ ಬಿಕ್ಕಟ್ಟುಗಳು, ಹೆಣ್ಣು ಹೆತ್ತವರ ಕಷ್ಟಗಳು ಏನೆಂಬುದು ನಿಮಗೂ ಗೊತ್ತು. ನೋಡಲು ಲಕ್ಷಣವಾಗಿದ್ದ, ಇಂಗ್ಲಿಷ್ ಮಾತಾಡುತ್ತಿದ್ದ ರಾಮಕೃಷ್ಣ ಯಾವಾಗ ತಾನೊಬ್ಬ ಆಫೀಸರ್, ಐದಂಕಿ ಸಂಬಳ, ಮದುವೆಯಾಗಲು ವಧು ಬೇಕು ಅಂತ ಪ್ರಚಾರ ಮಾಡುತೊಡಗಿದನೋ ರಾಜ್ಯದ ಮೂಲೆಮೂಲೆಗಳಿಂದ ಅವನಿಗೆ ಪ್ರಪೋಸಲ್‌ಗಳು ಬಂದಿವೆ.


ರವಿ

ಬೆಂಗಳೂರಿನ ಕೊನೆಯ ಬಲಿಪಶು ಸುಧಾ. ಅವನನ್ನು ಪೊಲೀಸರಿಗೆ ಹಿಡಿದು ಕೊಡುವಷ್ಟರಲ್ಲಿ ಅವನಿಂದ ಮೋಸ ಹೋದವರ ಪಟ್ಟಿ ಮೈಲುದ್ದ ಬೆಳೆದುಹೋಗಿತ್ತು. ಬಂಟ್ವಾಳದ ಮಹಿಳಾ ಕಲ್ಯಾಣ ಇಲಾಖೆಯ ಒಬ್ಬ ಮಹಿಳಾ ಆಫೀಸರ್ ಇವನನ್ನು ನಂಬಿ ನಾಲ್ಕು ಲಕ್ಷ ಕಳೆದುಕೊಂಡಿದ್ದರು. ಬೆಂಗಳೂರಿನ ಗಿರಿಜಾ ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿ, ಗೀತಾ, ಮದ್ದೂರು ಸರೋಜಾ ಹೀಗೆ ಆ ಪಟ್ಟಿ ಬೆಳೆಯುತ್ತಲೇ ಇದೆ. ರಾಜ್ಯದ ಅತ್ಯುನ್ನತ ಪೊಲೀಸ್ ಆಫೀಸರ್ ಒಬ್ಬರ ನೆಂಟರು, ಬೆಳಗಾಂನ ನಿಂಬರಗಿ ಫ್ಯಾಮಿಲಿಯ ವಿದ್ಯಾವಂತೆ ಯುವತಿಯೂ ಈ ವಂಚಕರ ಪಟ್ಟಿಯಲ್ಲಿದ್ದಾಳೆ ಎಂದರೆ ಆಶ್ಚರ್ಯವಾಗುತ್ತದೆ.


ಮೂಡುಬಿದರೆ ಶೌಕತ್

ಇದಲ್ಲದೆ ಬಾಂಬೆಯ ಬಲರಾಮೇಗೌಡನಿಗೆ 10 ಲಕ್ಷ, ಹೊಳೇನರಸಿಪುರದ ವಿಶ್ವೇಶ್ವರಯ್ಯನಿಗೆ 5 ಲಕ್ಷ, ಬೆಂಗಳೂರಿನ ಯಶವಂತಪುರದ ರಾಧಾಕೃಷ್ಣ ಮತ್ತು ಸ್ನೇಹಿತರಿಗೆ 4 ಲಕ್ಷ, ಮೂಡುಬಿದರೆ ಶೌಕತ್‌ಗೆ 70 ಸಾವಿರ ಟೋಪಿ ಬಿದ್ದಿದೆ. ಇವರಿಗೆಲ್ಲಾ ಮನೆ, ಸೈಟು, ಬ್ಯಾಂಕ್ ಲೋನ್ ಕೊಡಿಸುವುದಾಗಿ ಹೇಳಿ ರಾಮಕೃಷ್ಣ ಮುಂಡಾಮೋಚಿದ್ದಾನೆ.

ಹೀಗೆ ಕಳೆದ 10 ವರ್ಷಗಳಿಂದ 2 ಕೋಟಿಗೂ ಹೆಚ್ಚು ವಂಚನೆ ನಡೆಸಿ ನೂರಾರು ಮಹಿಳೆಯರಿಗೆ ಅನ್ಯಾಯವೆಸಗಿರುವ ರಾಮಕೃಷ್ಣನನ್ನು ಪೊಲೀಸರು ಸಲೀಸಾಗಿ ಪರಿಗಣಿಸ ಕೂಡದು. ಎಂಗೇಜ್‌ಮೆಂಟ್ ಮಾಡಿಕೊಂಡ ಹುಡುಗಿಯರನ್ನು ಮೈಸೂರಿನ ಅಭಿಷೇಕ್ ಲಾಡ್ಜ್, ಅಮೋಘ್ ಲಾಡ್ಜ್‌ಗಳಿಗೆ ಕರೆತಂದು ಲೈಂಗಿಕ ಶೋಷಣೆಯನ್ನು ನಡೆಸುತ್ತಿದ್ದ ರಾಮಕೃಷ್ಣನ ವಿರುದ್ಧ ಬಹಿರಂಗವಾಗಿ ದೂರು ನೀಡಲು ಕೆಲ ಮಹಿಳೆಯರು ಹಿಂಜರಿಯಬಹುದು. ಆದರೆ ಪೊಲೀಸರು ಗೌಪ್ಯ ಕಾಪಾಡುವ ಭರವಸೆ ನೀಡಿದಲ್ಲಿ ಸಾಕಷ್ಟು ಸಾಕ್ಷ್ಯಾಧಾರ ಸಂಗ್ರಹಿಸಲು ಸಾಧ್ಯವಿದೆ.

ಈ ಜವಾಬ್ದಾರಿಯನ್ನು ಮೈಸೂರು ಪೊಲೀಸರು ಹೊಣೆಯರಿತು ನಿಭಾಯಿಸಲಿ. ■

ಈ ಅಮಾನತು ಅವಧಿ ಮುಗಿಸಿಕೊಂಡು ಸಿರಾದಲ್ಲಿ ಮುಖ್ಯವ್ಯವಸ್ಥಾಪಕನಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಚಳ್ಳಕೆರೆಯಲ್ಲಿ ಕಾಮಗಾರಿಗಳ ಕ್ರಮ ನಿರ್ವಹಣೆ ಸಂಬಂಧ ಚಳ್ಳಕೆರೆ ತಾಲ್ಲೂಕು ಕಾಂಗ್ರೆಸ್ ನೀಡಿದ ದೂರಿನ ಮೇರೆಗೆ ವಿಚಾರಣೆ ಬಾಕಿ ಇಟ್ಟು ಪುನಃ ಅಮಾನತು ಮಾಡಲಾಯಿತು. ಆಗ ಪೌರಾಡಳಿತ ನಿರ್ದೇಶನಾಲಯದ ಆಡಳಿತಾಧಿಕಾರಿ ನಿಲಯ್ ಮಿತಾಶ್ ಈತನ ಫೈಲಿನ ಮೇಲೆ ಹಣಕಾಸು ಸಂಬಂಧಿಯಾದ ಯಾವುದೇ ಜವಾಬ್ದಾರಿಗಳನ್ನು ಈತನಿಗೆ ನೀಡಬಾರದೆಂದು ಟಿಪ್ಪಣಿ ಹಾಕಿದ್ದರು. 2005ರಲ್ಲಿ ನಿಲಯ್ ಮಿತಾಶ್ ಬೇರೆ ಹುದ್ದೆಗೆ ವರ್ಗಾವಣೆಯಾದ ನಂತರ ಪೌರಾಡಳಿತ ನಿರ್ದೇಶನಾಲಯದ ಆಡಳಿತಾಧಿಕಾರಿಯಾಗಿ ಬಿ.ಪಿ. ಕನಿರಾಂ ಅಧಿಕಾರ ವಹಿಸಿಕೊಂಡರು.

ಹನುಮಂತಪ್ಪ ತನ್ನ ಮೇಲೆ ಇಷ್ಟೆಲ್ಲಾ ಆರೋಪಗಳಿದ್ದರೂ ತಾನು ನೌಕರಿಗೆ ಹಿಂತಿರುಗಲು ಅಗತ್ಯವಿರುವ ಲಾಬಿ ಮಾಡಿ ಸ್ವಂತ ವೇತನ ಶ್ರೇಣಿಯ ಮೇಲೆ ಹೊಳಲ್ಕೆರೆ ಪುರಸಭೆಗೆ ಚೀಫ್ ಆಫೀಸರ್ ಆಗಿ ವಕ್ಕರಿಸಿದ. ವಿಪರ್ಯಾಸವೆಂದರೆ ಹೊಳಲ್ಕೆರೆ ಪುರಸಭೆಯಲ್ಲೇ ಈ ಸ್ಥಾನ ತುಂಬುವಷ್ಟು ಸೇವಾಹಿರಿತನ, ದಕ್ಷತೆ ಎರಡೂ ಹೊಂದಿದ್ದ ಎಂ. ಮಿಶ್ರಕೋಟಿಯನ್ನು ಬೇರೆಡೆಗೆ ವರ್ಗಾವಣೆ ಮಾಡಲಾಗಿತ್ತು.

ಇಷ್ಟೆಲ್ಲಾ ಲಾಬಿ ಮಾಡಿದರೂ ಚಳ್ಳಕೆರೆಯ ಮತ್ತೊಂದು ಹಗರಣದ ಉರುಳು ಸುತ್ತಿಕೊಂಡಿತು. ಚಳ್ಳಕೆರೆ ಪುರಸಭೆಯ ಜಾಗ ಮತ್ತು ಉದ್ಯಾನವನಗಳಿಗೆ ಕಾಯ್ದಿರಿಸಿದ ಜಾಗಗಳನ್ನು ಖಾಸಗಿ ವ್ಯಕ್ತಿಗಳಿಗೆ ಖಾತೆ ಮಾಡಿ ನಗರಸಭೆಗೆ ನಷ್ಟ ಉಂಟು ಮಾಡಿದ ಹಾಗೂ ದುರ್ನಡತೆ-ಕರ್ತವ್ಯ ಲೋಪದ ಆರೋಪದ ಮೇಲೆ 2006ರ ಅಕ್ಟೋಬರ್‌ನಲ್ಲಿ ಸೇವೆಯಿಂದ ವಜಾ ಮಾಡಲಾಗಿತ್ತು.


ಹೀಗೆ ವಜಾಗೊಂಡು ವರ್ಷ ತುಂಬುವ ಹೊತ್ತಿಗೆ ಅಂದರೆ 10-9-07ರಲ್ಲಿ ಪೌರಾಡಳಿತ ನಿರ್ದೇಶಕರು ಆದೇಶವೊಂದನ್ನು ಹೊರಡಿಸಿ 9-10-06ರಲ್ಲಿ ವಜಾ ಮಾಡಿದ ಆದೇಶ ಪರಿಷ್ಕರಿಸಿ ಎರಡು ವರ್ಷ ವಾರ್ಷಿಕ ವೇತನಬಡ್ತಿಗಳನ್ನು ಸಂಚಿತವಾಗಿ ಪರಿಣಮಿಸುವಂತೆ ತಡೆಹಿಡಿಯುವ ದಂಡ ವಿಧಿಸಿ ಖಾಲಿ ಇರುವ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ನಿಯುಕ್ತಿಗೊಳಿಸಲು ಸೂಚಿಸಿದ್ದಾರೆ.

ಸಾಮಾನ್ಯವಾಗಿ ನೌಕರರು ಅಮಾನತು ಅಥವಾ ವಜಾ ಆಗಿ ಮರುನೇಮಕ ಮಾಡಿದಾಗ ಅದೇ ಸ್ಥಳದಲ್ಲಿ ನಿಯುಕ್ತಿಗೊಳಿಸುವುದಿಲ್ಲ, ಆದರೆ ಗುಬ್ಬಿ ಹನುಮಂತಪ್ಪನಿಗೆ ತಾನು ಚೀಫ್ ಆಫೀಸರ್ ಆಗಿ ಕೆಲಸ ಮಾಡಿ ವಜಾ ಆಗಿದ್ದ ಕಚೇರಿಯಲ್ಲೇ ಎಸ್‌ಡಿಎ ಆಗಿ ನಿಯುಕ್ತಿಗೊಳಿಸಲಾಗಿದೆ. ಇದಕ್ಕಿಂತ ವಿಪರ್ಯಾಸ ಮತ್ತೊಂದಿರಲಾರದು.

ಈಗ ಪೌರಸೇವೆಯಲ್ಲಿ ಸಣ್ಣಪುಟ್ಟ ಆರೋಪಗಳಿಗೆ ವಜಾ ಆಗಿರುವ/ ಕೆಲಸದಿಂದ ನಿವೃತ್ತಿಗೊಳಿಸಿ ಮನೆಗೆ ಕಳುಹಿಸಿರುವ ಬಹಳಷ್ಟು ನೌಕರರು ಅಸಹಾಯಕ ಪರಿಸ್ಥಿತಿಯಲ್ಲಿದ್ದಾರೆ. ಭ್ರಷ್ಟಾತೀತ ಭ್ರಷ್ಟ ಗುಬ್ಬಿ ಹನುಮಂತಪ್ಪನಿಗೆ ಮಾನವೀಯತೆ ಆಧಾರದ ಮೇಲೆ ದೊರೆಯುವುದಾದರೆ ನಮಗೇಕೆ ಇದೇ ಮಾನದಂಡದ ಮೇಲೆ ಪುನಃ ಕೆಲಸ ಸಾಧ್ಯವಿಲ್ಲ ಎಂಬುದು ಅವರ ಪ್ರಶ್ನೆ. ಗುಬ್ಬಿ ಹನುಮಂತಪ್ಪನ ಯಾವ ಆಮಿಷ-ಲಾಬಿಗಳಿಗೆ ಮಣಿದು ಮರುನೇಮಕ ಮಾಡಿಕೊಂಡು ಅಧಿಕಾರಿಗಳು ಉತ್ತರ ಕೊಡುವರೇ?


■ ವರದಿಗಾರ

ಸಾಹಿತ್ಯ ಸಮ್ಮೇಳನಕ್ಕೆ 'ಹಿಂದೂ' ವೈರಸ್




ಕನ್ನಡದ ಹಬ್ಬವೆಂಬ ರೀತಿಯಲ್ಲಿ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಈ ಬಾರಿ ಉಡುಪಿಯಲ್ಲಿ ಆರ್‌ಎಸ್‌ಎಸ್ ಚಡ್ಡಿ ತೊಡಿಸಿ, ಹಣೆಗೆ ಕುಂಕುಮ ವಿರಿಸಿ ಹಿಂದೂ ಕೋಮುವಾದಿ ವೈರಸ್ಸನ್ನೂ ಇಂಜೆಕ್ಟ್ ಮಾಡಿಬಿಡಲಾಗಿದೆ. ಯಾವಾಗ ಶೇಷಗಿರಿರಾಯರೆಂಬ ಒಬ್ಬ ಸಾಧಾರಣ ಮಟ್ಟದ ಬರಹಗಾರನನ್ನು ಈ ಸಮ್ಮೇಳನದ ಅಧ್ಯಕ್ಷರನ್ನಾಗಿ ಹೇರಲಾಯಿತೋ ಅವತ್ತೇ ಮುಂದೆ ಉಡುಪಿಯಲ್ಲಿ ಏನೇನು ಕಂತ್ರಿ ಕೆಲಸಗಳು ನಡೆಯಬಹುದು ಎಂದು ಊಹಿಸಬಹುದಾಗಿತ್ತು, ಅದೇರೀತಿ ಈಗ ನಡೆಯುತ್ತಲೂ ಇದೆ. ಈ 74 ನೇ ಸಮ್ಮೇಳನದ ಆಹ್ವಾನ ಪತ್ರಿಕೆ ಈಗತಾನೇ ಪ್ರಕಟವಾಗಿದೆ. 16 ಪುಟಗಳ ಕಾರ್ಯಕ್ರಮಗಳತ್ತ ಒಮ್ಮೆ ಕಣ್ಣಾಡಿಸಿದರೆ ಸಾಕು ಈ ಸಮ್ಮೇಳನಕ್ಕೆ ಅಂಟಿಕೊಂಡಿರುವ ಜಾತಿ-ಧರ್ಮದ ಪೂರ್ವಾಗ್ರಹಗಳ ರೋಗ ಎಷ್ಟೆಂಬುದು ಗೊತ್ತಾಗುತ್ತದೆ.

ಮೊಟ್ಟ ಮೊದಲನೆಯದಾಗಿ ಉಡುಪಿಯ ಮಾಧ್ವ ಮಠಾಧೀಶ ಪೇಜಾವರ ಸ್ವಾಮಿಯಿಂದ ಶುಭ ನುಡಿ ಹೇಳಿಸುವುದಿದೆ. ಈ ಪೇಜಾವರ ಹೇಳಿಕೇಳಿ ಮಹಾನ್ ಜಾತಿವಾದಿ. ವಿಶ್ವಹಿಂದೂ ಪರಿಷತ್ತಿನ ಉಪಾಧ್ಯಕ್ಷನಾಗಿ ಕರ್ನಾಟಕದ ಸೌಹಾರ್ದ ಸಾಮಾಜಿಕ-ಸಾಂಸ್ಕೃತಿಕ ಪರಂಪರೆಗೆ ನಿರಂತರವಾಗಿ ಧಕ್ಕೆ ತರುತ್ತಿರುವ ವ್ಯಕ್ತಿ. ಇದುವರೆಗೂ ಈತನ ಬಾಯಿಂದ ಅಶುಭ ನುಡಿ ಬಿಟ್ಟು ಬೇರೆ ಮಾತುಗಳನ್ನೇ ಕೇಳಿದವರಿಲ್ಲ. ಅಂತಾ ಕೆಟ್ಟ ಹಿನ್ನೆಲೆಯ ವ್ಯಕ್ತಿ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿ ಶುಭ ನುಡಿಯುತ್ತಾರೆಂದು ಆಶಿಸುವುದು ಮುಠ್ಠಾಳತನವಲ್ಲವೆ? ಇದೇ ಮೆಂಟಾಲಿಟಿಯ ವೀರೇಂದ್ರ ಹೆಗ್ಗಡೆ ಸಮ್ಮೇಳನದ ಉದ್ಘಾಟನೆ ಮಾಡುತ್ತಿರುವುದೂ ಕಸಾಪ ಎಷ್ಟು ಕೊಳೆತುಹೋಗಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಜೊತೆಗೆ ಇನ್ನೊಬ್ಬ ಪ್ರತಿಗಾಮಿ ತತ್ವಜ್ಞಾನಿ ಬನ್ನಂಜೆ ಗೋವಿಂದಾಚಾರ್ಯರ ಭಾಷಣವನ್ನು ಸಭಿಕರು ಕೇಳಬೇಕಾಗಿ ಬಂದಿದೆ.



ಕರಾವಳಿ ಹಾಗೂ ಮಲೆನಾಡಿನ ಬಹುತೇಕ ಬಿಜೆಪಿ ಶಾಸಕರು, ಸಂಸದರೆಲ್ಲಾ ಒಂದಲ್ಲಾ ಒಂದು ಸಮಿತಿಯಲ್ಲಿ ತೂರಿಕೊಂಡು ಇಡೀ ಸಮ್ಮೇಳನವನ್ನು ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಹಿಂದೂ ಮೇಲ್ಜಾತಿ ಜನರ ಸಮಾರಂಭವಾಗಿ ನಡೆಸಲು ಏರ್ಪಾಡು ಮಾಡಿಕೊಂಡಿದ್ದಾರೆ. ನಾಲ್ಕು ದಿನಗಳ ಈ ಸಮ್ಮೇಳನದ ಗೋಷ್ಠಿಗಳಿಗೆ ಆಹ್ವಾನಿತರ ಬಗ್ಗೆ ಹೇಳಬೇಕೆಂದರೆ ಅಲ್ಲಿ ದಲಿತ, ಮುಸ್ಲಿಂ ಹಾಗೂ ಕ್ರಿಶ್ಚಿಯನ್ ಹಿನ್ನೆಲೆಯವರನ್ನು ಉದ್ದೇಶಪೂರ್ವಕವಾಗಿ ಹೊರಗಿಡಲಾಗಿದೆ. ನಡೆಯಲಿರುವ 25 ಗೋಷ್ಠಿ, ಸಮಾರಂಭಗಳಲ್ಲಿ ಒಟ್ಟು 200 ಜನ ಭಾಷಣಕಾರರಿದ್ದಾರೆ.

ಅವರಲ್ಲಿ ಮುಸ್ಲಿಮರ ಸಂಖ್ಯೆ ಎಷ್ಟು ಗೊತ್ತೆ? ಕೇವಲ 5. ಒಬ್ಬ ನಿಸಾರ್ ಅಹಮದ್, ಈ ಹಿಂದಿನ ಸಮ್ಮೇಳನಾಧ್ಯಕ್ಷ ಎಂದು, ಇದ್ದಿನಬ್ಬ ಯಾವುದೋ ಕಾರ್ಯಕ್ರಮದ ಬಹುಮಾನ ವಿತರಣೆಗೆ, ಕಲೀಂ ಭಾಷ ಹನಿಗವನ ಗೋಷ್ಠಿಗೆ, ಪ್ರೊ. ಕೆ.ಆರ್. ಇಕ್ಬಾಲ್ ಅಹಮದ್, ಮಹಮದ್ ಹನೀಫ್‌ರನ್ನು ಕವಿಗೋಷ್ಠಿಗೆಂದು ಆಹ್ವಾನಿಸಲಾಗಿದೆ. ಆದರೆ ಸಾಹಿತ್ಯ ಸಂಸ್ಕೃತಿ, ಕರ್ನಾಟಕದ ಆಗುಹೋಗುಗಳಿಗೆ ಸಂಬಂಧಿಸಿದಂತೆ ಚರ್ಚೆ ಗೋಷ್ಠಿಗಳಲ್ಲಿ ಭಾಗವಹಿಸಲು ಒಬ್ಬ ಮುಸ್ಲಿಂ ಚಿಂತಕರನ್ನೂ ಕರೆದಿಲ್ಲ, ಮಮ್ತಾಜ್ ಅಲಿಖಾನ್ ಎಂಬುವರನ್ನು ಆಡಳಿತದಲ್ಲಿ ಕನ್ನಡ ಭಾಷಾ ಬಳಕೆ ಗೋಷ್ಠಿಯ ಪ್ರತಿಕ್ರಿಯೆ ನೀಡುವುದರ ಪಟ್ಟಿಗೆ ಸೇರಿಸಲಾಗಿದೆ. ಈ ಮಮ್ತಾಜ್ ಅಲಿಖಾನ್ ಬಿಜೆಪಿ ಪಕ್ಷದವನಾಗಿದ್ದು ಈತನ ಚಿಂತನೆಗಳು ಚಿಂತಾಜನಕವಾಗಿರುತ್ತವೆ. ಉಡುಪಿ ಸಮ್ಮೇಳನದ ಸಮಯದಲ್ಲಿ ಹೀಗೆ ಮುಸ್ಲಿಂ ಬರಹಗಾರರ ಬಗ್ಗೆ ವಿಶೇಷವಾಗಿ ಯಾಕೆ ಪ್ರಸ್ತಾಪಿಸಬೇಕೆಂದರೆ ಕನ್ನಡದ ಬಹುತೇಕ ಮುಸ್ಲಿಂ ಬರಹಗಾರರು ಬಂದಿರುವುದೇ ಕರಾವಳಿ-ಮಲೆನಾಡು ಪ್ರಾಂತ್ಯಗಳಿಂದ. ತಮ್ಮ ಅಭಿವ್ಯಕ್ತಿಗೆ ಕನ್ನಡ ಸಾಹಿತ್ಯಕ್ಕೆ ವಿಭಿನ್ನ ಸಂವೇದನೆಗಳನ್ನು ಹರಿಸಿ ಶ್ರೀಮಂತಗೊಳಿಸಿದ ಈ ಬರಹಗಾರರು ಚಡ್ಡಿಗಳಿಗೆ ಬೇಡವಾಗಿರಬಹುದು ಆದರೆ ಕಸಾಪಗೂ ಬೇಡವಾದರೇಕೆ! ಚಂಪಾ ಉತ್ತರಿಸುವರೆ?



ಇನ್ನು ಇಡೀ ಆಹ್ವಾನ ಪತ್ರಿಕೆ ಜಾಲಾಡಿದರೂ ಬೆರಳೆಣಿಕೆಯಷ್ಟೂ ದಲಿತರಿಲ್ಲ, ಕ್ರಿಶ್ಚಿಯನ್ನರಿಲ್ಲ, ಭಾಷಣಗಳ ಮಾತಿರಲಿ ಕೊನೆಗೆ ಸ್ವಾಗತ, ನಿರೂಪಣೆ, ವಂದನಾರ್ಪಣೆಗಳಲ್ಲೂ ಅವರಿಗೆ ಅವಕಾಶ ಸಿಗದಂತೆ ನೋಡಿಕೊಳ್ಳಲಾಗಿದೆ. ಅತ್ಯಂತ ಅಸಹ್ಯ ತರಿಸುವ ವಿಚಾರ ಏನೆಂದರೆ ಒಂದೇ ಗೋಷ್ಠಿಗೆ ಇಬ್ಬಿಬ್ಬರಿಂದ ಸ್ವಾಗತ, ಮೂರು ಮೂರು ಜನರ ನಿರೂಪಣೆ, ಇಬ್ಬಿಬ್ಬರಿಂದ ವಂದನಾರ್ಪಣೆ ಮಾಡಿಸಲಾಗುತ್ತಿದೆ. ವೇದಿಕೆ ಮೇಲೆ ಕಾಣಿಸಿಕೊಳ್ಳುವ ಚಟ, ಆಹ್ವಾನ ಪತ್ರಿಕೆಯಲ್ಲಿ ತನ್ನ ಹೆಸರೂ ಬರಲಿ ಎಂಬ ಅವಿವೇಕಿಗಳ ಆಸೆ ತಣಿಸಲು ಈ ಏರ್ಪಾಡೆಂದು ಕಾಣುತ್ತದೆ. ಕೆಲವು ಗೋಷ್ಠಿಗಳಿಗೆ ಭಾಷಣ ಮಾಡುವವರು ನಾಲ್ಕು ಜನರಾದರೆ ಸ್ವಾಗತ, ನಿರೂಪಣೆ, ನಿರ್ವಹಣೆ, ವಂದನೆ ಎಂದು ಆರೆಂಟು ಹೆಸರು ಹಾಕಲಾಗಿದೆ.

ಇಂಥ ಸಾಹಿತ್ಯ ಪ್ರಚಾರ ಪ್ರೇಮಿಗಳನ್ನು ಹೆತ್ತ ತಾಯಿ ಭುವನೇಶ್ವರಿ ಜನ್ಮ ಇಂದಿಗೆ ಪಾವನವಾಗಲೇಬೇಕು ಬಿಡಿ!

ಇಷ್ಟು ಅಧ್ವಾನಗಳ ನಡುವೆ ಚಡ್ಡಿಗಳು ಬೇರೆ ಹಲವಾರು ರೀತಿಯ ಕಿತಾಪತಿಯನ್ನು ಮಾಡುತ್ತಿದ್ದಾರೆ.

12 ನೇ ತಾರೀಖು ಸಮ್ಮೇಳನದ ಉದ್ಘಾಟನೆ ದಿನ ಕೇಂದ್ರ ಸಚಿವ ಆಸ್ಕರ್ ಫರ್ನಾಂಡಿಸ್‌ರಿಂದ ವಿಶೇಷ ಅಂಚೆ ಲಕೋಟೆ ಬಿಡುಗಡೆ ಆಗಬೇಕಿದೆ. ಆದರೆ ಸ್ಥಳೀಯ ಸ್ವಾಗತ ಸಮಿತಿಯ ಚಡ್ಡಿಗಳು ಬೇಕಂತಲೇ ಅವರಿಗೆ ಇದುವರೆಗೂ ಆಹ್ವಾನ ಪತ್ರಿಕೆ ಕಳಿಸದೆ ಅವಮಾನಿಸಿದ್ದಾರೆ.

ಆಸ್ಕರ್ ಕ್ರಿಶ್ಚಿಯನ್ ಎಂದು!

ಅದೇರೀತಿ ಕರ್ನಾಟಕದ ಸೋದರ ಸಾಹಿತ್ಯ ಗೋಷ್ಠಿಯಲ್ಲಿ ಮಾತನಾಡಬೇಕಿದ್ದ ವಿನ್ಸೆಂಟ್ ಆಳ್ವರಿಗೂ ಆಹ್ವಾನ ಪತ್ರಿಕೆ ಕಳುಹಿಸದೆ ಕೆಟ್ಟ ನಡವಳಿಕೆ ತೋರಲಾಗಿದೆ. ಈ ಗೋಷ್ಠಿಯ ಇನ್ನೊಂದು ದುರುಳತನ ಏನೆಂದರೆ ಕರ್ನಾಟಕದ ಸೋದರ ಸಾಹಿತ್ಯ ಎಂದು ತುಳು, ಕೊಂಕಣಿ, ಕೊಡವ ಸಾಹಿತ್ಯದ ಬಗ್ಗೆ ಚರ್ಚಾಗೋಷ್ಠಿ ಏರ್ಪಡಿಸಲಾಗಿದೆ. ಆದರೆ ಬ್ಯಾರಿ ಭಾಷೆ ಬಗ್ಗೆ ಬೇಕಂತಲೇ ನಿರ್ಲಕ್ಷ್ಯ ತೋರಿಸಲಾಗಿದೆ. ಬ್ಯಾರಿ ಸಾಹಿತ್ಯ, ಬ್ಯಾರಿ ಅಕಾಡೆಮಿಯೇ ಅಸ್ತಿತ್ವದಲ್ಲಿರುವುದು ಕಸಾಪಗೆ ತಿಳಿದಿಲ್ಲವೆ? ಬ್ಯಾರಿ ಸಾಹಿತ್ಯ ಕರ್ನಾಟಕದ, ಕನ್ನಡದ ಸೋದರ ಭಾಷೆ ಅಲ್ಲವೆ?


ಕಸಾಪ ಇದಕ್ಕೆ ಉತ್ತರಿಸಲಿ, ಇಲ್ಲವೆ ಆರ್‌ಎಸ್‌ಎಸ್ ವಟುಗಳಿಗೆ ಶರಣಾಗಿ ತಾನೂ ಹಿಂದೂ ಕೋಮುವಾದಿಯಾಗಿದ್ದೇನೆಂದು ಒಪ್ಪಿಕೊಳ್ಳಲಿ. ಇನ್ನು ಕನ್ನಡ ಚಳವಳಿ ವಿಚಾರ ಇದೆಯಾಗಲಿ, ಮಹಿಳೆ, ದಲಿತ, ಬಂಡಾಯ ಚಳವಳಿ ಹಾಗೂ ಅವುಗಳಿಂದ ಸಾಹಿತ್ಯ ಸಂಸ್ಕೃತಿಯ ಮೇಲಾದ ಪರಿಣಾಮಗಳ ಬಗ್ಗೆ ಚರ್ಚೆಗೆ ಜಾಗ ಇರದಂತೆ ಮಾಡಲಾಗಿದೆ.

ಒಟ್ಟಾರೆಯಾಗಿ ಹೇಳಬೇಕೆಂದರೆ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಯಾರನ್ನೆಲ್ಲಾ ಒಳಗೊಂಡು ಒಂದು ಸಮಗ್ರ, ಚೈತನ್ಯಭರಿತ ಸತ್ವಶಾಲಿ ಹಬ್ಬವಾಗಬೇಕಿತ್ತೊ ಹಾಗಾಗುತ್ತಿಲ್ಲ. ಅದರ ಸಾಮಾಜಿಕ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುವ ಬದಲಾಗಿ ಕುಗ್ಗಿಸಲಾಗಿದೆ. ಆಶಯಗಳನ್ನು ಇನ್ನಷ್ಟು ಜನಪರ, ನಾಡಪರ ಆಗಿಸುವ ಬದಲಾಗಿ ಪಟ್ಟಭದ್ರರ ಕೋಮುವಾದಿಗಳ ಚೌಕಟ್ಟಿಗೆ ಸೀಮಿತಗೊಳಿಸಲಾಗಿದೆ. ಈ ದುಷ್ಟರು ನಿರ್ದಿಷ್ಟ ಜಾತಿ-ಜನಾಂಗಗಳ ಜನ ಇದರಲ್ಲಿ ಪಾಲ್ಗೊಳ್ಳಲು ಅವಕಾಶವಾಗದಂತೆ ಮಾಡುವ ಮೂಲಕ ಕನ್ನಡದ ಸಾಂಸ್ಕೃತಿಕ ಪರಿಸರವನ್ನು ಇನ್ನಷ್ಟು ಕುರೂಪಗೊಳಿಸುತ್ತಿದ್ದಾರೆ.

ಈ ಕಾರಣಗಳಿಂದಾಗಿ ಈಗಿನ 74 ನೇ ಉಡುಪಿ ಕನ್ನಡ ಸಾಹಿತ್ಯ ಸಮ್ಮೇಳನವು ಕನ್ನಡದ ಹಬ್ಬಗಳ ಇತಿಹಾಸದಲ್ಲಿ ಢಾಳಾಗಿ ಕಾಣುವ ಒಂದು ಕೇಸರಿ ಚುಕ್ಕೆ ಮಾತ್ರ.

■ ಬಿಳಿದಾಳೆ ಈಶ


ಎಚ್.ಟಿ. ಕೃಷ್ಣಪ್ಪ ಅಭಿನಂದನಾ ಗ್ರಂಥಕ್ಕೆ ಲೇಖನ ಕಳಿಸಿಕೊಡಿ



ಎಚ್.ಟಿ. ಕೃಷ್ಣಪ್ಪ ಅವರು ನಾಡು ಕಂಡ ಒಬ್ಬ ಸಜ್ಜನ ರಾಜಕಾರಣಿ. ರಾಜಕಾರಣದಲ್ಲಿ ಮಾನವಂತರು ಮಾಯವಾಗುತ್ತಿರುವ ಈ ದಿನಗಳಲ್ಲಿ ಅಂಥವರನ್ನು ನೆನದು, ಗೌರವಿಸಿ ಗ್ರಂಥ ರೂಪದಲ್ಲಿ ದಾಖಲಿಸುವುದು ಸಾಂಸ್ಕೃತಿಕ ಸಮಾಜವೊಂದರ ಕರ್ತವ್ಯವಾಗಿರುತ್ತದೆ. ಎಪ್ಪತ್ತೈದು ವಸಂತಗಳನ್ನು ಕಂಡಿರುವ ಎಚ್.ಟಿ. ಕೃಷ್ಣಪ್ಪ ಅವರು ಶಾಸಕರಾಗಿ, ಸಚಿವರಾಗಿ ಸೇವೆ ಸಲ್ಲಿಸಿ ಅಪಾರ ಹೆಸರು ಗಳಿಸಿದವರು. ತಮ್ಮ ಸಂಪನ್ನತೆ, ಸಜ್ಜನಿಕೆ, ಸನ್ನಡತೆಗಳಿಂದ ಸಮಾಜದಲ್ಲಿ, ಸರ್ಕಾರದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪು ಒತ್ತಿದವರು.

ಮರೆಯಾಗುತ್ತಿರುವ ಮೌಲ್ಯಗಳ ಸಂಕೇತವಾಗಿರುವ ಕೃಷ್ಣಪ್ಪ ಅವರನ್ನು ಕುರಿತು ಒಂದು ಅಭಿನಂದನಾ ಗ್ರಂಥವನ್ನು ಹೊರತರುವ ಕಾರ್ಯದಲ್ಲಿ ನಮ್ಮ ಪತ್ರಿಕೆಯ ಅಂಕಣಕಾರರಾದ ಬಿ. ಚಂದ್ರೇಗೌಡ, ಪ್ರೊ. ಎಚ್.ಎಲ್. ಕೇಶವಮೂರ್ತಿ ಹಾಗೂ ನಾಗತೀಹಳ್ಳಿ ಚಂದ್ರಶೇಖರ್ ಅವರ ನೇತೃತ್ವದ ಸಮಿತಿಯೊಂದು ಕಾರ್ಯಪ್ರವೃತ್ತವಾಗಿದೆ. ಕೃಷ್ಣಪ್ಪನವರ ಒಡನಾಡಿಗಳಾಗಿ, ಹಿತೈಷಿಗಳಾಗಿ, ಅಭಿಮಾನಿಗಳಾಗಿ ನಿಮಗೂ ಅವರೊಂದಿಗಿನ ನಿಮ್ಮದೇ ಅನುಭವಗಳಿರಬಹುದು. ತಮ್ಮ ನೆನಪಿನ ಸಂಗ್ರಹದಿಂದ ಅಂತಹ [illegible] ಅನುಭವಗಳನ್ನು, ಅಭಿಪ್ರಾಯಗಳನ್ನು ಒಳಗೊಂಡ ಲೇಖನವನ್ನು [illegible] ಗ್ರಂಥವು ಇನ್ನಷ್ಟು ಸಮೃದ್ಧವಾಗುತ್ತದೆ. ಲೇಖನಗಳನ್ನು ಕಳಿಸಿಕೊಡಬೇಕಾದ ವಿಳಾಸ: ನಂ. 39, [illegible] ಕುವೆಂಪು ನಗರ, ಮೈಸೂರು - 570023; ದೂರವಾಣಿ: 0821 2463443, 9448 [illegible] 9448063355, 9886697084

ಕುಕ್ಕೆ ಸುಬ್ರಹ್ಮಣ್ಯ: ಸರ್ಪ ಸಂಸ್ಕಾರದ ಸೈತಾನರು!



ವ್ಹಾರೆವಾ! ಭಲೇ ಅಪರೂಪದ ಜೋಡಿ. ಇಂತಹ ಜೋಡಿ ಸುಬ್ರಹ್ಮಣ್ಯದಲ್ಲೂ ಸಿಗಲಿಕ್ಕಿಲ್ಲ! ಇದು ಕುಕ್ಕೆ ಸುಬ್ರಹ್ಮಣ್ಯದಲ್ಲಿನ ಇತಿಹಾಸ ಪ್ರಸಿದ್ಧ ಕುಲ್ಕುಂದ ಜಾನುವಾರು ಜಾತ್ರೆಗಿರುವ ಕ್ರೆಡಿಟ್. ಚಂಪಾಷಷ್ಠಿಗೂ ಮುನ್ನ ಕುಲ್ಕುಂದದ ಗದ್ದೆಗಳಿಗೆ ಹಿಂಡುಹಿಂಡಾಗಿ ಬಯಲುಸೀಮೆಯಿಂದ ಬಂದಿಳಿಯುವ ಜಾನುವಾರುಗಳ ಪರಿಷೆ. ಅವುಗಳ ಖರೀದಿಗೆಂದು ದೂರದೂರದ ಊರುಗಳಿಂದ ಬಂದು ಸೇರುವ ರೈತಾಪಿ ಜನ. ಹಿತವಾದ ಚಳಿಯಲ್ಲಿ ಸಗಣಿ ಗಂಜಳದ ಘಮ! ಆದರೆ ಈ ಕುಲ್ಕುಂದ ಜಾನುವಾರು ಜಾತ್ರೆ ಕೂಡಾ ಕಾಲಚಕ್ರದ ಹೊಡೆತಕ್ಕೆ ಸಿಲುಕಿ ಕಳೆಗುಂದುತ್ತಾ ಸಾಗಿದೆ. ಏಷ್ಯಾದ ಬಾಬತ್ತಿನ ಭತ್ತದ ಬೇಸಾಯದ ಬದಲಾಗಿ ಹೊಲ ಗದ್ದೆಗಳೆಲ್ಲಾ ಅಡಿಕೆ-ರಬ್ಬರು ತೋಟಗಳಾಗಿರುವುದು ಒಂದು ಕಾರಣವಾದರೆ, ಗೋವುಗಳ ಸಾಗಾಣಿಕೆ ಸಂದರ್ಭದಲ್ಲಿ ಭಜರಂಗಿ ಪುಂಡರ ಹಿಂಸೆ ಕೂಡಾ ಸೇರಿಕೊಂಡು ಕುಲ್ಕುಂದ ಜಾತ್ರೆಯ ಹಳೆಯ ಖದರು ಕಳೆಗುಂದುವಂತೆ ಮಾಡಿದೆ. ಇವತ್ತು ಈ ಜಾತ್ರೆಯೇ ಅವಸಾನದ ಅಂಚಿಗೆ ಬಂದು ನಿಂತಿದೆ.

ಅಂತೆಯೇ, ಈ ಭಾಗದ ಆದಿವಾಸಿ ಮಲೆಕುಡಿಯರ 'ಕುಕ್ಕ' ಮತ್ತು 'ಲಿಂಗ' ಎಂಬ ವ್ಯಕ್ತಿಗಳಿಬ್ಬರ ಮೂಲಕ ಪೌರಾಣಿಕ ಹಿನ್ನೆಲೆಯನ್ನು ಹೊಂದಿರುವ ಕಥೆಗಳುಳ್ಳ ಕುಕ್ಕೆ ಸುಬ್ರಹ್ಮಣ್ಯ ದೇವಳ ಕೂಡಾ ಈಗ ಮೂಲ ಹಕ್ಕುದಾರ ಮಲೆಕುಡಿಯರ ದೇವಳವಾಗಿರದೇ ಸರ್ಕಾರದ ಅಧೀನದಲ್ಲಿದ್ದು, ದೇಶಾದ್ಯಂತದಿಂದ ಬರುವ ಜನರು ಭಯ-ಭಕ್ತಿಯಿಂದ ತಂದು ಸುರಿಯುವ ಧನ-ಕನಕವನ್ನು ಸೂರೆಗೈಯುವ ಕಳ್ಳ-ಕಾಕರ ಸ್ವರ್ಗವಾಗಿ ಪರಿವರ್ತನೆಗೊಂಡಿದೆ.

ಸರಿಸುಮಾರು 20 ಕೋಟಿ ರೂಪಾಯಿಗಳ ವಾರ್ಷಿಕ ಆದಾಯವಿರುವ ಸುಬ್ರಹ್ಮಣ್ಯ ದೇವಳದ ಅವ್ಯವಹಾರಗಳ ಕತೆ ಒಂದೆರಡು ಪುಟಗಳಲ್ಲಿ ವಿವರಿಸಿದರೆ ಮುಗಿಯುವಂತಹುದಲ್ಲ, ಪ್ರಸಾದದ ಲಾಡುಗಳಿಂದ ತೊಡಗಿ ಪ್ರವಾಸಿಗರ ಅನುಕೂಲಕ್ಕಾಗಿ ತಲೆ ಎತ್ತಿರುವ ಲಾಡ್ಜುಗಳ ತನಕ ಫಿಟ್ಟಿಂಗ್ ನಡೆಯುತ್ತದೆ. ಪ್ರತಿ ಟೆಂಡರ್‌ನಲ್ಲಿ, ಕಂಟ್ರಾಕ್ಟ್‌ನಲ್ಲಿ ಅಡ್ಜಸ್ಟ್‌ಮೆಂಟ್, ಕಮಿಷನ್, ಕಿಕ್‌ಬ್ಯಾಕ್‌ಗಳದ್ದೇ ದುರ್ವಾಸನೆ!

ದಿನಗೂಲಿಗಳ ಪಗಾರದಿಂದಲೂ ಕಮಿಷನ್ ಕಿತ್ತುಕೊಳ್ಳುವಂತಹ ಗೋಪಿನಾಥ ನಂದೀಶನೆಂಬ ನಟಭಯಂಕರ ದೇವಸ್ಥಾನದ ಹುಂಡಿಯಲ್ಲಿನ ಲಕ್ಷಾಂತರ ಮೌಲ್ಯದ ಬೆಳ್ಳಿ ಕಾಣಿಕೆಗಳನ್ನು ಲಪಟಾಯಿಸುವುದರಲ್ಲಿ ತೊಡಗಿದ್ದ. ಇದರ ಬಗ್ಗೆ ವಿಠಲ ಮಲ್ಯನೆಂಬ ಪಹರೆಗಾರನ ಮೂಲಕ ಬೆಳಕಿಗೆ ಬಂದರೂ ಈ ಮಾಮೂಲಿ ಕ್ಲರ್ಕ್‌ನ ಕಳ್ಳತನವನ್ನು ತಡೆಯಲು ಯಾರಿಂದಲೂ ಆಗಲಿಲ್ಲ. ಈತನಿಗೆ ಸಾಥ್ ನೀಡುತ್ತಾ ಅವ್ಯವಹಾರದ ಅದೆಂತಹ 'ಸಾಕ್ಷಿ'ಯನ್ನೂ ನಿಂತ ನಿಲುವಿನಲ್ಲೇ ಮಾಯಮಾಡಿ ಪರಾಕ್ರಮ ತೋರುವ ಖದೀಮನೇ ದೇವಳದ ಕಚೇರಿಯಲ್ಲಿರುವ ಬಾಲಭಟ್ಟ. ಒಂದು ಕಾಲದಲ್ಲಿ ತಗಡಿನ ಟ್ರಂಕ್ ಹೊತ್ತು ಸುಬ್ರಹ್ಮಣ್ಯ ದೇವಳದ ಚಾಕರಿಗೆ ನಿಂತವರು ಈ ಸುಲಿಗೆಕೋರರು. ವಾಸ್ತವದಲ್ಲಿ ಇವರಿಬ್ಬರು ತಿಂಗಳಿಗೆ ಒಂದೆರಡು ಸಾವಿರ ರೂಪಾಯಿಗಳ ಸಂಬಳ ಪಡೆಯುತ್ತಿದ್ದರೂ, ಯಾವ ಬಂಗಲೆಗೂ ಕಡಿಮೆ ಎನಿಸದ ಅರಮನೆಗಳಲ್ಲಿ ವಾಸಿಸಲು ಸಾಧ್ಯವಾದದ್ದು ಹೇಗೆ? ಇದು ಸಂಪದ್ಭರಿತ ಸುಬ್ರಹ್ಮಣ್ಯದ ಸರ್ವತೋಮುಖ ಸುಲಿಗೆಯಿಂದಲೇ ಹೊರತು ಸುಬ್ರಹ್ಮಣ್ಯನ ಮಹಿಮೆಯಿಂದಂತೂ ಖಂಡಿತಾ ಅಲ್ಲ!

ರಂಗಸ್ವಾಮಯ್ಯ, ವೆಂಕಟೇಶ ಮೂರ್ತಿ ಅಂತೆಲ್ಲಾ ಒಬ್ಬರ ಹಿಂದೆ ಒಬ್ಬ ಇಲ್ಲಿ ಕಾರ್ಯ ನಿರ್ವಹಣಾಧಿಕಾರಿಗಳು ಆಗಿಹೋಗಿದ್ದಾರೆಯೇ ಹೊರತು ಇಲ್ಲಿನ ಕಮಾಯಿಯ ಆಳ-ಅಗಲ ಅವರ ತಲೆಗೆ ಹತ್ತುವ ಮೊದಲೇ ಜಾಗ ಖಾಲಿ ಮಾಡಿದ್ದಾರೆ. ಅವರ ಪೈಕಿ ಇಲ್ಲಿನ ಅಮದನಿಯ ಅಂದಾಜು ಮೊದಲೇ ಇದ್ದ ಸಂಜೀವ ಮಡಿದಾಳ ಎಂಬಾತ ಮಾತ್ರ ಆಡಳಿತ ಮಂಡಳಿ ಇಲ್ಲದಿದ್ದ ಕಾಲದಲ್ಲಿ ಅಧಿಕಾರ ವಹಿಸಿಕೊಂಡು ಬಾಲ ಭಟ್ಟಾದಿಗಳಿಗೆ ಯಾವುದರಲ್ಲೂ ಆಸ್ಪದ ಕೊಡದೆ ತಾನೊಬ್ಬನೇ ಉಂಡೆದ್ದು ಹೋದ. ಪ್ರಸ್ತುತ ಇಲ್ಲಿ ಕಾರ್ಯ ನಿರ್ವಹಣಾಧಿಕಾರಿಯಾಗಿರುವ ವ್ಯಕ್ತಿ ನಿಂಗಯ್ಯ ನುಂಗಣ್ಣ ಅಲ್ಲದಿದ್ದರೂ ಇಲ್ಲಿನ ಕೆಲವರು ನಕಲಿ ರಶೀದಿಗಳನ್ನು ಅಚ್ಚುಹಾಕಿ ಹಗಲು ದರೋಡೆಯಲ್ಲಿ ನಿರತರಾಗಿದ್ದರೂ ಅದೆಲ್ಲಾ ತನಗೆ ಗೊತ್ತೇಇಲ್ಲದಂತಿರುವ ಬೋಳೇ ಬಸವ ಈತ.

ಸದ್ಯ ಇಲ್ಲಿ ಚೆಡ್ಡಿ ಕೃಪಾಪೋಷಿತ ಆಡಳಿತ ಮಂಡಳಿಯೇನೋ ಅಸ್ತಿತ್ವದಲ್ಲಿದೆ. ನರಸಿಂಹ ಮಠದ 90 ಸೆಂಟ್ಸು ಜಾಗವನ್ನು ಡಿಕ್ಲರೇಷನ್‌ನಲ್ಲಿ ಕಬಳಿಸಿದ್ದಲ್ಲದೇ ಸ್ವಾಮೀಜಿಗಳ ನಿಷ್ಠುರ ಕಟ್ಟಿಕೊಂಡಿರುವ ಟಿ.ವಿ. ಭಟ್ಟ ಸುಬ್ರಹ್ಮಣ್ಯ ದೇವಳದ ಹಾಲಿ ಮ್ಯಾನೇಜಿಂಗ್ ಟ್ರಸ್ಟಿ. ಇಪ್ಪತ್ತು ಕೋಟಿ ಆದಾಯದ ಸದರಿ ದೇವಳದ ಟ್ರಸ್ಟಿ ಆಗುವುದೆಂದರೆ ಚಿನ್ನದ ಮೊಟ್ಟೆಯಿಡುವ ಕೋಳಿಯನ್ನು ಹೊಂದಿರುವುದಕ್ಕೆ ಸಮ. ಬಹಳ ಪ್ರಯಾಸದಿಂದ ಆಡಳಿತ ಮಂಡಳಿ ಅಸ್ತಿತ್ವಕ್ಕೆ ಬಂದಿದೆಯಾದರೂ ಮಾಜಿ ಭಕ್ಷಕ ಕೇನ್ಯ ರವೀಂದ್ರನಾಥ ಶೆಟ್ಟಿ ಮತ್ತು ಗ್ಯಾಂಗ್ ಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದಾರೆ. ಅವರ ಭಕ್ಷಣೆಯ ಪ್ರಕರಣ ತನಿಖೆಯ ಹಂತದಲ್ಲಿರುವುದರಿಂದ ಸದರಿ ಟಿ.ವಿ. ಭಟ್ಟರನ್ನೊಳಗೊಂಡ ಆಡಳಿತ ಮಂಡಳಿ ಬರಿಯ 'ಆಟಕ್ಕುಂಟು ಲೆಕ್ಕಕ್ಕಿಲ್ಲ' ಎಂಬಂತೆ ಆಗಿದೆ. ಇದೆಲ್ಲಾ ದೇವಳದ ಚಾಕರಿಗೆ ನಿಂತಿರುವ ದರೋಡೆಕೋರರ ದೋ ನಂಬರ್ ದಂಧೆಗೆ ಅನುಕೂಲಕರವೇ ಆಗಿದೆ.

ಸರ್ಪ ಸಂಸ್ಕಾರವೆಂಬ ಸೂಪರ್ ದಂಧೆ

ಸುಬ್ರಹ್ಮಣ್ಯದಲ್ಲಿ ಕುಲ್ಕುಂದ ಜಾನುವಾರು ಜಾತ್ರೆ ಕಳೆಗುಂದಿರುವುದರಿಂದ ಆ ಸ್ಥಾನವನ್ನೀಗ ಸರ್ಪ ಸಂಸ್ಕಾರವೆಂಬ ಹೊಸ ಫ್ಯಾಷನ್ ಆಕ್ರಮಿಸಿಕೊಂಡಿದೆ. ಇದಕ್ಕೆ ಬಂದಿರುವ ಸಿನಿಮಾ ತಾರೆಯರು ಸುಬ್ರಹ್ಮಣ್ಯದ ಕೀರ್ತಿಯನ್ನು ಇನ್ನಷ್ಟು ಏರಿಸಿದರೆ, ಸಚಿನ್ ತೆಂಡೂಲ್ಕರ್ ಎಂಬ ಕ್ರಿಕೆಟಿಗ ಕೂಡ ಸರ್ಪ ಸಂಸ್ಕಾರ ಮ... ಹೋದಮೇಲೆ ಇದಕ್ಕೆ ಇಂಟರ್‌ನ್ಯಾಷನಲ್ ... ಬಂದುಬಿಟ್ಟಿದೆ.

ಸರ್ಪ ಹತ್ಯಾದೋಷದ ನಿವಾರಣೆಗಾಗಿ ಸುಬ್ರ...ದಲ್ಲಿ ನಡೆಯುವ ಎರಡು ದಿನಗಳ ವಿಶೇಷ ಹರಕೆ... ಸರ್ಪ ಸಂಸ್ಕಾರ. ದಶಮಿ, ಏಕಾದಶಿ, ಗ್ರಹಣ ... ಉಪವಾಸ ದಿನಗಳು ಮತ್ತು ವಾರ್ಷಿಕ ಜಾತ್ರೆಯ... ದಿನಗಳ ಹೊರತಾಗಿ ವರ್ಷವಿಡೀ ಎಡೆಬಿಡದೇ... ಸರ್ಪ ದೋಷ ಸಂಸ್ಕಾರದ ಸೇವಾವಧಿ ನಡೆಯು... ಇದರ ಆರಂಭದ ದಿನ ಕಚೇರಿಯಲ್ಲಿ ರೂ. 1... ತೆತ್ತು ರಶೀದಿ ಪಡೆಯಬೇಕು. ಆನಂತರ ಕುಮಾರ... ನದಿಯಲ್ಲಿ ತೀರ್ಥ ಸ್ನಾನ ಮಾಡಿ ಆದಿ ಸುಬ್ರಹ್ಮಣ್ಯ... ಬೆಳಿಗ್ಗೆ ಎಂಟು ಗಂಟೆಗೆ ಹಾಜರಿರಬೇಕು. ಈ ... ಅಗತ್ಯ ಪಡುವ ನಾಲ್ಕು ಮಂದಿಗೆ ಊಟೋಪಚಾರ... ದೇವಳದಿಂದ ಕಲ್ಪಿಸಲಾಗುವುದು. ಈ ಕ್ರಿಯಾ ... 'ಕ್ರಿಯಾಕರ್ತೃ'ಗಳೆಂದು ಉಪನಯನ ಸಂಸ್ಕಾರ ಹೊ... ಪಿತೃ ಸಂಸ್ಕಾರವನ್ನು ನೆರವೇರಿಸಿದ ಬ್ರಾಹ್ಮಣ ವ...

ಹಂಪಿ ವಿ.ವಿ: ವಂಚಕ ಸಾಕ್ರೆಯ ಕಪಟ ನಾಟಕ



ಆತನ ಪೂರ್ಣ ಹೆಸರು ವೆಂಕಟೇಶ್ ಸಾಕ್ರೆ. ವಂಚನೆಯೇ ಆತನ ಮೂಲ ಕಸುಬು. ಅದರಲ್ಲೂ ವಿದ್ಯಾರ್ಥಿಗಳನ್ನು, ವಿಶ್ವವಿದ್ಯಾಲಯವನ್ನು ವಂಚಿಸುವುದರಲ್ಲಿ ಆತನದು ಎತ್ತಿದ ಕೈ.

ವಿಶ್ವವಿದ್ಯಾಲಯಗಳ ದೂರ ಶಿಕ್ಷಣ ಕೇಂದ್ರಗಳು ಬೇರೆ ಬೇರೆ ಊರುಗಳಲ್ಲಿರುವ ಅಧ್ಯಯನ ಕೇಂದ್ರಗಳ ಮೂಲಕ ಕಾರ್ಯನಿರ್ವಹಿಸುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಅಂತೆಯೇ ಹಂಪಿ ಕನ್ನಡ ವಿಶ್ವವಿದ್ಯಾಲಯದ ದೂರ ಶಿಕ್ಷಣ ಕೇಂದ್ರವೂ ಕೂಡ ರಾಜ್ಯಾದ್ಯಂತ ಹಲವಾರು ಅಧ್ಯಯನ ಕೇಂದ್ರಗಳಿಗೆ ಅನುಮತಿ ಕೊಟ್ಟಿದೆ. ಅವುಗಳಲ್ಲಿ ಬೆಂಗಳೂರಿನ ರಾಜಾಜಿನಗರದಲ್ಲಿರುವ ಭಾಷಾಂತರ ಕೇಂದ್ರವೂ ಒಂದು. ನಯವಂಚಕ ವೆಂಕಟೇಶ್ ಸಾಕ್ರೆಯೇ ಈ ಕೇಂದ್ರದ ಮಾಲಿಕ. ಬೆಂಗಳೂರಿನ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ವಿಶ್ವವಿದ್ಯಾನಿಲಯ ಇವನ ಕೇಂದ್ರಕ್ಕೆ ಮಾನ್ಯತೆಯನ್ನು ಕೊಟ್ಟಿತ್ತು. ಆದರೆ, ಸಾಕ್ರೆಯ ವಂಚನೆಯು ವಿದ್ಯಾರ್ಥಿಗಳ ಭವಿಷ್ಯಕ್ಕೇ ಕುತ್ತು ತರಬಹುದೆಂದು ಯಾರೂ ಊಹಿಸಿರಲಿಲ್ಲ.

ಈ ಅಧ್ಯಯನ ಕೇಂದ್ರವನ್ನು ಈತ ಹಣ ಇಡುವ ಕೋಳಿಯನ್ನಾಗಿ ಪರಿವರ್ತಿಸಿದ್ದಾನೆ. ವಿಶ್ವವಿದ್ಯಾಲಯದ ಹೆಸರಿನಲ್ಲಿ ಅಕ್ರಮವಾಗಿ ಹಣ ಸಂಗ್ರಹಿಸುವುದು, ವಿದ್ಯಾರ್ಥಿಗಳಿಂದ ಪಡೆದ ಸಾವಿರಾರು ರೂಪಾಯಿಗಳನ್ನು ವಿಶ್ವವಿದ್ಯಾಲಯಕ್ಕೆ ಜಮೆ ಮಾಡದೆ ಜೇಬು ತುಂಬಿಸಿಕೊಳ್ಳುವುದು, ಈ ಅಕ್ರಮಗಳನ್ನು ಪ್ರಶ್ನಿಸುತ್ತಿರುವ ವಿ.ವಿ.ಯ ಅಧಿಕಾರಿಗಳಿಗೇ ಬೆದರಿಕೆ ಹಾಕುವುದು ಅವನ ದಿನನಿತ್ಯದ ಚಾಳಿಯಾಗಿಬಿಟ್ಟಿದೆ.

ಅವನ ಕೇಂದ್ರಕ್ಕೆ ವಿಶ್ವವಿದ್ಯಾಲಯವು ಮಾನ್ಯತೆ ನೀಡಿದ್ದನ್ನೇ ಬಂಡವಾಳ ಮಾಡಿಕೊಂಡಿರುವ ಸಾಕ್ರೆ ವಿಶ್ವವಿದ್ಯಾಲಯದ ಲಾಂಛನ, ವಿಸಿಟಿಂಗ್ ಕಾರ್ಡ್ ಇತ್ಯಾದಿಗಳನ್ನು ದುರ್ಬಳಕೆ ಮಾಡುತ್ತಾ ತನ್ನ ಸಂಸ್ಥೆಯು ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಧಿಕೃತ ಪ್ರಾದೇಶಿಕ ಕೇಂದ್ರ ಎಂಬ ಬೋರ್ಡು ತಗಲು ಹಾಕಿಕೊಂಡು, ಅದನ್ನೇ ಜಾಹಿರಾತುಗಳಲ್ಲಿ ಪ್ರಕಟಿಸಿ ಈತನಕ ಲಕ್ಷಾಂತರ ರೂಪಾಯಿಗಳನ್ನು ನುಂಗಿ ನೀರು ಕುಡಿದಿದ್ದಾನೆ. ಇದನ್ನು ಅಧ್ಯಯನ ಕೇಂದ್ರದ ನಿರ್ದೇಶಕರು ಆಕ್ಷೇಪಿಸಿದರೆ, "ನಿರ್ದೇಶಕರಾದ ತಾವು ತಮ್ಮ ವಿಸಿಟಿಂಗ್ ಕಾರ್ಡ್‌ನಲ್ಲಿ ವಿಶ್ವವಿದ್ಯಾಲಯದ ಹೆಸರನ್ನು ಬಳಸಿರುವುದು ಅಪರಾಧವಲ್ಲವೇ? ಇದಕ್ಕೆ ವಿಶ್ವವಿದ್ಯಾಲಯದಿಂದ ಅನುಮತಿ ಪಡೆದಿದ್ದೀರಾ?'' ಎಂದು ಹರಿಹಾಯುತ್ತಾನೆ. ಇನ್ನು ಒಂದಿಷ್ಟು ದಿನ ಇವನನ್ನು ಹೀಗೇ ಬಿಟ್ಟರೆ ತಾನೇ ವಿಶ್ವವಿದ್ಯಾಲಯದ ಕುಲಪತಿ ಅಂದರೂ ಅನ್ನಬಹುದು!

ವಿಶ್ವವಿದ್ಯಾಲಯಕ್ಕೆ ಪ್ರತಿ ಅಧ್ಯಯನ ಕೇಂದ್ರವು ವಿಷಯಾವಾರು ಸ್ನಾತಕೋತ್ತರ ಹಾಗೂ ಡಿಪ್ಲೊಮೋ ಕೋರ್ಸ್‌ಗಳ ನೋಂದಣಿ ಶುಲ್ಕವನ್ನು ಪಾವತಿಸಿದ ನಂತರವೇ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬೇಕು. ಆ ನಂತರವಷ್ಟೇ ವಿಶ್ವವಿದ್ಯಾಲಯವು ವಿದ್ಯಾರ್ಥಿಗಳಿಗೆ ಅಧ್ಯಯನ ಸಾಮಗ್ರಿಗಳನ್ನು ಒದಗಿಸುತ್ತದೆ. ಆದರೆ ಸಾಕ್ರೆಯ ಸಂಸ್ಥೆಯು ಈವರೆಗೆ ಅಧ್ಯಯನ ಕೇ... ಕೋರ್ಸ್‌ಗಳ ನೋಂದಣಿ ಶುಲ್ಕವನ್ನು ಪಾವತಿಸಿ... ಇಲ್ಲ. ಇದರರ್ಥ ಆತ ವಿದ್ಯಾರ್ಥಿಗಳಿಂದ ಹಣ... ಪಡೆದಿಲ್ಲವೆಂದೇನಲ್ಲ, ನಿಗದಿತ ಹಣಕ್ಕಿಂತಲೂ ... ಮೊತ್ತವನ್ನು ಆತ ವಿದ್ಯಾರ್ಥಿಗಳಿಂದ ಪೀಕಿಸಿದ್ದಾನೆ. ... ಅದನ್ನು ವಿಶ್ವವಿದ್ಯಾಲಯಕ್ಕೆ ಜಮಾ ಮಾಡುವ ಬ... ತನ್ನ ಜೇಬಿಗೆ ಜಮಾಯಿಸಿಕೊಂಡಿದ್ದಾನಷ್ಟೆ.

ಪರೀಕ್ಷೆಗಳು ಹತ್ತಿರವಾಗುತ್ತಿರುವುದರಿ... ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊ... ವಿಶ್ವವಿದ್ಯಾಲಯವು ಅಧ್ಯಯನ ಸಾಮಗ್ರಿಗ... ಕಳಿಸಿಕೊಟ್ಟಿದೆ. ಇಷ್ಟಾದ ಮೇಲೂ ಈತ ಕೋ... ಶುಲ್ಕವನ್ನು ಪಾವತಿ ಮಾಡದೆ, ಎಲ್ಲ ತಪ್ಪು... ವಿಶ್ವವಿದ್ಯಾಲಯದ ಕಡೆಯಿಂದ ನಡೆದಿದೆ ಎಂ... ವಿಶ್ವವಿದ್ಯಾಲಯಕ್ಕೆ ಒಂದರ ಮೇಲೊಂದರಂತೆ ಪತ್ರ... ಬರೆದು ವಿದ್ಯಾರ್ಥಿಗಳನ್ನು ಹಾದಿ ತಪ್ಪಿಸಿದ್ದಾನೆ.

ಇಷ್ಟೆಲ್ಲಾ ದಾಂಧಲೆಗಳ ನಡುವೆಯೂ



ಮತ್ತವಿದ್ದು ಈ ವ್ಯವಸ್ಥೆಯನ್ನು ದೇವಳದಿಂದ ಮಾಡಲಾಗುವುದು ಮತ್ತು ಈ ಕರ್ತೃಗಳಿಗೆ ದಕ್ಷಿಣೆ ಯಾಗಿ 150 ರೂಪಾಯಿಗಳನ್ನು ದೇವಳದಿಂದ ಕೊಡಲಾಗುತ್ತದೆ.

ಈಗ ದಿನದಿಂದ ದಿನಕ್ಕೆ ಜನಪ್ರಿಯವಾಗುತ್ತಿರುವ ಈ 'ಸರ್ಪ ಸಂಸ್ಕಾರ' ಕ್ರಿಯೆಯು ದಿನವಹಿ ಸರಾಸರಿ 120 ರಷ್ಟು ನಡೆಯುತ್ತದೆ. ಹಾಗೆಯೇ, ಈ ಸರ್ಪ ಸಂಸ್ಕಾರ ಜನಪ್ರಿಯ


ಟಿ.ಎನ್. ಸೀತಾರಾಮ್‌ರ ಪಾದಪೂಜೆ

ಮಾಡಿಸುತ್ತಾನೆ. ಕ್ರಿಯಾಕರ್ತೃ ವನ್ನು ನೇಮಿಸುತ್ತಾನೆ. ದೇವಳ ದಿಂದ ಇಂತಹ ಕ್ರಿಯಾಕರ್ತೃ ಗಳೆಂಬ ಮುಳುಗು ತಜ್ಞರಿಗೆ 150 ರೂಪಾಯಿ ದಕ್ಷಿಣೆ ನೀಡಿದರೆ, ಈ ದಕಾಯಿತ ಏಜೆಂಟರುಗಳು 300 ರೂಪಾಯಿ ಕೊಡುತ್ತಾರೆ. ಹೀಗೆ ಒಂದು ಸರ್ಪಸಂಸ್ಕಾರದಲ್ಲಿ ನಿಂತ ನಿಲುವಲ್ಲೇ ಇವರು ಆರೇಳು ಸಾವಿರ ಕಿಸೆಗಿಳಿಸುತ್ತಾರೆ.

...ಗಳಲ್ಲಿ ಒಂದು ವ್ಯವಸ್ಥಿತ ಜಾಲವೇ ಕಾರ್ಯಾಚರಿಸು ತ್ತು, ಅವರೆಲ್ಲ ಹಗಲು ದರೋಡೆಯಲ್ಲಿ ನಿರತರಾಗಿರು ದು ಬೆಳಕಿಗೆ ಬಂದಿದೆ. ಈ ಸರ್ಪ ಸಂಸ್ಕಾರದ ದಂಧೆಯ ಏಜೆಂಟರಾಗಿ ದುಡಿದೇ ಅಪಾರ ಹಣ ಮಾಯಿಸುವ ದೊಡ್ಡ ಗ್ಯಾಂಗೇ ಸುಬ್ರಹ್ಮಣ್ಯದಲ್ಲಿ ಣಸಿಗುತ್ತದೆ.

ಸುಬ್ರಹ್ಮಣ್ಯದಲ್ಲಿಯೇ ಸುಮಾರು 24 ಮಂದಿ ಸರ್ಪ ಸ್ಕಾರದ ಏಜೆಂಟರುಗಳಿದ್ದು ಅವರ ಕೈಕೆಳಗೆ ತಲಾ ದರಿಂದ 25 ಕ್ರಿಯಾಕರ್ತೃಗಳಿದ್ದು ವರೆಲ್ಲ ಜನರನ್ನು ವಂಚಿಸುವಲ್ಲಿ ರತರಾಗಿದ್ದಾರೆ. ಇವರ ದಂಧೆಯ ರೂಪ ಯಾವ ರೀತಿಯದ್ದೆಂದರೆ- ಂಗಳೂರು, ಮೈಸೂರು ಸೇರಿದಂತೆ ೕಶವ್ಯಾಪಿ ಪ್ರಮುಖ ನಗರಗಳಲ್ಲಿ ಖ್ಯಾತ ಜ್ಯೋತಿಷ್ಯರನ್ನು ಇವರು ಮೊದಲೇ ಬುಕ್ ಮಾಡಿರುತ್ತಾರೆ. ಈ ಜ್ಯೋತಿಷಿಗಳು ತಮ್ಮ ಬಳಿ ಅಲವತ್ತು ಂಡು ಬರುವ ಬಕ್ರಾ ಗಿರಾಕಿಗಳಿಗೆ ನಗೆ ಸರ್ಪದೋಷವಿದೆ. ಸುಬ್ರಹ್ಮಣ್ಯ ಲ್ಲಿ ಇಂಥವರ ಬಳಿಗೆ ಹೋಗಿ ಸರ್ಪ ಸ್ಕಾರ ಮಾಡಿಸಿರಿ'' ಎಂದು ಸಲಹೆ ೕಡುತ್ತಾರೆ.

ಹೀಗೆ ಜ್ಯೋತಿಷಿ ಹೇಳಿದ ದ್ಮಿಯನ್ನು ಸಂಪರ್ಕಿಸಿದಾಗ ಆತ ರ್ಪದೋಷ'ಕ್ಕೀಡಾದ ವ್ಯಕ್ತಿಗೆ ಸರ್ಪ ಸ್ಕಾರ ಮಾಡಿಸುವ ಎಲ್ಲಾ ಜವಾಬ್ದಾರಿ ೂತ್ತು 6,000 ರಿಂದ 8,000 ದಷ್ಟು ೕಸು ವಸೂಲು ಮಾಡುತ್ತಾನೆ. ದಕಲ್ಲಿ ಆತ 1,500 ರೂ.ಗಳನ್ನು ತ್ತು ದೇವಳದ ಕಚೇರಿಯಲ್ಲಿ ರಶೀದಿ

ಈ ಸರ್ಪ ಸಂಸ್ಕಾರದ ಬ್ರೋಕರ್‌ಗಿರಿಗಾಗಿ ಸುಬ್ರಹ್ಮಣ್ಯದಲ್ಲಿ ಎಂತಹ ಪೈಪೋಟಿ ನಡೆಯುತ್ತಿದೆ ಎಂದರೆ ಇತ್ತೀಚೆಗೆ ಗೋದಾನದ ಹೊತ್ತಿಗೆ ಭಕ್ತಾದಿ ಗಳಿಂದ ಹಣ ಪೀಕುವ ವಿಚಾರದಲ್ಲಿ ನಗ್ರಿ ರಾಧಾಕೃಷ್ಣ ಎಂಬಾತ ಭಕ್ತನೋರ್ವ ಕೊಟ್ಟ 500 ರೂಪಾಯಿ ಕಡಿಮೆ ಎಂದು ಆ ಹಣವನ್ನು ಎಸೆದು ಪ್ರತಿಭಟಿಸಿದ್ದು, ಇನ್ನೋರ್ವ ಏಜೆಂಟ್ ಶ್ರೀನಿವಾಸ ಆಚಾರ್ಯ ಅಲ್ಲೇ ಆತನಿಗೆ ಹಲ್ಲೆ ಮಾಡಿದ್ದು ಕೂಡಾ ನಡೆದಿದೆ. ಹೀಗೆ ದೇವರುದಿಂಡಿರ ಬಗ್ಗೆ ರವಷ್ಟು ಭಯ- ಭಕ್ತಿಯಿಲ್ಲದೇ ಬರುವ ಕಮಿಷನ್ ಹಣಕ್ಕೆ ಲಡಾಯಿ ಮಾಡುವ ಈ ನೀಚರು, ಕೆಲವೊಮ್ಮೆ ಭಕ್ತಿಯ ಪರಾಕಾಷ್ಠೆಯಲ್ಲಿರುವ ಭಕ್ತರ ಕಿಸೆಗೇ ಕತ್ತರಿ ಹಾಕಿ ಹಣ ಲಪಟಾಯಿಸುವ ಪ್ರಸಂಗಗಳೂ ಆಗಾಗ ನಡೆಯು ತ್ತಿರುತ್ತವೆ.


ಕುಕ್ಕೆಗೆ ಭೇಟಿ ನೀಡಿದ ಸಚಿನ್

ಆದಿ ಸುಬ್ರಹ್ಮಣ್ಯದಲ್ಲಿ ಸರ್ಪ ಸಂಸ್ಕಾರದ ಒಂದು ಭಾಗವಾದ ಗೋದಾನ ಸಂದರ್ಭದಲ್ಲಿ ತುಂಬಾ ರಶ್ ಇರುತ್ತದೆ. ಈ ಸಂದರ್ಭದಲ್ಲಿ ಸಂಸ್ಕಾರನಿರತ ಭಕ್ತರು ಭಕ್ತಿಯ ಪರಾಕಾಷ್ಠೆಯಲ್ಲಿ ಮುಳುಗಿದಾಗ, ಅದಕ್ಕೇ ಕಾದು ನಿಂತಿರುವ ಕ್ರಿಯಾಕರ್ತೃಗಳಲ್ಲಿಯೇ ಪರಿಣಿತ ಕಳ್ಳರು ಭಕ್ತರ ಪರ್ಸ್‌ಗಳನ್ನು ಎಗರಿಸುವುದಕ್ಕೆ ಹೊಂಚು ಹಾಕುತ್ತಿರುತ್ತಾರೆ. ದೇವಸ್ಥಾನದ ಬಹುಪಾಲು ಸಿಬ್ಬಂದಿಗಳೇ ಸರ್ಪಸಂಸ್ಕಾರದ ಏಜೆಂಟರುಗಳಾಗಿದ್ದು ಭಕ್ತರ ದರೋಡೆಯಲ್ಲಿ ನಿರತರಾಗಿದ್ದಾರೆ.

ಕುಕ್ಕೆ ಸುಬ್ರಹ್ಮಣ್ಯಕ್ಕೆ ಹೋದೀರಿ ಜೋಕೆ. ಅಲ್ಲಿ ನಿಮ್ಮ ತಲೆ ಮತ್ತು ಜೇಬು- ಎರಡಕ್ಕೂ ಕತ್ತರಿ ಬೀಳುತ್ತದೆ!!

■ ವರದಿಗಾರ

ದ್ಯಾರ್ಥಿಗಳ ಅಡ್ಮಿಶನ್ ಅನ್ನು ಮುಂದುವರೆಸಿದ್ದಾನೆ. ಯಾಕೆಂದರೆ, ಅಲ್ಲಿಯೇ ಆತನಿಗೆ ಪುಷ್ಕಳ ಕಮಾಯಿ ಗುವುದು. ಭಾಷಾಂತರ ಡಿಪ್ಲೊಮೋ ಕೋರ್ಸಿಗೆ ,100 ರೂಪಾಯಿ ಶುಲ್ಕವಿದ್ದರೆ, ಹೆಚ್ಚುವರಿ 2,500 ರೂಪಾಯಿಗಳನ್ನು ಅಕ್ರಮವಾಗಿ ಪಡೆದಿದ್ದಾನೆ. ದುರಂತ ಂದರೆ, ಈ ರೀತಿ ಅಕ್ರಮವಾಗಿ ಪಡೆದ ದುಡ್ಡಿಗೆ ನ್ನಡ ವಿಶ್ವವಿದ್ಯಾಲಯದ ಲಾಂಛನ ಮತ್ತು ಹೆಸರಿರುವ ಶೀದಿಯನ್ನೂ ಕೊಟ್ಟಿದ್ದಾನೆ! ವಂಚನೆಗೂ ಒಂದು ಮಿತಿ ಬೇಡವೇ?

ವಿದ್ಯಾರ್ಥಿಗಳಿಂದ ಅಧಿಕೃತವಾಗಿ ಕಟ್ಟಿಸಿಕೊಂಡ ,100 ರೂಪಾಯಿ ಶುಲ್ಕದಲ್ಲಿಯೂ ಆತ ವಿಶ್ವವಿದ್ಯಾ ಲಯಕ್ಕೆ ಪಾವತಿಸಿದ್ದು ಕೇವಲ 500 ರೂಪಾಯಿಯನ್ನು ಮಾತ್ರ. ವಿಶ್ವವಿದ್ಯಾಲಯದಿಂದ ಸಕಾಲದಲ್ಲಿ ಪತ್ರಗಳು ಬಾರದಿದ್ದಾಗ "ವಿಶ್ವವಿದ್ಯಾಲಯವೇ ನಮಗೆ ಈತನಕ ಳಿಸಿಲ್ಲ'' ಎಂದು ತಪ್ಪನ್ನು ವಿ.ವಿ.ಯ ಮೇಲೆ ಹಾಕಿದ್ದಾನೆ. ಈತ ದುಡ್ಡು ಕಳಿಸಿಕೊಟ್ಟರೆ ತಾನೆ ವಿವಿ ಆ ಕಡೆಯಿಂದ ಪತ್ರವನ್ನು ಕಳಿಸೋದು.?

ಈಗ ಈತ ನಡೆಸಿರುವ ಅಕ್ರಮ ಚಟುವಟಿಕೆಗಳ ಬಗ್ಗೆ ವಿ.ವಿ.ಯು ವಿವರಣೆ ಕೋರಿದೆ. ಆದರೆ, ಇವನ ಕೊಬ್ಬು ಎಷ್ಟಿದೆಯೆಂದರೆ, ಈ ರೀತಿ ವಿವರಣೆ ಕೋರಿದ ನಿರ್ದೇಶಕರನ್ನೇ ಅಮಾನತ್ತಿನಲ್ಲಿಡಬೇಕು ಎಂದು ವಿಶ್ವ ವಿದ್ಯಾಲಯದ ಕುಲಸಚಿವರಿಗೆ ಪತ್ರ ಬರೆದಿದ್ದಾನೆ!

ಈತ ಮಾಡಿದ ಇನ್ನೊಂದು ಕಪಿಚೇಷ್ಟೆಯನ್ನೂ ನೋಡಿ. ವಿಶ್ವವಿದ್ಯಾಲಯಕ್ಕೆ ಕನಿಷ್ಠ ಶುಲ್ಕವನ್ನು ಕಟ್ಟದೇ ಇರುವುದರಿಂದ ಅವನ ಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಪರ್ಸನಲ್ ... ಮಾಡುವ ಸಂಪರ್ಕ ತರಗತಿಗಳನ್ನು ನಡೆಸಿರಲಿಲ್ಲ, ವಿದ್ಯಾರ್ಥಿಗಳು ಇದನ್ನು ಪ್ರಶ್ನಿಸಿದಾಗ "ಹಂಪಿ ಯಲ್ಲಿಯೇ ವಿಶ್ವವಿದ್ಯಾಲಯ ಸಂಪರ್ಕ ತರಗತಿ ಗಳನ್ನು ಆಯೋಜಿಸಿದೆ, ನಾನು ಹಂಪಿ ವಿ.ವಿ.ಗೆ ಹೋಗು ತ್ತಿದ್ದೀನಿ, ನೀವು ಬನ್ನಿ'' ಎಂದು ಮುಖ್ಯವಾಗಿ ಮಹಿಳಾ ವಿದ್ಯಾರ್ಥಿಗಳನ್ನು ಪುಸಲಾಯಿಸಿ ಅವರನ್ನು ಹಂಪಿಗೆ ಕರೆತಂದಿದ್ದಾನೆ. ದಿನಪತ್ರಿಕೆಯೊಂದರ ಉಪಸಂಪಾದಕ ರಾಗಿರುವ ವಿದ್ಯಾರ್ಥಿನಿಯೊಬ್ಬರು ಇವನನ್ನು ನಂಬಿ ಬೆಂಗಳೂರಿನಿಂದ ಹಂಪಿಗೆ ಬಂದರೆ ಬೆಂಗಳೂರಿನಿಂದ ಯಾವ ವಿದ್ಯಾರ್ಥಿಗಳೂ ಹಂಪಿಗೆ ಬಂದೇ ಇರಲಿಲ್ಲ! ಅಲ್ಲಿ ಈ ಮಹಾಶಯನಿಗಾಗಿ ಸಂಪರ್ಕ ತರಗತಿಗಳನ್ನು ವಿ.ವಿ.ಯು ಆಯೋಜಿಸಿಯೂ ಇರಲಿಲ್ಲ!! ಈ ವಿದ್ಯಾರ್ಥಿನಿಯು ವಿ.ವಿ. ಕುಲಪತಿಗಳಿಗೆ ಲಿಖಿತ ದೂರನ್ನು ನೀಡಿ "ಸೆಪ್ಟೆಂಬರ್ 10ರಿಂದ ಸಂಪರ್ಕ ತರಗತಿಗಳಿವೆ ಎಂದು ಸಾಕ್ರೆಯು ತನ್ನನ್ನು ಬೆಂಗ ಳೂರಿನಿಂದ ಹಂಪಿಗೆ ಕರೆದುಕೊಂಡು ಬಂದು ಮಾನಸಿಕ ಹಿಂಸೆ ನೀಡಿದ್ದಾರೆ, ಉಪ ಸಂಪಾದಕಿಯಾಗಿ ಕೆಲಸ ಮಾಡುತ್ತಿರುವ ನನ್ನಂಥವರಿಗೆ ಈ ರೀತಿ ವಂಚನೆ ಮಾಡಿರುವುದು ಬೇಸರ ಮೂಡಿಸಿದೆ'' ಎಂದು ಹೇಳಿ ದ್ದಾರೆ.

ಸಾಕ್ರೆಯ ಭಾಷಾಂತರ ಸಂಸ್ಥೆಯ ಅಕ್ರಮಗಳ ಬಗ್ಗೆ, ಹಣದ ದುರುಪಯೋಗದ ಬಗ್ಗೆ, ವಿಶ್ವವಿದ್ಯಾಲಯಕ್ಕೆ ಪಾವತಿ ಮಾಡದೆ ಉಳಿಸಿಕೊಂಡಿರುವ 82,000 ರೂಪಾಯಿಗಳ ಬಗ್ಗೆ, ವಿಶ್ವವಿದ್ಯಾಲಯದ ಹೆಸರನ್ನು ದುರುಪಯೋಗ ಮಾಡಿಕೊಂಡಿದ್ದರ ಬಗ್ಗೆ ವಿವರಣೆ ಕೋರಿದೆ. ಇಷ್ಟೆಲ್ಲಾ ರಾದ್ಧಾಂತಗಳು ನಡೆಯುತ್ತಿರು ವಾಗಲೂ ಈತ "ಹಂಪಿ ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ಕೇಂದ್ರದ ಪ್ರಾದೇಶಿಕ ಕೇಂದ್ರ'' ಎಂದು ದಿಢೀರನೆ ವಿಜಯ ಕರ್ನಾಟಕ (17.11.07) ಮತ್ತು ಪ್ರಜಾವಾಣಿ (21.11.07 ಮತ್ತು 9.12.07) ದಿನಪತ್ರಿಕೆ ಗಳಲ್ಲಿ ಪ್ರಕಟಣೆ ನೀಡಿ, ವಿದ್ಯಾರ್ಥಿಗಳಿಂದ ಹಣ ಲಪಟಾ ಯಿಸಲು ಮತ್ತೆ ಆರಂಭಿಸಿದ್ದಾನೆ. ಇದಕ್ಕೆ ವಿಶ್ವವಿದ್ಯಾ ಲಯವು ಪತ್ರಿಕಾ ಪ್ರಕಟಣೆ ಹೊರಡಿಸಿ ವಿದ್ಯಾರ್ಥಿಗಳು ಇವನಿಂದ ಮೋಸ ಹೋಗಬಾರದೆಂದು ಮನವಿ ಮಾಡಿದೆ. ವಿಶ್ವವಿದ್ಯಾ ಲಯದ ಅಧಿಕೃತ ಅನುಮತಿ ಇಲ್ಲದೆ ಇವನು ಸಾರ್ವಜನಿಕರನ್ನು ತಪ್ಪು ಹಾದಿಗೆ ಎಳೆಯುತ್ತಿರುವ ಬಗ್ಗೆ ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದೆ. ಆದರೆ, ಇಷ್ಟು ಮಾಡಿದರೆ ಸಾಕೆ?

ಈತ ಮಾಡಿರುವ, ಮಾಡುತ್ತಿರುವ ಅನಾಚಾರಗಳು ಹೀಗೇ ಮುಂದುವರೆದರೆ ಇವನಿಂದ ವಂಚಿತರಾದ ವಿದ್ಯಾರ್ಥಿಗಳೇ ಇವನನ್ನು ಬೆಂಗಳೂರಿನ ಬೀದಿಯಲ್ಲಿ ಬಟ್ಟೆ ಬಿಚ್ಚಿ ಮೆರವಣಿಗೆ ಮಾಡುತ್ತಾರಷ್ಟೆ.


■ ವರದಿಗಾರ

"ಕಾಪಾಡಿ... ಕಾಪಾಡಿ..."

ಕೊಪ್ಪಳ ಕಾಂಗ್ರೆಸ್ ಕೂಗು


ಏನೇ ಆಗಲಿ ಕಾಂಗ್ರೆಸನ್ನು ರಾಜ್ಯದಲ್ಲಿ ಚಟ್ಟಕ್ಕೇರಿ ಸಿಯೇ ತೀರಬೇಕೆಂದು ರಾಜ್ಯ ಕಾಂಗ್ರೆಸ್ ನಾಯಕರು ಪಣತೊಟ್ಟಂತಿದೆ. ಭೂಗಳ್ಳ-ಲೂಟಿಕೋರ ಬಿಜೆಪಿ-ಜೆಡಿಎಸ್ ಸರ್ಕಾರದ ವಿರುದ್ಧ ಒಂದು ದಿನವೂ ತುಟಿ ಎರಡು ಮಾಡದ ಧರಂ-ಖರಂ ಕನಿಷ್ಠ ಕಾಂಗ್ರೆಸ್ಸನ್ನಾ ದರೂ ಉದ್ಧಾರ ಮಾಡಲು ಪ್ರಯತ್ನಿಸಿದರೆ ಎಂದರೆ ಅದೂ ಇಲ್ಲ, ಅದಕ್ಕೆ ಕೊಪ್ಪಳ ಜಿಲ್ಲಾ ಕಾಂಗ್ರೆಸ್ ಒಂದು ಜೀವಂತ ಉದಾಹರಣೆ.

ಕಳೆದ ನಾಲ್ಕು ವರ್ಷಗಳಲ್ಲಿ ಕೊಪ್ಪಳ ಜಿಲ್ಲಾ ಕಾಂಗ್ರೆಸ್ ತಲುಪಿರುವ ಹೀನಾಯ ಸ್ಥಿತಿ ನೋಡಿದರೆ ಇದು ಯಾರಿಗಾದರೂ ಅರ್ಥವಾಗುತ್ತೆ. ಗೆದ್ದ ಇಬ್ಬರು ಪ್ರತಿನಿಧಿಗಳು ಮತ್ತು ಉಳಿದ ನಾಯಕರು ತಮ್ಮ ಸ್ವಾರ್ಥ, ತತ್ವ-ಸಿದ್ಧಾಂತರಹಿತ ರಾಜಕೀಯ, ನಿಷ್ಕ್ರಿಯತೆ ಗಳನ್ನೇ ಮೆರೆದುಕೊಂಡು ಬಂದಿದ್ದಾರೆ. ಈಗ ಚುನಾವಣೆ ಸನ್ನಿಹಿತವಾಗುತ್ತಿರುವ ದಿನಗಳಲ್ಲೂ ಅವರು ಇದನ್ನೇ ಮುಂದುವರೆಸಿದರೆ ಜಿಲ್ಲೆಯಲ್ಲಿ ಕಾಂಗ್ರೆಸ್ ನಿರ್ನಾಮ ವಾಗುವುದು ನಿಶ್ಚಯ.


ರಾಮುಲು

ಇದನ್ನೆಲ್ಲಾ ಗಮನಿಸಿದ ಕಾಂಗ್ರೆಸ್ ಹಿರಿಯರು ಜಿಲ್ಲೆಯ ಚುಕ್ಕಾಣಿಯನ್ನು ಮತ್ತೆ ರಾಮುಲು ಕೈಗೆ ಕೊಡಬೇಕೆಂಬ ಬೇಡಿಕೆಯನ್ನು ಕೆಪಿಸಿಸಿಯ ಮುಂದಿ ಟ್ಟಿದ್ದರು. ಆದರೆ, ಕೆಪಿಸಿಸಿಗೆ ದೇವೇ ಗೌಡರು ಮಾಟ-ಮಂತ್ರ ಮಾಡಿಸಿ ದ್ದಾರೆಯೆ ಎಂಬ ಅನುಮಾನ ಬರು ವಷ್ಟು ಸುಸ್ತು. ಕಳೆದ ನಾಲ್ಕು ವರ್ಷಗಳಲ್ಲಿ ನಾಲ್ಕು ನಗರಸಭೆಗಳು, ಎರಡು ಎಪಿಎಂಸಿಗಳು ಮತ್ತು ಜಿಲ್ಲಾಪಂಚಾಯತಿ ಕಾಂಗ್ರೆಸ್ ಕೈತಪ್ಪಿ ಹೋಗಿವೆ. ಈ ಅಂಕಿ ಅಂಶಗಳನ್ನೆಲ್ಲಾ ವಿವರಿಸಿ ಹೇಳಿದರೂ ಖರ್ಗೆಯಾಗಲೀ, ಧರಂ ಆಗಲೀ ಕಿಮಿಕ್ಕೆನ್ನುವುದಿಲ್ಲ. ತಮ್ಮ ಸಹಾಯ ಪಡೆದ ನಾಯಕರೇ ಇಂದು ಹೈಕಮಾಂಡ್‌ನಲ್ಲಿ ತಮ್ಮ ವಿರುದ್ಧವೇ ಗುರ್ರ್ ಎನ್ನುತ್ತಿರುವುದನ್ನು ಕಂಡು 'ಹಾಳಾಗಿ ಹೋಗಿ' ಎಂದು ರಾಮುಲು ಮತ್ತೆ ಮೌನಕ್ಕೆ ಶರಣಾಗಿದ್ದಾರೆ.

ಜಿಲ್ಲಾ ಕಾಂಗ್ರೆಸ್ ಇಂದು ಮಾಲಿಕನಿಲ್ಲದ ಮೈದಾನ ವಾಗಿಬಿಟ್ಟಿದೆ. ನಾಯಕರುಗಳಂತೂ ಸಿಕ್ಕಷ್ಟು ಮೇಯ್ದು ಪಕ್ಷಕ್ಕೆ ಚೂರಿ ಇಕ್ಕುವ ಕೆಲಸವನ್ನೇ ಮಾಡುತ್ತಾ ಬಂದಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ರಾಮುಲು ನಿವೃತ್ತಿಯಾದ ಮೇಲೆ ಅವರ ಸ್ಥಾನವನ್ನು ತುಂಬಬಲ್ಲ ರೆಂದು ಎಣಿಸಿದ್ದ ಸಂಸದ ವಿರುಪಾಕ್ಷಪ್ಪ ಒಮ್ಮೊಮ್ಮೆ ತಲೆಬುಡವಿಲ್ಲದೆ ಮಾತನಾಡುತ್ತಾರೆ.


ಕರುಣಾಕರ ರೆಡ್ಡಿ

ಒಮ್ಮೆಯಂತೂ ದಿಗ್ರಿ ಕಾಲೇಜಿಗೆ ಒಂದು ಬಿಲ್ಡಿಂಗ್ ಬೇಕು ಅಂತ ಜನ ಧರಣಿ ಕುಳಿತಿದ್ದಾಗ "ಅವರ ವಿರು ದ್ಧವೇ ನಾನು ಧರಣಿ ಕುಳಿತುಕೊಳ್ಳು ತ್ತೇನೆ'' ಎಂದು ಹೇಳಿ ನಗೆಪಾಟಲಿಗೀ ಡಾದ ಮನುಷ್ಯ. ಮೊನ್ನೆ ಜಿ.ಪಂ. ಸಭೆಯಲ್ಲಿ ಅಂಗನವಾಡಿ ಕಾರ್ಯಕರ್ತೆ ಯರನ್ನೇ ಹೀಯಾಳಿಸಿ ಮಾತನಾಡಿ ಉದ್ಧಟತನ ಮೆರೆದಿದ್ದಾರೆ. ಕಮ್ಯೂನಿಸ್ಟ್ ಸಂಘಟನೆಗಳನ್ನು ಕಂಡರೆ ಉರಿದು ಬೀಳುವ ವಿರುಪಾಕ್ಷಪ್ಪ ಒಂದು ಕಾಲದಲ್ಲಿ ಕಮ್ಯೂನಿಸ್ಟನೇ!

ಶಾಕರಾಗಿದ್ದ ಬಸವರಾಜ ರಾಯರೆಡ್ಡಿ, ಬಸವರಾಜ ಹಿಟ್ನಾಳ, ಸಂಸದ ವಿರುಪಾಕ್ಷಪ್ಪ – ಈ ಮೂವರು ಸೇರಿ ಜಿಲ್ಲಾ ಕಾಂಗ್ರೆಸನ್ನು ಯಾವ ಪರಿ ಮೂರಾಬಟ್ಟೆ ಮಾಡಿಬಿಟ್ಟಿದ್ದಾರೆಂದರೆ ಪಕ್ಷದ ಅಧ್ಯಕ್ಷ ಕೊಟ್ಟ ವಿಪ್ ಉಲ್ಲಂಘಿಸಿ ಜಿ.ಪಂ.ನಲ್ಲಿ ಜೆಡಿಎಸ್‌ನ್ನು ಅಧಿಕಾರಕ್ಕೆ ತಂದಿದ್ದಾರೆ! ಒಂದು ಹಂತದಲ್ಲಂತೂ ಡಿಸಿಸಿಗೆ ತಮ್ಮ ಕೈ ಚೇಲಗಳನ್ನೇ ಅಧ್ಯಕ್ಷರಾಗಿ ನೇಮಿಸಲು ಮುಂದಾಗಿ ಆನಂತರ ಅದರಲ್ಲಿ ಸೋತಿದ್ದ ಈ ಮುಖಗೇಡಿಗಳು ಲಲಿತಾ ರಾಣಿ ಅಧ್ಯಕ್ಷೆಯಾದಾಗ ಒಂಚೂರೂ ಸಹಕಾರ ನೀಡಲಿಲ್ಲ. "ಒಬ್ಬ ಹೆಣ್ಣಿನ ಮುಂದೆ ನಾವು ನಿಲ್ಲ ಬೇಕಾ?'' ಎಂಬ ಧಿಮಾಕು ಮಾಡುವ ಈ ಜನ ನಾಳೆ ಟಿಕೆಟ್‌ಗಾಗಿ ಸೋನಿಯಾ ಎಂಬ ಹೆಣ್ಣಿನ ಮುಂದೆಯೇ ಹಲ್ಲುಕಿರಿಯುತ್ತಾ ನಮಸ್ಕಾರ ಹಾಕ ಬೇಕೆಂಬುದನ್ನೂ ಮರೆತಿರುವಂತಿದೆ.

ರಾಮುಲು ಅವರ ಮೌನ ಮತ್ತು ಇಂದಿನ ಕಾಂಗ್ರೆಸ್ ನಾಯಕರ ಕಚ್ಚಾಟವನ್ನು ಕಂಡೇ ಹೊರ ಜಿಲ್ಲೆಯ ಗಣಿ ಧಣಿಗಳು ಕೊಪ್ಪಳಕ್ಕೆ ಲಗ್ಗೆ ಇಟ್ಟಿದ್ದಾರೆ. ಆದರೆ, ಈ ಧಣಿಗಳೆಲ್ಲಾ ಕಾಂಗ್ರೆಸ್ಸೇತರರು. ಬಿಜೆಪಿಯ ಅನಿಲ್ ಲಾಡ್ ಜಿಲ್ಲೆಗೆ ಪದೇ ಪದೇ ಭೇಟಿ ನೀಡು ತ್ತಿರುವುದು, ಜನಾರ್ಧನ್ ರೆಡ್ಡಿಯ ಅಣ್ಣ ಕರುಣಾಕರ ರೆಡ್ಡಿ ಗಂಗಾವತಿಯೇ ನನ್ನ ಕ್ಷೇತ್ರ ಎಂದು ಬಹಿರಂಗವಾಗಿ ಬೀಗುತ್ತಿರುವುದು ಕಾಂಗ್ರೆಸ್ಸಿಗೆ ಬಂದಿರುವ ಆಪತ್ತಿನ ಮುನ್ಸೂಚನೆಗಳಾಗಿವೆ.

ಪರಿಸ್ಥಿತಿ ಹೀಗಿರುವಾಗ ಲಲಿತಾ ರಾಣಿ ಅಧ್ಯಕ್ಷಳಾಗಿ ಅಧಿಕಾರ ಸ್ವೀಕರಿಸುವ ಸಮಾರಂಭಕ್ಕೆ ಖರ್ಗೆ-ಧರಂ ಜೋಡಿ ಬರುವುದಿತ್ತು. ರಿಸೀವ್ ಮಾಡಲು ಬಳ್ಳಾರಿ ಜಿಂದಾಲ್ ವಿಮಾನ ನಿಲ್ದಾಣಕ್ಕೆ ಜಿಲ್ಲಾ ಕಾಂಗ್ರೆಸ್ ನಾಯಕರು ಹೋಗಿದ್ದರು. ಆದರೆ, ಅವರ ಮುಖಗಳು ಒಂದೊಂದು ದಿಕ್ಕಿಗಿದ್ದವು. ಧರಂ-ಖರ್ಗೆಯವರನ್ನು ಸ್ವಾಗತಿಸುವ ಬ್ಯಾನರ್‌ಗಳಲ್ಲಿ ಮಾಜಿ ಮಂತ್ರಿ ಮಲ್ಲಿಯ ಫೋಟೋಗಳನ್ನು ಹಿಟ್ನಾಳ ಗಾಯಬ್ ಮಾಡಿದ್ದ. ಇದನ್ನ ಪ್ರಶ್ನಿಸಿದರೆ ಉಪಧ್ಯಾಪಿ ರಾಯರೆಡ್ಡಿ ಅಡ್ಡ ಬಂದುನಿಂತಿದ್ದ. ಪರಿಸ್ಥಿತಿ ಎಲ್ಲಿಗೆ ಹೋಯಿತೆಂದರೆ ಮಾರಾಮಾರಿ ನಡೆದು ಮಲ್ಲಿಯ ಅಂಗಿಯೇ ಹರಿದು ಹೋಯಿತು. ಇದು ಜಿಲ್ಲಾ ಕಾಂಗ್ರೆಸ್‌ನ ಒಳಗಿನ ಕಿತ್ತಾಟಕ್ಕೊಂದು ನಿದರ್ಶನವಷ್ಟೆ.

ಭ್ರಷ್ಟಾಚಾರ,ಸ್ವಜನಪಕ್ಷಪಾತ, ಕಾರ್ಯ ಕರ್ತರೆಡೆಗಿನ ನಿರ್ಲಕ್ಷ್ಯ, ಸೋಮಾರಿ ತನವನ್ನೇ ಮೈಗೂಡಿಸಿಕೊಂಡಿರುವುದರ ಪರಿಣಾಮವಾಗಿ ಕೊಪ್ಪಳ ನಗರಸಭೆಯಲ್ಲಿ ಕಾಂಗ್ರೆಸ್ ವಿರೋಧ ಪಕ್ಷವಾಗಿ ಕುಳಿತಿದೆ. ಗಂಗಾವತಿ ಯಲ್ಲಿ ಪಕ್ಷ ಕೇರಾಫ್ ಫುಟ್‌ಪಾತ್ ಆದರೆ ಕುಷ್ಟಗಿಯಲ್ಲಿ ಅದು ಕುಂಭಕರ್ಣ ನಿದ್ರೆಯಿಂದ ಇನ್ನೂ ಎದ್ದೇ ಇಲ್ಲ. ಜಿಲ್ಲಾ ಕಾಂಗ್ರೆಸ್‌ನ ಈ ದುಸ್ಥಿತಿ, ರಾಜ್ಯ ನಾಯಕರ ನಿರ್ಲಕ್ಷ್ಯಗಳಿಂದ ಬೇಸತ್ತ ಕಾಂಗ್ರೆಸ್‌ನ ಮಾಜಿ ಎಮ್ಮೆಲ್ಸಿ ಕರಿಯಣ್ಣ ಪಾರ್ಟಿಯನ್ನೇ ತೊರೆದಿದ್ದಾರೆ.

'ಕೆಟ್ಟ ಮೇಲೆ ಬುದ್ಧಿ ಬಂತು' ಎಂಬಂತೆ ಕೊನೆ ಗಾದರೂ ಎಚ್ಚೆತ್ತುಕೊಳ್ಳುತ್ತಾರೆಂದು ಜಿಲ್ಲೆಯ ಕೆಲವರು ನವೆಂಬರ್ ಮೊದಲ ವಾರದಲ್ಲಿ ಎಲ್ಲ ವರದಿಗಳೊಂದಿಗೆ ರಾಮುಲು ಅವರನ್ನು ಮತ್ತೆ ರಾಜಕಾರಣಕ್ಕೆ ವಾಪಾಸ್ಸು ಕರೆತನ್ನಿ ಅಂತ ಮನವಿ ಕೊಟ್ಟರೂ ಕೆಪಿಸಿಸಿ ಅದನ್ನು ಕಿವಿಗೆ ಹಾಕಿಕೊಂಡಿಲ್ಲ. ರಾಮುಲು ಅವರ ನಿವೃತ್ತಿಯ ನಂತರ ಜಿಲ್ಲೆಯ ಕಾಂಗ್ರೆಸ್ ಮತಗಳು ಒಡೆಯುತ್ತಲೇ ಹೋಗಿವೆ.

ದಿಲ್ಲಿಗೆ ಹೋಗಿ ಭ್ರಮಾತ್ಮಕ ಹೊಗೆ ಎಬ್ಬಿಸಿ ಬರುವ ನಿರ್ವೀರ್ಯ ನಾಯಕರ ಮಾತನ್ನು ನಂಬುವ ಸೋನಿಯಾ ಗಾಂಧಿಗೆ ಬೈಯ್ದು ರಾಮುಲು ಸುಮ್ಮನಾಗಿದ್ದಾರೆ; ಅಲ್ಲದೆ ಅದನ್ನು ದಕ್ಕಿಸಿಕೊಂಡಿದ್ದಾರೆ ಕೂಡ. ಆದರೆ, ರಾಮುಲು ವಿರೋಧಿಗಳು "ತನ್ನ ಮಗನ ಕೈಗೆ ಡಿಸಿಸಿ ಚುಕ್ಕಾಣಿ ಕೊಟ್ರೆ ಮಾತ್ರ ನಾನು ರಾಜಕೀಯಕ್ಕೆ ಮರಳುವೆ ಎಂದು ರಾಮುಲು ಅವರು ಹೇಳುತ್ತಿದ್ದಾರೆ'' ಎಂಬ ಅಪಪ್ರಚಾರವನ್ನು ಮಾಡುತ್ತಿದ್ದಾರೆ.

ಒಟ್ಟನಲ್ಲಿ ಜಿಲ್ಲಾ ಕಾಂಗ್ರೆಸ್ ಪುನಶ್ಚೇತನಕ್ಕೆ ಇದ್ದ ಒಂದು ಅವಕಾಶವನ್ನು ಕಾಂಗ್ರೆಸ್ ರಾಜ್ಯ ನಾಯಕತ್ವ ಹಾಳು ಮಾಡುತ್ತಿದೆ. ಎಸ್.ಎಂ. ಕೃಷ್ಣ ಒಂದು ವೇಳೆ ರಾಜ್ಯ ಸಕ್ರಿಯ ರಾಜಕಾರಣಕ್ಕೆ ಮರಳಿದರೆ ಮತ್ತೆ ರಾಮುಲು ಕೂಡ ರಾಜಕೀಯಕ್ಕೆ ಮರಳಿ ಜಿಲ್ಲಾ ಕಾಂಗ್ರೆಸ್ಸಿಗೆ ಚೇತನ ತುಂಬುತ್ತಾರೆ ಎಂಬ ತರ್ಕದಲ್ಲಿ ಜಿಲ್ಲಾ ಕಾರ್ಯಕರ್ತರಿದ್ದಾರೆ. ಕಾಂಗ್ರೆಸ್ ಇದೇ ರೀತಿ ಮುಂದುವರೆದರೆ ಮುಂಬರುವ ಚುನಾವಣೆಯಲ್ಲಿ ಹೇಳ ಹೆಸರಿಲ್ಲದಂತೆ ನಿರ್ನಾಮವಾಗುವುದು ಗ್ಯಾರಂಟಿ. ಈಗಲೂ ಕಾಲ ಮಿಂಚಿಲ್ಲ, ಕಾಂಗ್ರೆಸ್ ರಾಜ್ಯ ನಾಯಕರು ಈಗಲಾದರೂ ಎಚ್ಚೆತ್ತುಕೊಂಡರೆ ಕಾಂಗ್ರೆಸ್‌ಗೆ ಒಂದಿಷ್ಟು ಜೀವ ತುಂಬಿ ಬಿಜೆಪಿಯು ಮತ್ತೆ ಅಧಿಕಾರಕ್ಕೆ ಬರದಂತೆ ತಡೆಯಬಹುದು.

■ ವರದಿಗಾರ

ದ್ವೇಷ ಕುರೂಪದ ಕುರುಹುಗಳನ್ನು ಉಳಿಸಿದರೆ, ಪ್ರೇಮ ಸುಂದರ ಕುರುಹುಗಳನ್ನು ಉಳಿಸುತ್ತದೆ - ಮಿಗ್ನಾನ್ ಮ್ಯಾಕ್‌ಲಾಫ್ಲಿನ್




ಯಜ್ಞಪುರುಷ ಕೃಷ್ಣನಿಂದ ಕಾಂಗ್ರೆಸ್ ನಾಶ

ಒಟ್ಟಿನಲ್ಲಿ ಕರ್ನಾಟಕದ ಕಾಂಗ್ರೆಸ್ ಮಂದಿಗೆ ಈ ಶತಮಾನದಲ್ಲಿ ಬುದ್ಧಿ ಬರುವಂತೆ ಕಾಣುತ್ತಿಲ್ಲ. ವಿಧಾನಸಭೆ ವಿಸರ್ಜನೆ ಆಗಿ ಹೋಗಿದೆ, ಎಲೆಕ್ಷನ್ ಹತ್ತಿರದಲ್ಲೇ ಇದೆ, ಜೆಡಿಎಸ್ ಪಕ್ಷ ಹರಿದು ಚಿಂದಿಯಾಗುವ ಹಂತ ತಲುಪಿದೆ, ಭ್ರಷ್ಟ ಬಿಜೆಪಿ ಅಟ್ಟಹಾಸದಿಂದ ಯಾತ್ರೆ ಮಾಡುತ್ತಾ ಚುನಾವಣೆಗೆ ರೆಡಿಯಾಗುತ್ತಿದೆ... ಆದರೆ ಚೋಭದ್ರಗೇಡಿ ಕಾಂಗ್ರೆಸ್ಸಿಗೆ ಮಾತ್ರ ಇನ್ನೂ ಆಕಳಿಕೆ, ದೀರ್ಘ ನಿದ್ರೆ.

ಕರ್ನಾಟಕದ ಯಜ್ಞಪುರುಷ ರಾಜಕಾರಣಿಗಳ ಸಾಲಿಗೆ ಈಗ ಇನ್ನೊಬ್ಬರ ಸೇರ್ಪಡೆಯಾಗುತ್ತಿದೆ.

ಆತ ಎಸ್.ಎಂ. ಕೃಷ್ಣ!

ಮೊನ್ನೆ ಡಿಸೆಂಬರ್ 8ರ ಶನಿವಾರ ಬೆಂಗಳೂರಿನ ಕಾಟನ್‌ಪೇಟೆಯಲ್ಲಿ ಅದೆಂತದ್ದೋ ವಿಶ್ವಶಾಂತಿ ಹೋಮ ನಡೆಸಲು ಪತ್ನಿ ಸಮೇತ ಬಂದಿದ್ದರು ಕೃಷ್ಣ. ಈತ ವಿಶ್ವಶಾಂತಿ ಸ್ಥಾಪಿಸುವ ಮಾತಿರಲಿ ರಾಜ್ಯ ಕಾಂಗ್ರೆಸ್ಸನ್ನೂ ಉಳಿಸುವುದು ಕೂಡಾ ಅನುಮಾನವಿದೆ. ಮುಂಬರಲಿರುವ ಎಲೆಕ್ಷನ್, ರಾಜ್ಯ ಕಾಂಗ್ರೆಸ್‌ನ ಈಗಿನ ಪರಿಸ್ಥಿತಿ, ಹುರುಪಿರದ ನಾಯಕರನ್ನು ನೋಡಿ ಕೃಷ್ಣಾಗೆ ಮತ್ತೆ ಸಿಎಂ ಕುರ್ಚಿಯ ಕನಸು ಬಿದ್ದಿರಬೇಕು. ಹಾಗಾಗಿ ಒಂದಿಷ್ಟು ಚೇಲಾಗಳನ್ನು ಹಿಂದಿಟ್ಟುಕೊಂಡು ಬೆಂಗಳೂರಿನಲ್ಲಿ ಅಂಡಲೆಯಲು ಶುರು ಮಾಡಿದ್ದಾರೆ. ಮೊನ್ನಿನ ಯಜ್ಞವೂ ಅಂತದ್ದೇ ಸರ್ಕಸ್‌ನ ಒಂದು ರಿಹರ್ಸಲ್ ಅಷ್ಟೆ. ಅವತ್ತಿನ ತಮಾಷೆ ಏನೆಂದರೆ ಕೃಷ್ಣ ಕರ್ನಾಟಕಕ್ಕೆ ವಾಪಸ್ ಬರಕೂಡದೆಂದು ದೆಹಲಿವರೆಗೂ ಹೋಗಿ ಹೈಕಮಾಂಡಿಗೆ ಚಾಡಿ ಹೇಳಿ ಬಂದಿದ್ದ ದಿನೇಶ್ ಗುಂಡೂರಾವ್ ಕೂಡ ಕೃಷ್ಣ ಪಕ್ಕದಲ್ಲೇ ಕುಳಿತು ಹೋಮ ನಡೆಸಿದರು. ಯಾರಿಗೆ ಗೊತ್ತು, ಅವತ್ತು ಸಿಎಂ ಕುರ್ಚಿ ಸಿಗಲಿ ಅಂತ ಕೃಷ್ಣ ಬೇಡಿಕೊಂಡಿದ್ದರೆ, ಅಲ್ಲೇ ದಿನೇಶ್ ಗುಂಡೂರಾವ್ ಕೃಷ್ಣ ತೊಲಗಲಿ ಅಂತ ಬೇಡಿ ಕೊಂಡಿರಬಹುದು.



ಒಟ್ಟಿನಲ್ಲಿ ಕರ್ನಾಟಕದ ಕಾಂಗ್ರೆಸ್ ಮಂದಿಗೆ ಈ ಶತಮಾನದಲ್ಲಿ ಬುದ್ಧಿ ಬರುವಂತೆ ಕಾಣುತ್ತಿಲ್ಲ, ವಿಧಾನಸಭೆ ವಿಸರ್ಜನೆ ಆಗಿ ಹೋಗಿದೆ, ಎಲೆಕ್ಷನ್ ಹತ್ತಿರದಲ್ಲೇ ಇದೆ, ಜೆಡಿಎಸ್ ಪಕ್ಷ ಹರಿದು ಚಿಂದಿಯಾಗುವ ಹಂತ ತಲುಪಿದೆ. ಮತ್ತೊಂದೆಡೆ ಭ್ರಷ್ಟ ಬಿಜೆಪಿ ಅಟ್ಟಹಾಸದಿಂದ ಯಾತ್ರೆ ಮಾಡುತ್ತಾ ಚುನಾವಣೆಗೆ ರೆಡಿಯಾಗುತ್ತಿದೆ...

ಆದರೆ ಚೋಭದ್ರಗೇಡಿ ಕಾಂಗ್ರೆಸ್ಸಿಗೆ ಮಾತ್ರ ಇನ್ನೂ ಆಕಳಿಕೆ, ದೀರ್ಘ ನಿದ್ರೆ. ಅಷ್ಟೇ ಅಲ್ಲ ಜನ ಕಾಂಗ್ರೆಸ್‌ನಿಂದ ದೂರ ನಿಲ್ಲಲು ಏನೇನು ಬೇಕೊ ಅವೆಲ್ಲವನ್ನೂ ಸ್ವತಃ ಕೆಲ ಕಾಂಗ್ರೆಸ್ ನಾಯಕರೇ ಮಾಡಲು ಹೊರಟಿದ್ದಾರೆ.

ಎಸ್.ಎಂ. ಕೃಷ್ಣರನ್ನು ರಾಜ್ಯ ರಾಜಕೀಯಕ್ಕೆ ಮತ್ತೆ ಕರೆತರುವ ಪ್ರಯತ್ನ ಕೂಡ ಅದರಲ್ಲೊಂದು.

ಭ್ರಷ್ಟ, ಹಗರಣಗಳ ಚಾಂಪಿಯನ್, ಇಂಗ್ಲಿಷ್ ಚೊಟ್ಟೆಕಾರರ ಗೆಣೆಕಾರ, ಬಡವರ ವಿರೋಧಿಯೆಂದೇ ಸಾಬೀತಾಗಿರುವ ಕೃಷ್ಣನನ್ನು 2004 ರ ಚುನಾವಣೆಯಲ್ಲೇ ಮತದಾರ ಸೋಲಿಸಿ ಮೂಲೆಗೆ ಕೂರಿಸಿದ್ದ. ಎಂದೂ ಮಾಸ್ ಲೀಡರ್ ಅಲ್ಲದ ಕೃಷ್ಣರಿಂದಲೇ ಕರ್ನಾಟಕದಲ್ಲಿ ಕಾಂಗ್ರೆಸ್ ಸೋತು ನೆಲಕಚ್ಚಿತ್ತು. ಕೃಷ್ಣರ ದುರಾಡಳಿತ, ಬೇಜವಾಬ್ದಾರಿತನದಿಂದಲೇ ಕಳೆದ ಬಾರಿ ಬಿಜೆಪಿಗೆ 79 ಸ್ಥಾನ ಗೆಲ್ಲಲು ಸಾಧ್ಯವಾಗಿದ್ದು ವಾಸ್ತವವೆಂಬುದು ಹೀಗೆ ಕಣ್ಣಿಗೆ ರಾಚುವಷ್ಟು ನಿಚ್ಚಳವಾಗಿರುವಾಗ ಯಾವ ಪುರುಷಾರ್ಥಕ್ಕೆ ಕೃಷ್ಣ ಬರಲಿ ಎಂದು ಈ ಕಾಂಗ್ರೆಸ್‌ನವರು ಕಾಯಬೇಕೊ ಗೊತ್ತಾಗುತ್ತಿಲ್ಲ.




ರಾಜ್ಯ ಕಾಂಗ್ರೆಸ್‌ನ ಈಗಿನ ಪರಿಸ್ಥಿತಿ ಎಷ್ಟೊಂದು ಶೋಚನೀಯವಾಗಿದೆಯೆಂದರೆ ತೋರಸಲಿಕ್ಕೆ ಒಬ್ಬ ಖಡಕ್ಕಾದ ನಾಯಕನಿಲ್ಲ, ಇರುವ ಸಿದ್ಧರಾಮಯ್ಯ ತರದವರನ್ನು ಬಳಸಿಕೊಳ್ಳುವ ಕಲೆಯೂ ಗೊತ್ತಿಲ್ಲ. ಬಿಜೆಪಿಗಳು ನಡೆಸುತ್ತಿರುವ ಧರ್ಮಯಾತ್ರೆಗೆ ಪ್ರತಿಯಾಗಿ ಖರ್ಗೆ ಕೂಡ ಒಂದು ಯಾತ್ರೆ ಅನೌನ್ಸ್ ಮಾಡಿದ್ದರಲ್ಲ, ಅದೀಗ ಎಲ್ಲಿದೆ, ಪರಿಣಾಮ ಏನೇನಾಗುತ್ತಿದೆ ಎಂಬುದು ಕಾಂಗ್ರೆಸಿಗಳಿಗೆ ಗೊತ್ತಾಗುತ್ತಿಲ್ಲ.

ತೀರಾ ಮೊನ್ನೆ ಚಿತ್ರದುರ್ಗದಲ್ಲೊಂದು ಸಮಾವೇಶ ಆಯಿತು. ಕಾಂಗ್ರೆ ಶಾಸಕರಾದ ದುರ್ಗದ ತಿಪ್ಪಾರೆಡ್ಡಿ, ಚಳ್ಳಕೆರೆಯ ಸುಧಾಕರ್ ಮುಂತಾದವರು ಕಾಸು ಖರ್ಚು ಮಾಡಿ ಜನರನ್ನೇನೊ ಸೇರಿಸಿದ್ದರು. ಆದರೆ ಬಂದ ಕಾರ್ಯಕರ್ತರಲ್ಲಿ ನಯಾಪೈಸೆಯಷ್ಟೂ ಉತ್ಸಾಹ, ಆತ್ಮವಿಶ್ವಾಸವಿರಲಿಲ್ಲ. ಒಬ್ಬ ಡಿ.ಕೆ. ಶಿವಕುಮಾರ್ ಒಂದು ಮಾತಾಡದಿದ್ದರೆ ಸೂತಕದ ಸಭೆಯಂತೆ ಭಣಗುಟ್ಟಿ ಹೋಗಿರುತ್ತಿತ್ತು ಆ ಸಮಾವೇಶ. ಅದೇಕೊ ಏನೋ ಸಿದ್ಧರಾಮಯ್ಯ ದುರ್ಗಕ್ಕೆ ಹೋಗಲಿಲ್ಲ. ಸ್ನೇಹಿತರ ಮಗನ ಮದುವೆಗೆಂದು ಮುಂಬೈಗೆ ಹೋಗಿ ಈಗ ಅಲ್ಲಿಂದಲೇ ದೆಹಲಿಗೆ ಹೋಗಿದ್ದಾರೆ. ಸೋನಿಯಾ ಭೇಟಿಗೆ ಅಪಾಯಿಂಟ್‌ಮೆಂಟ್ ಫಿಕ್ಸ್ ಮಾಡಿ ಬರಲು ಸಿದ್ದು ಹೋಗಿದ್ದಾರೆ ಎನ್ನಲಾಗುತ್ತಿದೆ. ಸಿ.ಎಂ. ಇಬ್ರಾಹಿಂ ಹಾಗೂ ಸಿದ್ದು ಬಣದ ಏಳು ಜೆಡಿಎಸ್

ಸಿಎಂ ಕುರ್ಚಿ ಹಗಲುಗನಸು

ನೆಲದ ಮೇಲೆ ನಿಂತು ಯೋಚಿಸಬಲ್ಲ ಜನ ಕಾಂಗ್ರೆಸ್‌ನಲ್ಲಿ ಕಡಿಮೆ. ಇನ್ನೂ ಎಲೆಕ್ಷನ್ ನಡೆದೇ ಇಲ್ಲ, ಕಾಂಗ್ರೆಸ್‌ಗೆ ಜಾಸ್ತಿ ಸೀಟ್ ಬರಬಹುದೆಂಬ ಖಾತ್ರಿಯೂ ಇಲ್ಲ. ಆದರೂ ಸಿಎಂ ಕುರ್ಚಿಗಾಗಿ ಅಸಂಖ್ಯಾತ ನಾಯಕರು ತೋಳೇರಿಸಿಕೊಂಡು ನುಗ್ಗುತ್ತಿದ್ದಾರೆ.




ಇದರಲ್ಲಿ ಖರ್ಗೆ ಲೆಕ್ಕಾಚಾರವೆಂದರೆ ತಾನೊಬ್ಬ ಸೀನಿಯರ್ ಲೀಡರ್. ಕೆಪಿಸಿಸಿ ಪ್ರೆಸಿಡೆಂಟೂ ಕೂಡಾ. ಜೊತೆಗೆ ದಲಿತರೆಂಬ ಮೆರಿಟ್ಟೂ ಇರುವುದರಿಂದ ಕಾಂಗ್ರೆ ಗೆದ್ದರೆ ಸಿಎಂ ಕುರ್ಚಿ ತನಗಲ್ಲವೆ ಎಂದಾಗಿದೆ.

ಎಸ್.ಎಂ. ಕೃಷ್ಣರ ಯೋಜನೆ ಏನೆಂಬುದು ಈಗೇನು ಗುಟ್ಟಾಗುಳಿದಿಲ್ಲ. ಇದರೊಂದಿಗೆ ಸಂಸದ ಅಂಬರೀಷ್ ಈ ಬಾರಿ ಶ್ರೀರಂಗಪಟ್ಟಣದಿಂದ ಅಸೆಂಬ್ಲಿಗೆ ನಿಲ್ಲುತ್ತಿದ್ದಾರೆ. ಜಾಫರ್ ಷರೀಫ್ ಕೂಡಾ ಶಿವಾಜಿನಗರ ಕ್ಷೇತ್ರದ ಮೇಲೆ ಕಣ್ಣು ನೆಟ್ಟಿದ್ದಾರೆ.

ಇವರಿಗೆಲ್ಲಾ ಸಿಎಂ ಹುದ್ದೆ ಕನಸು ಬಿದ್ದಿದ್ದರೆ ಅದರಲ್ಲಿ ತಪ್ಪೇನಿಲ್ಲ. ಆದರೆ ಅದಕ್ಕೂ ಮೊದಲು ಪಕ್ಷವನ್ನು ಗೆಲ್ಲಿಸಲು ಕೆಲಸ ಮಾಡಬೇಕು ತಾನೆ?

ನೆರೆಯ ಆಂಧ್ರಪ್ರದೇಶದ ಉದಾಹರಣೆ ಮೂಲಕ ಹೇಳಬೇಕೆಂದರೆ ಈಗಿನ ಸಿಎಂ ವೈ.ಎಸ್. ರಾಜಶೇಖರ್ ರೆಡ್ಡಿ ಎಲೆಕ್ಷನ್‌ಗೆ ಮೊದಲೇ ಅವತ್ತಿನ ಆಡಳಿತಾರೂಢ ತೆಲುಗು ದೇಶಂ ವಿರುದ್ಧ ನಿರಂತರ ಹೋರಾಟ, ಪ್ರತಿಭಟನೆ ಮಾಡಿಕೊಂಡು ಹೋಗಿದ್ದರು. ರಾಜ್ಯದೆಲ್ಲೆಡೆ ಪಾದಯಾತ್ರೆ ಮಾಡಿದ್ದರು. ಚಂದ್ರಬಾಬು ನಾಯ್ಡು ಸರ್ಕಾರದ ವಿದ್ಯುತ್ ದರ ಏರಿಕೆ, ಭೂಕಬಳಿಕೆ, ಭ್ರಷ್ಟಾಚಾರಗಳ ವಿರುದ್ಧ ಬೀದಿಗಿಳಿದು ದನಿ ಎತ್ತುತ್ತಲೇ ಜನರಲ್ಲಿ ಕಾಂಗ್ರೆಸ್ ಪಕ್ಷದ ಬಗ್ಗೆ ಭರವಸೆ ಹುಟ್ಟುವಂತೆ ಮಾಡಿದ್ದರು. ಇವತ್ತಿನ ರೆಡ್ಡಿಗೂ ಅವತ್ತಿನ ನಾಯ್ಡುಗೂ ಈಗ ಯಾವ ವ್ಯತ್ಯಾಸವೂ ಉಳಿದಿಲ್ಲವೆಂಬುದು ಬೇರೆ ಮಾತು. ಆದರೆ ಅವತ್ತು ಆಂಧ್ರದಲ್ಲಿ ಕಾಂಗ್ರೆಸ್ ನಿಜವಾದ ವಿರೋಧ ಪಕ್ಷದಂತೆ ಜೀವಂತವಾಗಿತ್ತು.




ಇಲ್ಲಿ ಕರ್ನಾಟಕದಲ್ಲಿ ಪರಿಸ್ಥಿತಿ ಅದಕ್ಕೆ ತದ್ವಿರುದ್ಧವಾಗಿದೆ. ಕೋ-ಜಾ ಸರ್ಕಾರದ ಆಡಳಿತದುದ್ದಕ್ಕೂ ಧರಂಸಿಂಗ್-ಖರ್ಗೆ ಜೋಡಿ ಅದರ ಎಲ್ಲಾ ಭ್ರಷ್ಟಾಚಾರ, ಜನವಿರೋಧಿ ನೀತಿಗಳನ್ನು ಮೌನವಾಗಿ ನೋಡಿಕೊಂಡು ಕುಳಿತಿದ್ದರೇ ವಿನಃ ಒಮ್ಮೆಯೂ ಗಟ್ಟಿದನಿಯಲ್ಲಿ ಮಾತಾಡಿರಲಿಲ್ಲ.

ಈಗ ತಾನೆ ಏನು?

ಇಲ್ಲಾ ಬಿಡಿ. ಈ ಕಾಂಗ್ರೆಸ್ ಎಂದಿಗೂ ಬದಲಾಗುವುದಿಲ್ಲ ಅನ್ನಿಸೋಲ್ಲವೆ?

ಕಂಪ್ಯೂಟರ್ ಯಾವ ಲಿಂಗ?



ಫ್ರೆಂಚ್ ಭಾಷಾ ಶಿಕ್ಷಕ ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಾ "ಇಂಗ್ಲೀಷಿನಂತಲ್ಲದೆ ಫ್ರೆಂಚ್ ಭಾಷೆಯಲ್ಲಿ ಪ್ರತಿಯೊಂದು ನಾಮಪದಗಳನ್ನೂ ಸ್ತ್ರೀಲಿಂಗ ಮತ್ತು ಪುಲ್ಲಿಂಗಗಳಾಗಿ ವಿಂಗಡಿಸಲಾಗಿದೆ. ಉದಾಹರಣೆಗೆ, ಟೇಬಲ್ಲು, ಪೆನ್ನು ಮುಂತಾದ ಪದಗಳು ಇಂಗ್ಲೀಷಿನಲ್ಲಿ ತಟಸ್ಥ ಲಿಂಗವಾದರೆ, ಫ್ರೆಂಚ್ ಭಾಷೆಯಲ್ಲಿ ಅವುಗಳನ್ನೂ ಸ್ತ್ರೀ-ಪುರುಷಗಳೆಂದು ವಿಂಗಡಿಸಲಾಗಿದೆ" ಎಂದು ವಿವರಿಸುತ್ತಿದ್ದ. ಆಗ ವಿದ್ಯಾರ್ಥಿಯೊಬ್ಬ ಎದ್ದು "ಹಾಗಾದರೆ, ಕಂಪ್ಯೂಟರ್‌ನ್ನು ಯಾವ ಲಿಂಗಕ್ಕೆ ಸೇರಿಸಬೇಕು?" ಎಂದು ಪ್ರಶ್ನಿಸಿದ. ಶಿಕ್ಷಕನಿಗೆ ಅದು ಯಾವ ಲಿಂಗ ಎಂಬುದು ಸರಿಯಾಗಿ ಗೊತ್ತಿರಲಿಲ್ಲ. ಹಾಗಾಗಿ, ಆತ ಇಡೀ ತರಗತಿಯಲ್ಲಿರುವ ಹುಡುಗಿಯರ ಒಂದು ಗುಂಪು ಹಾಗೂ ಹುಡುಗರ ಮತ್ತೊಂದು ಗುಂಪನ್ನು ಮಾಡಿ, "ನೀವು ನಿಮ್ಮ ಗುಂಪಿನೊಳಗೆ ಮೊದಲು ಚರ್ಚಿಸಿ ಆನಂತರ ಕಂಪ್ಯೂಟರನ್ನು ಯಾವ ಲಿಂಗಕ್ಕೆ ಸೇರಿಸಬೇಕು ಎಂಬುದನ್ನೂ, ಮತ್ತದಕ್ಕೆ ಕಾರಣಗಳನ್ನೂ ಕೊಡಿ" ಎಂದು ಹೇಳಿದ.

ಎರಡೂ ಗುಂಪುಗಳು ಚರ್ಚೆ ಮಾಡಿ ಕೊನೆಗೆ ತಮ್ಮ ಅಭಿಪ್ರಾಯವನ್ನೂ, ಅದಕ್ಕೆ ಕಾರಣಗಳನ್ನೂ ತಿಳಿಸಿದವು. ಮೊದಲು ಹುಡುಗಿಯರ ಗುಂಪು ಕಂಪ್ಯೂಟರನ್ನು ಪುಲ್ಲಿಂಗಕ್ಕೆ ಸೇರಿಸಬೇಕು ಎಂದಿತು. ಅದಕ್ಕೆ ಕೊಟ್ಟ ಕಾರಣಗಳೇನೆಂದರೆ:

1. ನೀವು ಕಂಪೂಟರ್‌ನ ಗಮನ ಸೆಳೆಯಬೇಕೆಂದರೆ ನೀವೇ ಮೊದಲು ಅದರ ಸ್ವಿಚ್ ಆನ್ ಮಾಡಬೇಕಾಗುತ್ತದೆ.
2. ಅದರೊಳಗೆ ಬೇಕಾದಷ್ಟು ಮಾಹಿತಿಗಳಿರುತ್ತವೆ, ಆದರೂ ಅವುಗಳ ಒಂದು ಸಣ್ಣ ಸುಳಿವನ್ನೂ ಅದು ಬಿಟ್ಟುಕೊಡುವುದಿಲ್ಲ.
3. ಅದು ನಿಮ್ಮ ಸಮಸ್ಯೆಗಳನ್ನು ಬಗೆಹರಿಸಬೇಕು. ಆದರೆ ಕೆಲ ಸಂದರ್ಭಗಳಲ್ಲಿ ಅದೇ ಸಮಸ್ಯೆಯಾಗಿಬಿಡುತ್ತದೆ.
4. ನೀವು ಒಂದು ಕಂಪ್ಯೂಟರನ್ನು ಕೊಂಡುಕೊಂಡ ತಕ್ಷಣ 'ಇನ್ನೊಂದಿಷ್ಟು ಸಮಯ ಕಾದಿದ್ದರೆ, ಇದಕ್ಕಿಂತಲೂ ಒಳ್ಳೆಯ ಮಾಡೆಲ್ ಸಿಗ್ತಿತ್ತು' ಎನ್ನಿಸಲಾರಂಭಿಸುತ್ತದೆ.

ಪ್ರೀತಿಸುವ ಕಲೆಯೆಂದರೆ ದೃಢವಾಗಿರುವ ಕಲೆಯೆಂದೇ ಅರ್ಥ -ಅಲ್ಬರ್ಟ್ ಎಲ್ಲಿಸ್

ಶಾಸಕರನ್ನು ಕಾಂಗ್ರೆಸ್‌ಗೆ ಕರೆತರುವ ಸಿದ್ದು ಪ್ರಯತ್ನದ ಭಾಗ ಇದು.

ಇಲ್ಲೂ ಖರ್ಗೆ ಸ್ವಭಾವದ ಬಗ್ಗೆ ಹೇಳಬೇಕೆಂದರೆ:

"ಕಾಂಗ್ರೆಸ್‌ನಲ್ಲಿ ಯಾವ ಜಾಗವೂ ಖಾಲಿ ಇಲ್ಲ, ಎಲ್ಲಾ ಭರ್ತಿಯಾಗಿದೆ. ಬೇರೆ ಪಕ್ಷಗಳಿಂದ ಬರೋರಿಗೆ ನಮ್ಮಲ್ಲಿ ಅವಕಾಶವಿಲ್ಲ" ಎಂದು ಈಗ ಖರ್ಗೆ ಹೇಳಿಕೆ ಕೊಟ್ಟಿದ್ದಾರೆ.

ಇವನ್ಯಾರಾದರು ನಾಯಕತ್ವ ಅನ್ನುತ್ತಾರಾ?

ಕೆಪಿಸಿಸಿ ಪುನರ್ರಚನೆ

ಗುಜರಾತ್ ಚುನಾವಣೆ ಮುಗಿದ ತಕ್ಷಣ ಕರ್ನಾಟಕ ಕಾಂಗ್ರೆಸ್ ಸಮಿತಿಯ ಪುನರ್ರಚನೆ ಗ್ಯಾರಂಟಿಯಾಗಿದ್ದು ಯಾರು ಏನೇ ಹೇಳಿದರೂ ಖರ್ಗೆಯನ್ನಂತೂ ಅಧ್ಯಕ್ಷ ಸ್ಥಾನದಿಂದ ಬದಲಿಸುವ ಛಾನ್ಸ್ ಕಾಣುತ್ತಿಲ್ಲ. ಆದರೆ ಎಲೆಕ್ಷನ್ ತಯಾರಿಗಾಗಿ ಸಿದ್ಧರಾಮಯ್ಯಗೆ ಪ್ರಚಾರ ಸಮಿತಿಯ ನಾಯಕತ್ವ ನೀಡುವಂತೆ ಕಾಣುತ್ತಿದೆ. ಉಳಿದಂತೆ ಡಾ. ಜಿ. ಪರಮೇಶ್ವರ್, ಡಿ.ಕೆ. ಶಿವಕುಮಾರ್, ಎಚ್.ಕೆ. ಪಾಟೀಲ್‌ರಿಗೂ ಕೆಲ ಜವಾಬ್ದಾರಿಗಳನ್ನು ವಹಿಸಬಹುದು.

ಕೃಷ್ಣರ ಪಾತ್ರ ಏನೆಂಬುದು ತೀರ್ಮಾನವಾಗಬೇಕಿರುವುದು ಈ ಹಂತದಲ್ಲೇ.

ಒಂದು ಸಾಧ್ಯತೆಯ ಪ್ರಕಾರ ಕೃಷ್ಣರನ್ನು ಕೇಂದ್ರ ಸಚಿವರನ್ನಾಗಿಸಿ ಜೊತೆಗೆ ಕರ್ನಾಟಕದ ಎಲೆಕ್ಷನ್ ಉಸ್ತುವಾರಿಯನ್ನು ವಹಿಸುವ ಯೋಚನೆ ಸೋನಿಯಾಗೆ ಇದ್ದಂತಿದೆ. ಒಕ್ಕಲಿಗರ ಓಟು, ನಗರದ ಜನರನ್ನು ಕೃಷ್ಣ ಗೆಲ್ಲಬಲ್ಲರು ಎಂಬ ಲೆಕ್ಕಾಚಾರ ಅದು. ಆದರೆ ಕಾಂಗ್ರೆಸ್‌ನ ಒಳಗಿನವರ ತರ್ಕ ಬೇರೆಯೇ ಇದೆ. ಕೃಷ್ಣ ಸಿಎಂ ಆಗಿದ್ದಾಗ ಸಾವಿರಾರು ಕೋಟಿ ಲೂಟಿ ಮಾಡಿಕೊಂಡಿದ್ದು ಸೋನಿಯಾಗೂ ಗೊತ್ತಿದೆ. ಆ ದುಡ್ಡನ್ನು ಕೃಷ್ಣ ಈಗ ಖರ್ಚು ಮಾಡಲಿ, ಜೊತೆಗೆ ಒಂದಿಷ್ಟು ಫಂಡ್ ತರಲಿ ಎಂದು ಹೈಕಮಾಂಡ್ ಯೋಚಿಸುತ್ತಿದೆಯಂತೆ. ಇಷ್ಟು ಸುದ್ದಿಯಿಂದಲೇ ಗಾಬರಿಯಾಗಿರುವ ಖರ್ಗೆ ಮೊನ್ನೆ ಕೃಷ್ಣ ವಿರುದ್ಧ ಹೈಕಮಾಂಡಿಗೆ ಚಾಡಿ ಹೇಳಲು ಒಂದು ಡೆಲಿಗೇಷನ್ನನ್ನೇ ಕಳಿಸಿಬಿಟ್ಟರು. ದಿನೇಶ್ ಗುಂಡೂರಾವ್, ಯಲಹಂಕದ ಪ್ರಸನ್ನ ಕುಮಾರ್, ಚನ್ನಪಟ್ಟಣದ ಯೋಗೀಶ್ವರ್, ಮೈಸೂರಿನ ಧ್ರುವನಾರಾಯಣ್‌ರನ್ನೊಳಗೊಂಡಿದ್ದ ಈ ನಿಯೋಗ ಮೂರು ದಿನ ಕಾದರೂ ಸೋನಿಯಾ ದರುಶನ ಸಿಗದೆ ರಾಹುಲ್ ಗಾಂಧಿಯನ್ನು ಮಾತ್ರ ಮಾತಾಡಿಸಿ ಬಂದಿದೆ.

ಮತ್ತೊಂದೆಡೆ ಖರ್ಗೆ ಮಾತ್ರ ಗುಮ್ಮನ ಗುಸಕನಂತೆ 'ಕಾಂಗ್ರೆ ಬಲಪಡಿಸಲು ಯಾರು ಬಂದರೂ ಸ್ವಾಗತ' ಎಂದು ತೊದಲುತ್ತಾ ಹೇಳುತ್ತಿದ್ದಾರೆ. ಇಲ್ಲಿ ಕಾಂಗ್ರೆಗಳಿಗಿರಬಹುದಾದ ಒಂದು ಭ್ರಮೆಯ ಬಗ್ಗೆ ಹೇಳಲೇಬೇಕು.

ಮುಂದಿನ ಎಲೆಕ್ಷನ್‌ನಲ್ಲಿ ಕಾಂಗ್ರೆಗೆ ಬಹುಮತ ಖಚಿತ ಎಂಬಂತೆ ಇವರೆಲ್ಲಾ ಈಗಲೇ ಆಸೆ ಇಟ್ಟುಕೊಂಡಂತೆ ಕಾಣುತ್ತಿದೆ. ಆದರೆ ಮತದಾರನ ಬಳಿಗೆ ಕಾಂಗ್ರೆಗಳು ಯಾವ ಮುಖ ಹೊತ್ತು ಹೋಗುತ್ತವೆ?

ವಿರೋಧ ಪಕ್ಷವಾಗಿ ಒಂದೇ ಒಂದು ದಿನವೂ ತನ್ನ ಅಸ್ತಿತ್ವ ತೋರಿಸದಿದ್ದ ಕಾಂಗ್ರೆಸ್, ದಳ-ಬಜೆಪಿಗಳ ಸಾವಿರಾರು ಕೋಟಿಯ ಭೂ ಹಗರಣಗಳ ವಿರುದ್ಧ ಒಮ್ಮೆಯೂ ದನಿ ಎತ್ತಿರದ ಕಾಂಗ್ರೆಸ್ ಅನ್ನು ಜನ ನಂಬುತ್ತಾರಾ?


ಹೋಗಲಿ ಈಗಲಾದರೂ ಕಾಂಗ್ರೆಸ್ ಕಾರ್ಯಕ್ರಮವೇನು?

ಬಜೆಪಿಯ ಯಡ್ಡಿ "ನಮಗೆ ಅಧಿಕಾರ ಕೊಟ್ಟರೆ ಕರ್ನಾಟಕವನ್ನು ಮಾದರಿ ರಾಜ್ಯ ಮಾಡುತ್ತೇವೆ" ಎನ್ನುತ್ತಿದ್ದಾರೆ.

ಇನ್ನು ದಳದವರು ಏನು ಹೇಳಲಿ ಹೇಳದಿರಲಿ ಜನರಂತೂ ಬೆಲೆ ಕೊಡುವುದಿಲ್ಲವೆನ್ನುವಂಥ ಪರಿಸ್ಥಿತಿ ಇದೆ. ಇಂಥ ಸಂದರ್ಭದಲ್ಲಿ ಕಾಂಗ್ರೆಸ್ ಏನು ಮಾಡಲಿದೆ ಎಂಬ ಬಗ್ಗೆ ಒಂದೇ ಒಂದು ಕಾರ್ಯಕ್ರಮವನ್ನು ಹೇಳದೆ ಹೋದರೆ ಓಟು ಹಾಕಿ ಬೆಂಬಲಿಸಲು ಜನರಿಗೆ ಏನು ತಲೆ ಕೆಟ್ಟಿದೆಯಾ? ಬರಲಿರುವ ಚುನಾವಣೆಗೆ ತಯಾರಾಗುವುದು ಬಿಟ್ಟು 'ಕೃಷ್ಣ ಬರಲಿ' ಅಂತ ಒಂದು ಗುಂಪು, 'ಕೃಷ್ಣ ಬೇಡ' ಎಂದು ಇನ್ನೊಂದು ಗುಂಪು ಒಳಜಗಳ ಮಾಡಿಕೊಳ್ಳುತ್ತಲೇ ಹೋದರೆ ಅದೊಂದು ಗಾಂಪರ ಗುಂಪಿನಂತೆ ಮಾತ್ರ ಕಾಣುವುದಿಲ್ಲವೆ?

■ ಬಿಳಿದಾಳೆ ಈಶ

ಬಿಎಸ್‌ಪಿ ಜೊತೆ ಮೈತ್ರಿ ನಿಜವೆ?



ಇವತ್ತಿನ ಕಾಂಗ್ರೆಸ್ ಬಿಕ್ಕಟ್ಟಿನಲ್ಲಿ ಬಹುಜನ ಸಮಾಜ ಪಕ್ಷದ ಅಗಾಧ ಬೆಳವಣಿಗೆಯದ್ದೂ ಒಂದು ಪ್ರಭಾವವಿದೆ. ಮುಂದಿನ ಎಲೆಕ್ಷನ್‌ನಲ್ಲಿ ಬಿಎಸ್‌ಪಿ ಜೊತೆ ಮೈತ್ರಿ ಮಾಡಿಕೊಳ್ಳುವ ಬಗ್ಗೆ ಯೋಚಿಸಬಹುದೆಂದು ಖರ್ಗೆ ಹೇಳಬೇಕಾಗಿ ಬಂದಿರುವುದು ಈ ಹಿನ್ನೆಲೆಯಲ್ಲೇ. 2004 ರ ಎಲೆಕ್ಷನ್ ನಡೆದಾಗ ಬಿಎಸ್‌ಪಿ ಅಭ್ಯರ್ಥಿಗಳು 40 ಕ್ಷೇತ್ರಗಳಲ್ಲಿ ಕಾಂಗ್ರೆಸ್‌ನ ಸೋಲಿಗೆ ನೇರ ಕಾರಣರಾಗಿದ್ದರು. ಲಾಗಾಯ್ತಿನಿಂದಲೂ ಕಾಂಗ್ರೆನೊಂದಿಗಿದ್ದ ದಲಿತ ಹಿಂದುಳಿದ ವರ್ಗದವರು ಈಗ ಪ್ರಜ್ಞಾಪೂರ್ವಕವಾಗಿ ಬಿಎಸ್‌ಪಿಯತ್ತ ತಿರುಗುತ್ತಿದ್ದಾರೆ. ಒಂದು ಕಡೆ ಲಿಂಗಾಯತರು, ಒಕ್ಕಲಿಗರ ಸಾಲಿಡ್ ಬೆಂಬಲವಿರದೆ ಮತ್ತೊಂದೆಡೆ ದಲಿತರ ಓಟ್ ಬ್ಯಾಂಕನ್ನು ಕಳೆದುಕೊಳ್ಳುತ್ತಿರುವ ಕಾಂಗ್ರೆಗೆ ನಿಜಕ್ಕೂ ಈಗ ಅತಂತ್ರ ಪರಿಸ್ಥಿತಿ. ರಾಜಶೇಖರಮೂರ್ತಿಯಂಥ ಬೇರಿಲ್ಲದ ನಾಯಕರು ಬಿಎಸ್‌ಪಿ ಸೇರಿಬಿಟ್ಟರೆ ಆಕಾಶವೇನೂ ಬಿದ್ದು ಹೋಗುವುದಿಲ್ಲ, ಆದರೆ ರಾಜ್ಯದ ಬಹುತೇಕ ಮತಕ್ಷೇತ್ರಗಳಲ್ಲಿ ಸಾವಿರಾರು ಬಿಎಸ್‌ಪಿ ಕಾರ್ಯಕರ್ತರು ಕಾಣಿಸಿಕೊಳ್ಳುತ್ತಿದ್ದಾರೆ. ಇದೇ ಡಿಸೆಂಬರ್ 23 ರಂದು ಬೆಂಗಳೂರಿನಲ್ಲಿ ಮಾಯಾವತಿ 3 ಲಕ್ಷ ಜನರ ರ್‍ಯಾಲಿ ನಡೆಸುತ್ತಿದ್ದಾರೆ.

ಮುಂದಿನ ಎಲೆಕ್ಷನ್ ವೇಳೆಗೆ ಬಿಎಸ್‌ಪಿ ಬಹುತೇಕರ ನಿದ್ದೆ ಗೆಡಿಸುವುದು ಖಚಿತ.

ಈಗ ಕೇಂದ್ರದ ಯುಪಿಎ ಮೈತ್ರಿ ಕೂಟದಲ್ಲಿರುವ ಮಾಯಾವತಿ-ಸೋನಿಯಾ ನಡುವೆ ನಿಜಕ್ಕೂ ಚುನಾವಣಾ ಹೊಂದಾಣಿಕೆಯ ಮಾತುಕತೆ ನಡೆದರೆ ಕರ್ನಾಟಕದಲ್ಲಿ ಬಿಎಸ್‌ಪಿಗೆ ಎಷ್ಟು ಕ್ಷೇತ್ರ ಬಿಡಲಾಗುತ್ತದೆ ಎಂಬ ಪ್ರಶ್ನೆ ಎದ್ದೇಳುತ್ತದೆ. ಅಷ್ಟೇ ಅಲ್ಲಾ, ಯಾವ್ಯಾವ ಕಾಂಗ್ರೆಗಳು ಟಿಕೆಟ್ ವಂಚಿತರಾಗುತ್ತಾರೆಂಬುದೂ ಅಷ್ಟೇ ಮುಖ್ಯ ಸಂಗತಿ.

ಸುಮ್ ಸುಮ್ನೆ

ನಂತರ ಹುಡುಗರ ಗುಂಪು ಚರ್ಚೆ ನಡೆಸಿ ಕಂಪ್ಯೂಟರನ್ನು ಸ್ತ್ರೀಲಿಂಗಕ್ಕೆ ಸೇರಿಸಬೇಕು ಎಂದು ಹೇಳಿ ಅದಕ್ಕೆ ಈ ಕೆಳಗಿನ ಕಾರಣಗಳನ್ನು ಕೊಟ್ಟಿತು:

1. ಕಂಪ್ಯೂಟರನ್ನು ಸೃಷ್ಟಿಸಿದವರನ್ನು ಹೊರತುಪಡಿಸಿ ಉಳಿದ ಇನ್ಯಾರಿಗೂ ಅದರ ಒಳಮರ್ಮ ಅರ್ಥವಾಗುವುದೇ ಇಲ್ಲ,
2. ಕಂಪ್ಯೂಟರುಗಳು ಇತರ ಕಂಪ್ಯೂಟರುಗಳೊಂದಿಗೆ ಸಂವಹನಕ್ಕಾಗಿ ಬಳಸುವ ಸ್ಥಳೀಯ ಭಾಷೆಗಳು ಎಲ್ಲರಿಗೂ ಅರ್ಥವಾಗುವಂತಿರುವುದಿಲ್ಲ,
3. ನೀವು ಎಸಗಿದ ಅತೀ ಸಣ್ಣ ತಪ್ಪೂ ಕೂಡ ಕಂಪ್ಯೂಟರಿನ ಮೆಮೊರಿಯಲ್ಲಿ ಉಳಿದುಕೊಂಡು ಮುಂದೆ ಎಂದಾದರೂ ದೊಡ್ಡ ಅನಾಹುತ ಮಾಡಿಬಿಡುತ್ತದೆ.
4. ನೀವು ಒಂದು ಕಂಪ್ಯೂಟರ್‌ನ್ನು ಕೊಂಡುಕೊಂಡ ಮೇಲೆ ಅದಕ್ಕೆ ತಗುಲಿದ ವೆಚ್ಚಕ್ಕಿಂತ ಹೆಚ್ಚಿನ ಮೊತ್ತವನ್ನು ಅದಕ್ಕೆ ಸಂಬಂಧಿತ ಇನ್ನಿತರ ವಸ್ತುಗಳನ್ನು ಖರೀದಿಸುವುದಕ್ಕೆ ವ್ಯಯಿಸಬೇಕಾಗುತ್ತದೆ.

ಈಗ ನೀವೇ ನಿರ್ಧರಿಸಿ, ಕಂಪ್ಯೂಟರ್ ಸ್ತ್ರೀಲಿಂಗವೋ, ಪುಲ್ಲಿಂಗವೋ ಎಂದು! ■

ಕುಮಾರಸ್ವಾಮಿ ರುದಯ ಶ್ರೀಮಂತಿಕೆ ಮನ್ಸ ಕಂಡ್ರೀ

ಥೂತ್ತೇರಿ


ಯಾಹೂ

"ಜನತಾದಳ ಬಿಡುವುದಿದ್ದರೆ ಇವತ್ತು ರಾತ್ರಿಯೇ ಬಿಡಿ. ನೀವು ಬಿಡುವವರೆಗೂ ನಾವು ಕಾಯಲಾಗುವುದಿಲ್ಲ, ನಮ್ಮಪ್ಪನಿಗೆ ನಾನು, ನನ್ನ ಬೆಂಬಲಿಗರಲ್ಲಿ ಜೊಳ್ಳೆಷ್ಟು ಗಟ್ಟಿ ಎಷ್ಟು ಎಂಬುದನ್ನು ತೋರಿಸಬೇಕಿದೆ" ಎಂದು ಕುಮಾರಸ್ವಾಮಿ ಗುಡುಗಿದರಂತಲ್ಲಾ. ಕೂಡಲೇ ತನ್ನ ಎಡಗೈ ಬಂಟ ಚೆಲುವರಾಯಸ್ವಾಮಿಯನ್ನು ಕರೆದು "ನಾನು ಹಾಗಂದದ್ದು ತಪ್ಪಾಯ್ತು" ಅಂತ ಹೇಳಿ "ಎಂ.ಪಿ. ಪ್ರಕಾಶರನ್ನು ಕರೆದುಕೊಂಡು ಬಾ. ಹಣಕಾಸಿನ ವ್ಯವಹಾರವಿದ್ದರೆ ಸಂಕೋಚವಿಲ್ಲದೆ ತಿಳಿಸಲು ಹೇಳು" ಎಂದು ಹೇಳಿ ಕಳಿಸಿದರಂತಲ್ಲಾ. ಪಾರ್ಟಿಯನ್ನೇ ಬಿಡಲು ಹೊರಟಿದ್ದ ಚೆಲುವ ಸಂಧಾನಕಾರನಾಗಿ ಪರಿವರ್ತನೆಯಾದ ಹಿಂಸೆ ಅನುಭವಿಸುತ್ತ ಹೊರಡುತ್ತಿರಬೇಕಾದರೆ, ಎದುರು ಸಿಕ್ಕ ದತ್ತ ಬಾಯಲ್ಲಿ ಏನೋ ಇಟ್ಟುಕೊಂಡವನಂತೆ ಅಥವಾ ಹಲ್ಲಿನ ತೊಂದರೆ ಅನುಭವಿಸುತ್ತಿರುವಂತೆ ಮಾತನಾಡುತ್ತ "ಸಂಕೋಚ ಬೇಡಿ ಚೆಲುವರಾಯ ಸ್ವಾಮಿಯವರೆ. ನಮ್ಮ ಕುಮಾರಸ್ವಾಮಿಯವರು ತುಂಬ ಹೃದಯ ಶ್ರೀಮಂತಿಕೆ ಇರೊ ವ್ಯಕ್ತಿ, ನೀವು ಬಂದು ನೋಡಿ, ಹೇಗೆ ತಬ್ಬಿಕೊಂಡು ಮುತ್ತುಕೊಡ್ತರೆ ಅಂತ ಹೇಳಿ" ಎಂದು ಗೋಳಗರೆದರಂತಲ್ಲಾ. ಇದನ್ನು ಕೇಳಿ ಚೆಲುವ, "ರುದಯ ಸ್ತ್ರೀಮಂತಿತೆ ಅಂದ್ರೇನು?" ಎಂದು ತಲೆ ಕೆರೆಯುತ್ತಾ ಹೋದರಂತಲ್ಲಾ, ಥೂತ್ತೇರಿ!

* * * * * *

ಉಡುಪಿ ಕಡೆಯ ಉಮಾಭಾರತಿ ಅಭಿಮಾನಿಯಾದ ಪೇಜಾವರ ಶ್ರೀಗಳ ಮಾತು, ನಡವಳಿಕೆಯೆಲ್ಲಾ ಥೇಟ್ ದೇವೇಗೌಡನಂತೆಯೇ ಕಾಣುತ್ತಿವೆಯೆಂದು ಪುತ್ತಿಗೆ ಶ್ರೀಗಳ ಮಠದ ಭಕ್ತರು ಆಡಿಕೊಳ್ಳುತ್ತಿದ್ದಾರಂತಲ್ಲಾ. ಪುತ್ತಿಗೆಯ ಸುಗುಣೇಂದ್ರ ಪರದೇಶಕ್ಕೆ ಹಾರಿ ಹೋದಾಗ ರೋಮಾಂಚನಗೊಂಡಿದ್ದ ಪೇಜಾವರ "ನಮ್ಮ ಶಾಸ್ತ್ರಗಳಲ್ಲಿ ಸಮುದ್ರಲಂಘನಕ್ಕೆ ಗೌರವವಿದೆ. ಇಲ್ಲ ಎಂದರೆ ಅಪಚಾರವಾಗುತ್ತದೆ. ನಮ್ಮ ಹನುಮ ಎಷ್ಟು ಚಂದ ಸಮುದ್ರಲಂಘನ ಮಾಡಿ ಲಂಕೆಗೆ ಬೆಂಕಿಯಿಟ್ಟು ಬಂದ. ಅವನ ಆ ಕೆಲಸವನ್ನು ಈಗಲೂ ನಮ್ಮ ಸಂಘ ಪರಿವಾರದ ಹುಡುಗರು ಮಾಡುತ್ತ ಬಂದಿವೆ. ರಾಮ ತಾನೇ ಕಟ್ಟಿದ ಸೇತುವೆಯ ಮೇಲೆ ಹೋಗಿದ್ದು ಕೂಡ ಸಮುದ್ರಲಂಘನವೇ. ಇಂತಹ ಪರಂಪರೆಯ ನಾವು ನಮ್ಮ ಸುಗುಣನ ಸಮುದ್ರಲಂಘನವನ್ನು ಮನಸಾರೆ ಮೆಚ್ಚಿದ್ದೇವೆ" ಎಂದು ಹೇಳಿದ್ದರಂತಲ್ಲಾ. ಈ ಹೇಳಿಕೆಯನ್ನು ಮರೆತ ಈ ಅರುಳುಮರುಳಿನ ಜನ ಇಂದು ಅದೇ ಸುಗುಣೇಂದ್ರನನ್ನು ಎದುರು ಕೂರಿಸಿಕೊಂಡು "ನೀನು ವಿದೇಶ ಯಾತ್ರೆ ಸಂಬಂಧ ಸಮುದ್ರಲಂಘನ ಮಾಡಿದ್ದು ಸರಿಯಿರಬಹುದು. ಅಥವಾ ಇಲ್ಲದೆ ಇರಬಹುದು. ಆದರೆ ನಮ್ಮ ಶ್ರೀಕೃಷ್ಣನ ಗರ್ಭಗುಡಿಯ ಆವರಣ ಪವಿತ್ರವಾಗಿರಬೇಕಾದರೆ ನೀವು ಕೃಷ್ಣನ ಪೂಜೆ ಮಾಡಬಾರದು" ಎಂದು ಅಷ್ಟಮಠಗಳ ಸ್ವಾಮಿಗಳು ಸಹಿ ಮಾಡಿದ ಪತ್ರ ತೋರಿದರಂತಲ್ಲಾ. ನಂತರ ಆ ಪತ್ರದ ಹಲವು ಸಹಿಗಳು ಫೋರ್ಜರಿ ಎಂದು ಪತ್ತೆಯಾದವಂತಲ್ಲಾ, ಥೂತ್ತೇರಿ!!

* * * * * *



ಅತ್ತ ಉಡುಪಿ ಮಠಗಳ ವಾಗ್ವಾದಗಳು ಸಾಂಗವಾಗಿ ಜರುಗುತ್ತಿರಬೇಕಾದರೆ, ಇತ್ತ ಸಿದ್ಧಗಂಗಾ ಶ್ರೀಗಳಿಗೆ ಅಮರಿಕೊಂಡಿದ್ದ ಶನಿಗಳ ದೆಸೆಯಿಂದ ತುಮಕೂರು ಬಂದ್ ಆಚರಿಸಿತಂತಲ್ಲಾ. ಈ ಬಂದ್‌ನ ವಿಷಯವಾಗಿ ಕುಮಾರಸ್ವಾಮಿ ಟಿ.ವಿ. ಚಾನಲ್ಲು 'ಭಾಗಶಃ ಬಂದ್' ಎಂದರೆ, ಉಳಿದ ಚಾನಲ್ಲುಗಳು 'ಸಂಪೂರ್ಣ ಬಂದ್' ಎಂದು ಬಾಯಿ ಬಡಿದುಕೊಂಡವಂತಲ್ಲಾ. ಯಾವ ಜಗದ್ಗುರುಗಳ ಬಗ್ಗೆಯೂ ಕಿಂಚಿತ್ತೂ ಗೌರವವಿಲ್ಲದ ದೇವೇಗೌಡರ ಕುಟುಂಬ ಮಠದ ಬಾಗಿಲಿಗೆ ಬಂದು ಭಕ್ತಿಪೂರ್ವಕ ನಮಸ್ಕಾರ ಮಾಡಿದ್ದನ್ನು ನಂಬಿದ ಸಿದ್ಧಗಂಗಾ ಶ್ರೀಗಳು ದಸರಾ ಉತ್ಸವದ ಉದ್ಘಾಟನೆಯನ್ನು ಒಪ್ಪಿಕೊಂಡರಂತಲ್ಲಾ. ಆದರೆ ಆನಂತರ ಅವಮಾನ ಅನುಭವಿಸಿ, ಸುಮ್ಮನಾಗುವಷ್ಟರಲ್ಲಿ ಬಾಯಿಬಡುಕ ಎಡೂರಪ್ಪ "ನಮ್ಮ ಸಿದ್ಧಗಂಗೆ ಸ್ವಾಮಿಗಳಿಗೆ ನೂರು ವರ್ಷ ತುಂಬಿದೆ. ಆದ್ದರಿಂದ ನೂರ ಒಂದು ಕೆ.ಜಿ. ಚಿನ್ನದಲ್ಲಿ ಅವರನ್ನು ತೂಗಿ, ಹತ್ತು ಲಕ್ಷ ಜನ ಸೇರಿಸಿ, ಅನ್ನ ಸಂತರ್ಪಣೆ ಮಾಡುತ್ತೇನೆ" ಎಂದುಬಿಟ್ಟಿದ್ದನಂತಲ್ಲಾ. ಇವರಾಡಿದ ಮಾತನ್ನು ಕಿವಿಗೆ ಹಾಕಿಕೊಳ್ಳದೆ ಸ್ವಾಮೀಜಿ ಶಿವಪೂಜೆಯಲ್ಲಿ ತೊಡಗಿರಬೇಕಾದರೆ, "ಸದ್ಯ ಸ್ವಾಮಿಗಳಿಗೆ ನನ್ನ ಆಶ್ವಾಸನೆ ತಲುಪಿಲ್ಲ" ಎಂದ ಯಡ್ಡಿ ಕರಂದ್ಲಾಜೆ ಅಂಡ್ ಕಂಪನಿಯ ಜೊತೆ ತಿರುಪತಿಗೆ ಹೊರಟವರಂತೆ ಊರೂರು ಮೇಲೆ ದೇವೇಗೌಡ ಕುಮಾರಸ್ವಾಮಿ ಹೆಸರೇಳುತ್ತ "ನನಗೇಕೆ ಈ ಶಿಕ್ಷೆ? ನಾನೇನು ತಪ್ಪು ಮಾಡಿದ್ದೆ?" ಎಂದುಕೊಂಡು ಅಲೆಯುತ್ತಿದ್ದಾರಂತಲ್ಲಾ, ಥೂತ್ತೇರಿ!!

* * * * * *

ಶೆಟಲ್ ಕಾರ್ಕ್ ಆದೀ ಆದೀ ಅದನ್ನೇ ರಾಜಕಾರಣವೆಂದು ಭಾವಿಸಿದ್ದ ಬಂಗಾರಪ್ಪ, ಕಾಲನ ಹೊಡೆತಕ್ಕೆ ಸಿಕ್ಕಿ ನಡೆಯಲಾರದೆ, ಮಾತನಾಡಲಾರದೆ ಇರುವ ಸ್ಥಿತಿಯನ್ನು ಮೆಟ್ಟನಿಂತಿದ್ದಾರಂತಲ್ಲಾ. ಅಲ್ಲದೆ "ಬರಲಿರುವ ಚುನಾವಣೆಯಲ್ಲಿ ಎಲ್ಲಾ ಪಾರ್ಟಿಗಳ ಎದುರು ನಾನೇ ಪರ್ಯಾಯ" ಎಂದು ಹೇಳುತ್ತ "ಸಣ್ಣಪುಟ್ಟ ಪಾರ್ಟಿಗಳಾದ ಸಿಪಿಐ, ಸಿಪಿಎಂ ಜೊತೆಗೂ ಹೊಂದಾಣಿಕೆ ಮಾಡಿಕೊಳ್ಳುತ್ತೇನೆ. ಬೇಕಿದ್ದರೆ ಬೇಗ ಬನ್ನಿ" ಎಂದುಬಿಟ್ಟಿದ್ದಾರಂತಲ್ಲಾ. 'ಬಂ'ರ ಸಮಾಜವಾದಿ ಪಾರ್ಟಿಯಿಂದ ಲೋಕಸಭೆಯಲ್ಲಿ ಒಂದು ಸೀಟಿತ್ತು, ವಿಧಾನಸಭೆಯಲ್ಲಿ ಅರ್ಧ ಸೀಟಿತ್ತು, ಏಕೆಂದರೆ ಹರತಾಳು ಹಾಲಪ್ಪನೆಂಬ ಶಾಸಕ ಎಲ್ಲಿ ಏನಾಗಿದ್ದ ಎಂಬುದೇ ಗೊತ್ತಾಗಿರಲಿಲ್ಲ. ಇಂತಹ ಪಾರ್ಟಿಯ ಲೀಡರಾದ 'ಬಂ' ದೇಶದ ದೊಡ್ಡ ಪಾರ್ಟಿಗಳಾದ ಕಮ್ಯುನಿಸ್ಟ್ ಪಾರ್ಟಿಗಳನ್ನೇ ಸಣ್ಣ ಪಾರ್ಟಿಗಳು ಎನ್ನಬೇಕಾದರೆ ಅತ ಇನ್ನೆಂತಹ ಸಣ್ಣ ಮನುಷ್ಯನಿರಬೇಕೆಂದು ಬೆಂಗಳೂರಿನ ಕೆಲ ಕಮ್ಯುನಿಸ್ಟರು ನೆರೆತ ಗಡ್ಡ ಕೆರೆದುಕೊಂಡು ಕಿಸಿದುಕೊಂಡಿದ್ದಾರಂತಲ್ಲಾ, ಥೂತ್ತೇರಿ!!! ■

ಅದು ಕಲ್ಲಳ್ಳಿಯ ಹಳೇ ಪಂಟರ್ ಅಶೋಕ್ ಪೈ ಒಬ್ಬನದೇ ಕೃತ್ಯವಾ? ಆತನ ಜೊತೆ ಹತ ಚೀರನಹಳ್ಳಿ ಶಂಕ್ರನ ಬಾಮ್ಮೈದ ಚೇತನ್ ಕೈಜೋಡಿಸಿದ ಫಲವಾ? ಜಡೇಜನ ಪಾಪದ ಕೊಡ ತುಂಬಿದ್ದರ ಪರಿಣಾಮವಾ? ಅಥವಾ ಸೈಕಲ್ ರವಿಯೊಡನೆ ಕೈಜೋಡಿಸಿದ ಪಾಪಕ್ಕೆ ಕತ್ರಿಗುಪ್ಪೆ ಲಿಂಗ ಜೈಲಲ್ಲೇ ಕೂತು ಹಾಕಿದ್ದ ಸ್ಕೆಚ್ಚಾ? ಯಾರೆಲ್ಲಾ ಜಡೇಜನಿಂದ ಹಾವಳಿಗೀಡಾಗಿದ್ದರೋ ಅವರೆಲ್ಲರೂ ಸೇರಿಯೇ ಕೊಲೆಗೆ ಫೈನಾನ್ಸ್ ಮಾಡಿರಬಹುದಾ?

ಕೊಂದ ರೀತಿ, ಅದರ ಕ್ರೌರ್ಯ, ಹಿಂದಿನ ತಯಾರಿ ಮತ್ತು ಚಾಕಚಕ್ಯತೆಯನ್ನೇ ಲೆಕ್ಕ ಹಾಕುವುದಾದರೆ ಮಂಡ್ಯದ ಯಾವೊಬ್ಬ ರೌಡಿಗೂ ಇಷ್ಟೊಂದು ಭಯಾನಕ ಹತ್ಯೆ ಎಸಗುವಷ್ಟು ತಾಕತ್ತು ಮತ್ತು ಹರಕತ್ತು ಇಲ್ಲವೇ ಇರಲಿಲ್ಲ! ಕತ್ತರಿಸಿದ ಏಟಿಗೆ ತಲೆ ಚಿಪ್ಪೇ ಎಗರಿಬಿದ್ದಿದೆ. ಗುರುತಿಸುವುದಕ್ಕೂ ಅಸಾಧ್ಯವೆಂಬಷ್ಟು ಮುಖ ಸೀಳಿಹೋಗಿದೆ. ಎದೆ, ಹೊಟ್ಟೆ, ಬೆನ್ನಿಗೆ ಬಿದ್ದ ಲಾಂಗ್ ಏಟುಗಳ ಮಾತು ಬದಿಗಿರಲಿ ಆತನ ಎಡಗೈಯನ್ನು ಅಕ್ಷರಶಃ ತುಂಡರಿಸಿ ಅಷ್ಟೇ ಶ್ರದ್ಧೆಯಿಂದ ಅದನ್ನೊಯ್ದು ನಾಗಮಂಗಲ ರಸ್ತೆಯ ಚೀರನಹಳ್ಳಿ ಶಂಕ್ರನ ಸಮಾಧಿಯ ಮೇಲೆ ಪುಷ್ಪಗುಚ್ಛವಿಟ್ಟಂತೆ ಇಡುವಷ್ಟು ರೊಚ್ಚು ಯಾರಿಗಿದ್ದೀತು?



ಅಶೋಕ್ ಪೈ

ಹಂತಕ ಅಶೋಕ್ ಪೈ ಯಾರು?

ಜಡೇಜ ಔಟ್



ಕೊಲೆಯಾದ ಜಡೇಜಾ ರವಿ

ರಾ. ಸೋಮನಾಥ್

ಅದು ಸುಲಭಕ್ಕೆ ಉರುಳುವ ಘಟವಲ್ಲ.

ಕೊಂದ ರೀತಿ, ಆದರ ಕ್ರೌರ್ಯ, ಹಿಂದಿನ ತಯಾರಿ ಮತ್ತು ಚಾಕಚಕ್ಯತೆಯನ್ನೇ ಲೆಕ್ಕ ಹಾಕುವುದಾದರೆ ಮಂಡ್ಯದ ಯಾವೊಬ್ಬ ರೌಡಿಗೂ ಇಷ್ಟೊಂದು ಭಯಾನಕ ಹತ್ಯೆ ಎಸಗುವಷ್ಟು ತಾಕತ್ತು ಮತ್ತು ಹರಕತ್ತು ಇಲ್ಲವೇ ಇರಲಿಲ್ಲ!

ಅವನು ಜಡೇಜಾ ರವಿ!

ಎಣಿಸುವುದೇ ಆದರೆ ಕರಾರುವಾಕ್ಕಾಗಿ ಮುನ್ನೂರ ತೊಂಭತ್ತು ಮಂದಿ ಪ್ರಾಣಕ್ಕೆ ಪ್ರಾಣ ಕೊಡಬಲ್ಲ ಪುಂಡರ ಹಿಂಡೇ ಆತನ ಬೆನ್ನಿಗಿತ್ತು. ಮಂಡ್ಯದ ಸಂಸದ ಅಂಬರೀಷ್ ಮತ್ತು ಕೆರಗೋಡು ಶಾಸಕ ಎಚ್.ಬಿ. ರಾಮು ಪಾಲಿಗೆ ಅವನೇ ದಳಪತಿಯಂತಿದ್ದ. ಗುರು ಎಸ್ಕೆ ರಾಮಣ್ಣನನ್ನು ಕೊಲ್ಲಿಸಿದ ರೌಡಿ ಚೀರನಹಳ್ಳಿ ಶಂಕ್ರನನ್ನು ನಿರಾಯಾಸವಾಗಿ ಕೊಂದು ಹಾಕಿದ್ದ. ಜೈಲಲ್ಲಿ ಕೂತೇ ಆತನ ತಮ್ಮ ಶಿವರಾಮನ ತಲೆ ತೆಗೆಸಿದ್ದ. ಜೈಲಿಂದ ಹೊರಬಿದ್ದವನೇ ಚುನಾವಣೆಗೆ ನಿಂತು ಮಂಡ್ಯ ನಗರಸಭೆಗೆ ಗೆದ್ದು ಬಂದ. ಮಂಡ್ಯದ ಯಾವೊಬ್ಬ ರೌಡಿಯೂ ಇಷ್ಟು ಸಣ್ಣ ವಯಸ್ಸಿಗೆ ಸಾಧಿಸಲಾಗದ್ದನ್ನು, ಗಳಿಸಲಸಾಧ್ಯ ಉತ್ಪತ್ತಿಯನ್ನು, ಎಬ್ಬಿಸಲಾಗದ ಬಂಗಲೆಯನ್ನೂ ಅಷ್ಟೊಂದು ಮಜಬೂತಾಗಿ ಸಾಧಿಸಿ ತೋರಿಸಿದ ಜಡೇಜಾ ರವಿಯನ್ನು ಅದೂ ಮಂಡ್ಯದಲ್ಲೇ ಕೊಲ್ಲುವುದೆಂದರೆ ಸಣ್ಣ ಮಾತೆ?

ಕತ್ತರಿಸಿದ ಏಟಿಗೆ ತಲೆ ಚಿಪ್ಪೇ ಎಗರಿಬಿದ್ದಿದೆ. ಗುರುತಿಸುವುದಕ್ಕೂ ಆಸಾಧ್ಯವೆಂಬಷ್ಟು ಮುಖ ಸೀಳಿ ಹೋಗಿದೆ. ಎದೆ, ಹೊಟ್ಟೆ, ಬೆನ್ನಿಗೆ ಬಿದ್ದ ಲಾಂಗ್ ಏಟುಗಳ ಮಾತು ಬದಿಗಿರಲಿ ಆತನ ಎಡಗೈಯನ್ನು ಅಕ್ಷರಶಃ ತುಂಡರಿಸಿ ಅಷ್ಟೇ ಶ್ರದ್ಧೆಯಿಂದ ಅದನ್ನೊಯ್ದು ನಾಗಮಂಗಲ ರಸ್ತೆಯ ಚೀರನಹಳ್ಳಿ ಶಂಕ್ರನ ಸಮಾಧಿಯ ಮೇಲೆ ಪುಷ್ಪಗುಚ್ಛವಿಟ್ಟಂತೆ ಇಡುವಷ್ಟು ರೊಚ್ಚು ಯಾರಿಗಿದ್ದೀತು? ಅದು ಕಲ್ಲಳ್ಳಿಯ ಹಳೇ ಪಂಟರ್ ಅಶೋಕ್ ಪೈ ಒಬ್ಬನದೇ ಕೃತ್ಯವಾ? ಆತನ ಜೊತೆ ಹತ ಚೀರನಹಳ್ಳಿ ಶಂಕ್ರನ ಬಾಮ್ಮೈದ ಚೇತನ್ ಕೈಜೋಡಿಸಿದ ಫಲವಾ? ಜಡೇಜನ ಪಾಪದ ಕೊಡ ತುಂಬಿದ್ದರ ಪರಿಣಾಮವಾ? ಅಥವಾ ಸೈಕಲ್ ರವಿಯೊಡನೆ ಕೈಜೋಡಿಸಿದ ಪಾಪಕ್ಕೆ ಕತ್ರಿಗುಪ್ಪೆ ಲಿಂಗ ಜೈಲಲ್ಲೇ ಕೂತು ಹಾಕಿದ್ದ ಸ್ಕೆಚ್ಚಾ? ಯಾರೆಲ್ಲಾ ಜಡೇಜನಿಂದ ಹಾವಳಿಗೀಡಾಗಿದ್ದರೋ ಅವರೆಲ್ಲರೂ ಸೇರಿಯೇ ಕೊಲೆಗೆ ಫೈನಾನ್ಸ್ ಮಾಡಿರಬಹುದಾ?

ರೌಡಿ ಜಡೇಜಾ ರವಿಯ ಕಗ್ಗೊಲೆಯ ಸುತ್ತ ಇಂಥ ಅದೆಷ್ಟೋ ಪ್ರಶ್ನೆಗಳಿದ್ದರೂ ತಾರ್ಕಿಕವಾಗಿ ಅವೆಲ್ಲವೂ ವಾಸ್ತವ ಸಂಗತಿಗಳೆ.

ಕೊಲೆ ನಡೆದಾಗ ರವಿಯ ಸ್ಕಾರ್ಪಿಯೋ ಗಾಡಿಯಲ್ಲಿದ್ದವನು ಆತನ ಸಂಬಂಧಿ ಮಧು. ಜೊತೆಗೆ ಇನ್ನೂ ನಾಲ್ಕೈದು ಮಂದಿ ಹುಡುಗರಿದ್ದರು. ಬೆಳಿಗ್ಗೆ ಹತ್ತೂ ಮುಕ್ಕಾಲರ ಹೊತ್ತಿಗೆ ಸಿಹಿನೀರ್ ಕೊಳದ ತನ್ನ ಮನೆಯಿಂದ ಹೊರಬಿದ್ದು ಎಲಿಯೂರು ಸರ್ಕಲ್‌ನಿಂದ ಬಲಕ್ಕೆ ಮಣ್ಣುರಸ್ತೆಯಲ್ಲಿ ಇನ್ನೂ ನೂರೈವತ್ತು ಮೀಟರ್ ದೂರ ಕೂಡ ದಾಟಿಲ್ಲ, ಹಿಂದಿನಿಂದ ಬಂದ ಟಾಟಾ ಸುಮೋ ಬಲವಾಗಿ ಗುದ್ದಿದೆ. ಮುಂದೆ ಹರಟುತ್ತ ಕುಳಿತಿದ್ದ ರವಿ ಏನೋ ಆಕ್ಸಿಡೆಂಟಾಗಿರಬೇಕೆಂದು ಮಿಕ್ಕೆಲ್ಲರಿಗಿಂತಲೂ ಮೊದಲು ಇಳಿದರೆ ಬೆನ್ನಲ್ಲೇ ಹಿಂಬಾಲಿಸಿ ಬಂದ ಇಂಡಿಕಾ ಕಾರಿನಿಂದ ಐದು ಮಂದಿ ಇಳಿದಿದ್ದಾರೆ. ಗುದ್ದಿದ ಸುಮೋದಲ್ಲೂ ಎಂಟು ಮಂದಿ ಹಂತಕರಿದ್ದರು. ಎಲ್ಲರ ಕೈಯಲ್ಲೂ ಲಾಂಗ್‌ಗಳಿದ್ದವು. ಇಳಿದ ರವಿಯನ್ನು ಐದು ಮಂದಿ ಕಚಕಚನೇ ಕತ್ತರಿಸುತ್ತಿದ್ದರೆ, ಉಳಿದವರು ಗಾಡಿಯಲ್ಲಿದ್ದ ರವಿಯ ಹುಡುಗರನ್ನು ಅಟ್ಟಾಡಿಸಿದ್ದಾರೆ. ಬದುಕುಳಿದ ರವಿಯ ಸಂಬಂಧಿ ಮಧು ಪ್ರಕಾರ ಅವರ್‍ಯಾರೂ ಮಂಡ್ಯದ ಆಸಾಮಿಗಳಾಗಿರಲಿಲ್ಲ!



ಲಿಕ್ಕರ್ ರಂಗಸ್ವಾಮಿ

ಇದರರ್ಥ ಕೊಂದವರು ಬೆಂಗಳೂರಿನ ಹುಡುಗರು! ಕಲ್ಲಳ್ಳಿಯ ಅಶೋಕ್ ಪೈ ಕಂಡಕಂಡ ಪತ್ರಕರ್ತರಿಗೆ ಫೋನ್ ಮಾಡಿ ಕೊಂದದ್ದು ತಾನೇ, ಜೊತೆಗೆ ಚೀರನಹಳ್ಳಿ ಶಂಕ್ರನ ಅಕ್ಕನ ಮಗ ಚೇತನ್ ಕೂಡ ಇದ್ದ, ತಾನು ಬದುಕುಳಿಯಬೇಕು ಅಂದ್ರೆ ಒಂದೋ ಲಿಕ್ಕರ್ ರಂಗಸ್ವಾಮಿನ ತೆಗೀಬೇಕಿತ್ತು ಅಥವಾ ಜಡೇಜಾ ರವಿಯನ್ನಾದ್ರೂ ಮುಗಿಸಬೇಕಿತ್ತು, ಆದಕ್ಕೇ ಈ ಕೆಲ್ಸ ಮಾಡಿಬಿಟ್ಟೆ ಎನ್ನುತ್ತಿದ್ದಾನೆ.

ಹಾಗಂತ ಪೈ ಹೇಳಿದ್ದೆಲ್ಲವನ್ನೂ ಪೊಲೀಸರು ನಂಬುತ್ತಿಲ್ಲ. ಬೆಂಗಳೂರಿನ ಯಾರಿಗೋ ಸುಪಾರಿ ಕೊಟ್ಟೇ ಪೈ ಕಾರ್ಯ ಸಾಧಿಸಿದ್ದಾನೆಂಬ ಬಗ್ಗೆ ಯಾರಿಗೂ ಅನುಮಾನಗಳಿಲ್ಲ. ಜಡೇಜಾ ಇತ್ತೀಚೆಗೆ ಸೈಕಲ್ ರವಿ ಜೊತೆ ಸೇರಿ ಬೆಂಗಳೂರಿನ ಲ್ಯಾಂಡ್ ಡೀಲಿಗೂ ಕೈಯಿಟ್ಟಿದ್ದ. ಸೈಕಲ್ ರವಿಯಂಥ ಸುಪಾರಿ ಹಂತಕನಿಗೆ ಮಂಡ್ಯದಲ್ಲಿ ಪದೇಪದೇ ಶೆಲ್ಟರ್ ಕೊಡುತ್ತಲೇ ಇದ್ದ. ಚೀರನಹಳ್ಳಿ ಶಂಕ್ರನ ಕೊಲೆ ಕೇಸಿನಲ್ಲಿ ಜೈಲುಪಾಲಾದವನು ಜೈಲಲ್ಲಿ ಕೂತೇ ಸಿಹಿನೀರ್ ಕೊಳದಲ್ಲಿ ಭಾರೀ ಬಂಗಲೆಯೊಂದನ್ನು ಎಬ್ಬಿಸಿದಾಗಲೇ ಜಡೇಜಾನ ತಾಕತ್ತೇನೆಂಬುದು ಇಡೀ ಮಂಡ್ಯಕ್ಕೆ ಗೊತ್ತಾಗಿತ್ತು. ನಂತರ ಬಂದ ನಗರಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿದ ಜಡೇಜ ಕೇವಲ 350 ಓಟುಗಳಿಂದ ಗೆದ್ದೂಬಿಟ್ಟ.



ಬಕ್ಷಿ ಪಾಪಮ್ಮ

ಅಲ್ಲಿಗೆ ಜಡೇಜ ತಾನು ಬದಲಾಗಿಬಿಟ್ಟೆನೆಂದುಕೊಂಡ. ಮಂಡ್ಯದ ಜನ ಕೂಡ ಇನ್ನು ಮೇಲೆ ಆತ ಸರಿಹೋಗುತ್ತಾನೆಂದೇ ಭಾವಿಸಿದ[...] ಆದರೆ ಜಡೇಜನಿಗಾಗಲೇ ಡಾನ್ ಪಟ್ಟದ ರ[...] ಹತ್ತಿಬಿಟ್ಟಿತ್ತು. ಹೇಗೂ ತಾನು ಕೌನ್ಸಿಲರ್ ಪಟ್ಟಕ[...]ದ್ದರಿಂದ ಪೊಲೀಸರು ತನ್ನನ್ನು ಮುಟ್ಟುವುದು ಸಾಧ[...] ಇಲ್ಲ ಎಂದುಕೊಂಡೇ ಜಡೇಜ ವಿಪರೀತಕ್ಕಿಳಿದ. ಒಂ[...] ಸಂಸದ ಅಂಬರೀಷ್ ಕುಮ್ಮಕ್ಕು, ಮತ್ತೊಂ[...] ಕೆರಗೋಡು ಶಾಸಕ ಎಚ್.ಬಿ. ರಾಮುವಿನ ಸಪೋರ್[...] ಮಗದೊಂದೆಡೆ ಲಿಕ್ಕರ್ ರಂಗಸ್ವಾಮಿಯ ದುಡ್ಡು ಆ[...] ತಲೆ ತಿರುಗಿಸಿಬಿಟ್ಟಿತ್ತು. ಯಾರೆಲ್ಲ ಆತನಕ ತನ್ನ ಬೆನ್ನಿ[...] ನೆರವಾಗುತ್ತಿದ್ದರೋ ಅಂಥ ಒಬ್ಬೊಬ್ಬರನ್ನೇ ಕಳಕೊಳ[...] ಬಂದ.

ಈ ಪೈಕಿ ಮಿಕ್ಕೆಲ್ಲರಿಗಿಂತಲೂ ಜಡೇಜ ಕ[...] ಋಣಿಯಾಗಬೇಕಿದ್ದದು ಆತನ ಗುರು ಎಸ್ಕೆ ರಾಮ[...] ಅಣ್ಣನ ಮಗ ನಂದೀಶನಿಗೆ. ಸ್ಥಳೀಯ ಸಕ್ಕರೆ ಸಿ[...] ಪತ್ರಿಕೆಯ ಸಂಪಾದಕ ನಂದೀಶ್ ಆತನಕ ಜಡೇ[...] ಬಗ್ಗೆ ಜನಕ್ಕೆ ಒಳ್ಳೇ ಅಭಿಪ್ರಾಯ ಬರುವಂತೆ ಪತ್ರಿಕೆ[...] ಬರೆಸಿದ್ದನು. ಆತನನ್ನು ಕಾಂಗ್ರೆಸ್ಸಿಗೆ ತಂದು ಕೌನ್ಸಿ[...] ಮಾಡಿ ಸರಿದಾರಿಗೆ ತರುವಲ್ಲಿ ಇನ್ನಿಲ್ಲದಂತೆ ಪ್ರಯ[...]ತ್ತಲೇ ಇದ್ದನು. ಆದರೆ ಜೈಲಿಂದ ಹೊರಬಿ[...] ಜಡೇಜನ ಶಿಷ್ಯರಾದ ಬಕ್ಕಾ ಶಿವಾ ಮತ್ತು ಕಪ್[...] ಸೀದಾ ನಂದೀಶನನ್ನೇ ಅಟಕಾಯಿಸಿಕೊಂಡು 'ಎ[...] ಲಕ್ಷ ಮಡಗು' ಎಂದು ಧಮಕಿ ಕೊಟ್ಟರು. ಜಡೇ[...] ಹರಕತ್ತಿಲ್ಲದೇ ಆತನ ಶಿ[...] ನಂದೀಶನನ್ನು ಪೀಡಿಸುವುದುಂ[...]

ಹಾಗಂತ ಜಡೇಜನನ್ನು ನಿಲ್ಲಿಸಿ ನ್ಯಾಯ ಒಪ್ಪಿಸುವುದ[...] ಯಾವುದೇ ಅರ್ಥವಿಲ್ಲವೆಂದ[...] ಬಗೆದ ನಂದೀಶ್ ಸೀದಾ ಪೊಲೀಸ್ ವರಿಷ್ಠ ಪ್ರಕಾಶ್‌ಗೆ ದೂರುಕೊಟ್ಟರು. ಮಟಮಟ ಮಧ್ಯಾಹ್ನವೇ ಬಾಟಲಿ ಹಿಡಿದು ಕೂರುತ್ತಿ[...] ಎಸ್.ಪಿ. ಪ್ರಕಾಶ್ ಈ ಹೊತ್ತಿಗಾಗಲೇ ಜಡೇಜನ ಪ್ರಸಾದದ ರುಚಿ ಕಂಡಾಗಿತ್ತಲ್ಲ-ಜಡೇಜನನ್ನು ಲಾಕಪ್ಪಿಗೆ ಹಾಕುವ ಮಾತಿರಲಿ, ಕನಿಷ್ಠ ಆತನ ಬಂಟರಿಗಾದರೂ ಬಿಸಿ ಮುಟ್ಟಿಸಲೇ ಇಲ್ಲ.



ದಂಧೆ ನಡೆಸುತ್ತಿದ್ದ ಲಾಡ್ಜ್

ಜಡೇಜನ ಬಂಟ ಕಚ್ಚಿಮುದ್ದ, ಸ್ಯಾಟ್ ನಾಗ ಮುಂತಾದ ಕಿಡಿಗೇಡಿಗಳಿಂದ ಬಚಾವಾಗಬೇಕಾದರೆ ಸತೀಶ್ ಅಂತಿಮವಾಗಿ ಆಡಿಷನಲ್ ಎಸ್‌ಪಿ ಕೃಷ್ಣಂರಾಜು ಮುಂದೆ ಕಣ್ಣೀರಿಡ ಬೇಕಾಯಿತು.

ಇದು ಜಡೇಜನ ಅಟ್ಟಹಾಸಕ್ಕೆ ಸಣ್ಣ ಸ್ಯಾಂಪಲ್ ಮಾತ್ರ.


ಇದೇ ಗತಿಗೆ ಬಿದ್ದ ಮತ್ತೊಬ್ಬ ಪತ್ರಕರ್ತ ಸಂಕ್ರಾಂತಿ ಸತೀಶ. ಮೊದಮೊದಲು ತನಗಿನ್ನು ರೌಡಿಜಮ್ಮೇ ಬೇಡ, ಒಳ್ಳೆಯವನಾಗ್ತೀನಿ ಎಂದು ಸತೀಶ್‌ರನ್ನು ಕರೆಸಿ ಪುಟಗಟ್ಟಲೇ ಬರೆಸಿಕೊಂಡ ಜಡೇಜ ಕಾಲಕ್ರಮೇಣ ವೇಶ್ಯಾವಾಟಿಕೆಗೂ ಕೈಯಿಟ್ಟ ಬಗ್ಗೆ, ಆತನ ಅಟ್ಟಹಾಸದ ವಿರುದ್ಧ ವರದಿ ಮಾಡಿದ ಸತೀಶ್ ಸಂಕ್ರಾಂತಿಗೆ ಜಡೇಜನ ಶಿಷ್ಯರು ಪದೇಪದೇ ಫೋನ್ ಮಾಡಿ ಹಾವಳಿ ಯಿಟ್ಟರು.



ಯಲ್ಲೇಶ್

ಮೇಲುನೋಟಕ್ಕೆ ಎಲ್ಲಾ ಬಿಟ್ಟು ತಾನಿನ್ನು ರಾಜಕಾರಣಿಯಂತೆ ಫೋಜು ಕೊಡುತ್ತಿದ್ದ. ಒಳಗೊಳಗೇ ತನ್ನ ಬಂಟರಾದ ಬಿಕ್ಲಾ ಶಿವಾ, ಕಪ್ಪೆ ರವಿ, ರಘು, ಬಂಗಾರಪ್ಪ, ಮರಾಠಿ ಪದ್ದು, ಮಾರುತಿ ಮುಂತಾದವರನ್ನು ಛೂಬಿಟ್ಟು ಅನಾಚಾರವೆಸಗುತ್ತಲೇ ಇದ್ದ. ಜೈಲಿಂದ ಹೊರಬದ್ದಿದ್ದೇ ಸಿಹಿನೀರ್ ಕೊಳದಲ್ಲಿ 1 ಕೋಟಿಯ ಬಂಗಲೆಯೆಬ್ಬಿಸಿದ. ಅದರ ಇಂಟೀರಿಯರ್ ಡೆಕೊರೇಷನ್ನಿಗೆ ಅಂತಲೆ 40 ಲಕ್ಷ ರೂಪಾಯಿ ಸುರಿದಿದ್ದ. ತನ್ನ ಬಂಟ ಮರಾಠಿ ಪದ್ದನಿಗೆ ಮಂಡ್ಯದಲ್ಲೊಂದು ಮನೆಯನ್ನು ಕಟ್ಟಿಸಿಕೊಟ್ಟ.

ಬರುಬರುತ್ತ ತನ್ನ ಹುಡುಗರನ್ನು ಛೂಬಿಟ್ಟು ಸುಲಿಗೆ ಮಾಡಿಸುತ್ತಿದ್ದ. ಆತನ ಆರ್ಭಟ ಯಾವ ಮಟ್ಟಕ್ಕೇರಿತೆಂದರೆ ಕಚ್ಚೆಗೆರೆ ಪ್ರಶಾಂತ್ ಎಂಬ ನಕಲಿ ಐಎಎಸ್ ಅಧಿಕಾರಿಯ ಮನೆಗೇ ನುಗ್ಗಿದ ಆತನ ಹುಡುಗರು ಮುಲಾಜಿಲ್ಲದೇ ಎರಡು ಲಕ್ಷ ಕಿತ್ತರು.



ಶಂಕರನ ಶಿಷ್ಯ ಕಿಟ್ಟಿ


ವೀವಿ ರಸ್ತೆಯ ಬಟ್ಟೆ ಅಂಗಡಿಯೊಂದಕ್ಕೆ ಹುಡುಗರನ್ನು ನುಗ್ಗಿಸಿದ ಜಡೇಜ ಅವರೆಲ್ಲರಿಗೂ 35 ಸಾವಿರ ರೂ. ಬಟ್ಟೆ ಖರೀದಿಸುವಂತೆ ಹೇಳಿ ಬಿಲ್ಲನ್ನು 'ಅಣ್ಣಾ ಕೊಡ್ತಾನೆ' ಎಂದು ದಾಂಧಲೆಯೆಬ್ಬಿಸಿದ್ದ. ಪಕ್ಕದ ಚಂದನ್ ಫುಟ್‌ವೇರ್‌ನಲ್ಲಿ ಆತನ ಶಿಷ್ಯರು 15 ಸಾವಿರದ ಷೂ-ಚಪ್ಪಲಿ ಕೊಂಡು ಕೇವಲ ಎರಡು ಸಾವಿರ ಕೊಟ್ಟು, ಮಿಕ್ಕಿದ್ದನ್ನು 'ಅಣ್ಣಾ ಬಂದು ಕೊಡ್ತಾನೆ ಈಸ್ಕಳ್ರೀ...!' ಎಂದು ಬಂದಿದ್ದರು. ರಾಘವೇಂದ್ರ ಮಠದ ಪಕ್ಕದ ಷೋರೂಂಗೆ ದಾಳಿಯಿಟ್ಟ ಆತನ ಶಿಷ್ಯರು ಅರವತ್ತು ಸಾವಿರ ರೂಪಾಯಿಯ ಟೀವಿ, ವಾಷಿಂಗ್ ಮೆಷಿನ್ ಎತ್ತಿಕೊಂಡು ಕೇವಲ 10 ಸಾವಿರ ಕೈಗಿಟ್ಟು ಬಂದರು. ಇದ್ಯಾವುದೂ ವ್ಯಾಪಾರಿಗಳ ಅಂಗಡಿಯಾಗಿರದೇ ಜಡೇಜನ ಹತ್ತಿರದ ಸಂಬಂಧಿಗಳದೇ ಮಳಿಗೆಗಳಾಗಿದ್ದವು. ದೂರು ಕೊಟ್ಟರೆ ಪೊಲೀಸರು ತಾನೇ ಏನು ಮಾಡಲು ಸಾಧ್ಯವಿತ್ತು?



ಜಡೇಜಾ ರವಿಯ ಸಂಬಂಧಿಕರು ರೋಧಿಸುತ್ತಿರುವುದು

ಜಡೇಜ ಗೌರವಾನ್ವಿತ ಕೌನ್ಸಿಲರ್ ಆಗಿಬಿಟ್ಟಿದ್ದ!

ಇನ್ನು ಜಡೇಜನ ಬಂಟ ಬಂಗಾರಪ್ಪ ಮಂಡ್ಯದ ಸಣ್ಣಪುಟ್ಟ ಬಡ್ಡಿ ವ್ಯಾಪಾರಿಗಳಿಂದ ಸಾಲಗಾರರು ಕೊಟ್ಟಿದ್ದ ಖಾಲಿ ಚೆಕ್ಕುಗಳನ್ನು ಕಿತ್ತುಕೊಂಡು ತನಗಿಷ್ಟ ಬಂದಷ್ಟು ಮೊತ್ತ ಬರೆದು ಸುಲಿಯುವುದನ್ನೇ ಕಾಯಕ ಮಾಡಿಕೊಂಡ. ಮತ್ತೊಂದೆಡೆ ಜಡೇಜನೇ ನಿಂತು ಅಸಹ್ಯದ ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದ. ಆತ್ಮಾನಂದರ ತಮ್ಮ ಸತ್ಯಾನಂದನ ಪದ್ಮಾಸಾಗರ್, ಪೈ ಅಡ್ಡೆ ಹಾಕುತ್ತಿದ್ದ ಮಾರುತಿ ಡೀಲಕ್ಸ್, ತನ್ನ ಸ್ವಂತ ಅಣ್ಣನಾದ ಶ್ರೀರಾಮ ಮತ್ತು ತಾನೇ ನಡೆಸುತ್ತಿದ್ದ ಚಾಲುಕ್ಯ ಲಾಡ್ಜುಗಳಲ್ಲಿ ಬೆಂಗಳೂರು, ಮುಂಬೈಗಳಿಂದ ಕರೆಸಿದ ಹುಡುಗಿಯರನ್ನಿಟ್ಟು ಮೈಕಸುಬು ಕಾಯಕ ಶುರುಹಚ್ಚಿಕೊಂಡ ಜಡೇಜನಿಗೆ ತನ್ನ ಪಾಪದ ಕೊಡ ತುಂಬುತ್ತಲೇ ಇರುವುದು ಗೊತ್ತಾಗಲೇ ಇಲ್ಲ!



ಕ್ಯಾಟ್ ಅಲಿಯಾಸ್ ನಾರಾಯಣ

ಯಾವತ್ತು ಕೌನ್ಸಿಲರಾದ ಮೇಲೂ ಜಡೇಜ

(ಮುಂದಿನ ಪುಟಕ್ಕೆ)

ಜಡೇಜನ ಶಿಷ್ಯರ ರಿವೇಂಜ್
ಲಿಕ್ಕರ್ ನಾಗಣ್ಣನ ಬಲಿ?

ಇದು ಸದ್ಯಕ್ಕೆ ನಿಲ್ಲುವ ಜಿದ್ದಾಜಿದ್ದಿಯಲ್ಲ!

ಜಡೇಜನ ಕೊಲೆ ನಡೆದ ನಲವತ್ತೆಂಟು ಗಂಟೆಯೊಳಗೆ ಆತನ ಬಂಟರು ಅಬಕಾರಿ ನಾಗಣ್ಣನನ್ನು ಕತ್ತರಿಸಿದ್ದಾರೆ.

ಸದ್ಯ ಮೈಸೂರಿನ ಬಿ.ಎಂ. ಆಸ್ಪತ್ರೆಯ ತುರ್ತುನಿಗಾದಲ್ಲಿ ಮಲಗಿರುವ ಮಂಡ್ಯದ ಕಾಂಗ್ರೆಸ್ ಮುಖಂಡ ಕಂ ಮತ್ತೊಬ್ಬ ಲಿಕ್ಕರ್ ದೊರೆ ಎಚ್.ಪಿ. ನಾಗೇಂದ್ರ, ಬದುಕುಳಿದರೆ ಅದೇ ಪವಾಡ!

ಪ್ರತಿ ಭಾನುವಾರ ಮೈಸೂರಿನ ಯಾದವಗಿರಿ ಏರಿಯಾದ ರಾಮಕೃಷ್ಣಾಶ್ರಮಕ್ಕೆ ಪತ್ನಿ ಸಮೇತ ಬಂದು ಅಲ್ಲಿ ವಿದ್ಯಾರ್ಥಿಯಾಗಿರುವ ತನ್ನ ಪುತ್ರ ವಿಶ್ರುತ್‌ನನ್ನು ಮಾತಾಡಿಸಿ ಹೋಗುವುದು ನಾಗಣ್ಣನ ವಾಡಿಕೆ. ಆ ಪ್ರಕಾರವೇ ಡಿಸೆಂಬರ್ 9 ರ ಭಾನುವಾರ ಬೆಳಿಗ್ಗೆ ನಾಗಣ್ಣ ರಾಮಕೃಷ್ಣಾಶ್ರಮಕ್ಕೆ ಬಂದಿದ್ದಾನೆ. ಜೊತೆಗೆ ಆತನ ಪತ್ನಿಯೂ ಬಂದಿದ್ದಾರೆ. ಕಾರ್ ನಿಲ್ಲಿಸಿ ಆಶ್ರಮದ ಎದುರಿಗೇ ಇರುವ ಅಂಗಡಿಯಿಂದ ಒಂದಷ್ಟು ತಿಂಡಿ ಖರೀದಿಸಿ ಇನ್ನೇನು ರಸ್ತೆ ದಾಟಿ ಆಶ್ರಮಕ್ಕೆ ಹೋಗಬೇಕೆನ್ನುವಷ್ಟರಲ್ಲೇ KA 09 988 ನಂಬರಿನ ಇಂಡಿಕಾ ಕಾರು ಬಂದು ನಿಂತಿದೆ.



ಸಾವು ಬದುಕಿನ ನಡುವೆ ಹೋರಾಟ ನಡೆಸುತ್ತಿರುವ ನಾಗಣ್ಣ

ಸದ್ಯ ಬಿ.ಎಂ. ಆಸ್ಪತ್ರೆಗೆ ಹಾಕಿದ್ದಾರೆ. ಎರಡೂ ಕೈ ಕತ್ತರಿಸಿ ಹೋಗಿದೆ. ತಲೆಗೆ ಬಿದ್ದ ಏಟಿಗೆ ರಕ್ತ ವಿಪರೀತ ಸೋರಿ ಹೋಗಿದೆ. ಬದುಕುಳಿದರೆ ಅದೇ ಆತನ ಪುಣ್ಯ!

ಲಿಕ್ಕರ್ ರಂಗಸ್ವಾಮಿಗೆ ಹೋಲಿಸಿದರೆ ನಾಗಣ್ಣ ಅಂಥ ಅಪಾಯಕಾರಿಯಲ್ಲ. ಮಂಡ್ಯದ ಹಾಗಂಥ ರಂಗಸ್ವಾಮಿಯಂತೆ ಯಾವುದೇ ರೌಡಿಗಳನ್ನು ನಾಗಣ್ಣ ಹೊತ್ತು ಮೆರೆಸಿದವನಲ್ಲ. ರೌಡಿಗಳಿಗೆ ದೊಡ್ಡ ಮಟ್ಟದಲ್ಲಿ ದುಡ್ಡು ಬಿಚ್ಚುತ್ತಿರಲಿಲ್ಲ. ಯಾವತ್ತು ಜಡೇಜನ ಹಾವಳಿ ವಿಪರೀತವಾಯಿತೋ, ಕಲ್ಲಳ್ಳಿ ಪೈ ಕ್ರಮೇಣ ನಾಗಣ್ಣನನ್ನು ಓಲೈಸಲಾರಂಭಿಸಿದ್ದಾನೆ. ಅದು ಏನೆಲ್ಲಾ ಅನಾಹುತಕ್ಕೆ ಕಾರಣವಾಗಬಹುದೆಂಬುದು ನಾಗಣ್ಣನಿಗಾದರೂ ಎಲ್ಲಿ ಗೊತ್ತಿತ್ತು? ಜಡೇಜನ ಕೊಲೆಗೂ ವಾರದ ಹಿಂದೆ ಅಶೋಕ್ ಪೈ ಇದ್ದಕ್ಕಿದ್ದಂತೆ ನಾಗಣ್ಣನ ಮನೆಗೆ ಬಂದಿದ್ದಾನೆ. ಆತನ ಹುನ್ನಾರ ಗೊತ್ತಿದ್ದರೆ ಬಹುಶಃ ನಾಗಣ್ಣನೇ ಅಡ್ಡಗಾಲಿಡುತ್ತಿದ್ದನೋ ಏನೋ?

ಅಷ್ಟಕ್ಕೂ ಈ ನಾಗಣ್ಣ ಉರ್ಫ್ ನಾಗೇಂದ್ರನಿಗೂ ಜಡೇಜನಿಗೂ ಮಂಡ್ಯದ ಎಮ್ಮೆಲ್ಲೇಗಾದಿಗಾಗಿ ತೀವ್ರ ಹಣಾಹಣಿಯೇ ಏರ್ಪಟ್ಟಿತ್ತು. ಆತ್ಮಾನಂದ ಬಿಜೆಪಿಗೆ ಹೋಗುತ್ತಾರಾದ್ದರಿಂದ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿ ಎಮ್ಮೆಲ್ಲೇಯಾಗುವುದು ನಾಗಣ್ಣನ ಉದ್ದೇಶವಾಗಿತ್ತು. ಜಡೇಜನ ಹತ್ಯೆಯಿಂದಾಗಿ ಈ ಎಲ್ಲಾ ಲೆಕ್ಕಾಚಾರಗಳು ತಲೆ ಕೆಳಗಾಗಿವೆ. ನಾಗಣ್ಣನ ಮಗ ರಾಮಕೃಷ್ಣಾಶ್ರಮದಲ್ಲಿರು [illegible]



[illegible]

ಕಾರಿಂದ "ಇಳಿದ" ಇಬ್ಬರ ಪೈಕಿ ಒಬ್ಬಾತ ಹತ ರೌಡಿ ಸುಂದ್ರನ ಮಗ ಶಿವಾ. ವರಸೆಯಲ್ಲಿ ಜಡೇಜನಿಗಾತ ಬಾಮೈದನಾಗಬೇಕು!

ಇಬ್ಬರ ಕೈಯಲ್ಲೂ ಹೊಳೆಯುತ್ತಿದ್ದ ಲಾಂಗ್‌ಗಳಿದ್ದವು. ಏನಾಗುತ್ತಿದೆ ಎಂಬುದನ್ನೂ ಯೋಚಿಸುವಷ್ಟರಲ್ಲೇ ನಾಗಣ್ಣನ ಮೇಲೆ ದಾಳಿ ನಡೆದಿದೆ. ನುಗ್ಗಿ ಬಂದ ಶಿವ ಮತ್ತವನ ಸಹಚರ ನಾಗಣ್ಣನ ಮೇಲೆ ಲಾಂಗ್ ಬೀಸಿದ್ದಾರೆ. ಹೊಡೆದ ಏಟಿಗೆ ನಾಗಣ್ಣನ ಎರಡೂ ಕೈಗಳು ಕತ್ತರಿಸಿವೆ. ತಲೆಗೆ ಬಲವಾದ ಏಟು ಬಿದ್ದು ರಕ್ತ ಚಿಮ್ಮಿದೆ. ಕ್ಷಣಾರ್ಧದಲ್ಲೇ [illegible]

[illegible]

ಅಶೋಕ್‌ನಗರದ ಒಂದನೇ ಕ್ರಾಸಿನಲ್ಲಿ ಈತನ ಪ್ರಿಯಾ ಹೋಲ್‌ಸೇಲ್ ಅಡ್ಡೆಯಿದ್ದರೆ ಪಕ್ಕದ ಎರಡನೇ ಕ್ರಾಸಿನಲ್ಲಿ ಈತನ ಮನೆಯಿದೆ. ವರಸೆಯಲ್ಲಿ ಮದ್ದೂರು ಶಾಸಕ ಡಿ.ಸಿ. ತಮ್ಮಣ್ಣನಿಗೆ ಈತ ಅಳಿಯನಾಗಬೇಕು. ಡಿ.ಸಿ. ತಮ್ಮಣ್ಣನ ಒಬ್ಬ ಮಗಳನ್ನು ಈತನ ತಮ್ಮನಿಗೆ ತಂದಿದ್ದಾರೆ. ಈತ ಮೊದಲ ಬಾರಿಗೆ ಮಂಡ್ಯದ ರೌಡಿ ಜಗತ್ತಿನ ಬಾಗಿಲು ತಟ್ಟಿದ್ದು 1997 ರಲ್ಲಿ. ಆ ಹೊತ್ತಿಗಾಗಲೇ ರಂಗಸ್ವಾಮಿ [illegible]

[illegible]

ಮಂಡ್ಯದ ಸೈತಾನ್ ರಂಗಸ್ವಾಮಿ

ನೊದಲು ಕೊಲೆಯಾದ ಸುಂದ್ರ. ಅದಕ್ಕೆ ಪ್ರತಿಯಾಗಿ ಅಣ್ಣಯ್ಯ, ಅನಂತರ ಹತನಾದ ಎಸ್ಪೆ ರಾಮಣ್ಣ, ಅವರ ಸೇಡಿಗೆ ಹೆಣವಾದ ಚೀರನಹಳ್ಳಿ ಶಂಕ್ರ ಮತ್ತು ಈಗ ಹತನಾದ ಜಡೇಜಾ ರವಿ.

ಈ ಮಧ್ಯೆ ಚೀರನಹಳ್ಳಿ ಶಿವರಾಮನ ಕೊಲೆಯನ್ನೂ ಸೇರಿಸಿ ಲೆಕ್ಕ ಹಾಕಿದರೆ ಮಂಡ್ಯದ ಲಿಕ್ಕರ್ ದೊರೆಗಳ ಜಿದ್ದಾಜಿದ್ದಿಗಾಗಿ ನಡೆದ ಕೊಲೆಗಳ ಸಂಖ್ಯೆಯೇ ಐದಾಗುತ್ತದೆ.

ಪ್ರತ್ಯಕ್ಷವೋ ಪರೋಕ್ಷವೋ ಈ ಐದೂ ಹತ್ಯೆಗಳಿಗೆ ಲಿಕ್ಕರ್ ರಂಗಸ್ವಾಮಿಯೇ ಕಾರಣನಾಗುತ್ತಾನೆ.

ರಂಗಸ್ವಾಮಿ ಹುಟ್ಟಾ ಹಾಬುಂದಿ ಮತ್ತು ಅಸಾಧಾರಣ ರಕ್ತದಾಹಿ. ಮೂಲತಃ ಮಾಗಡಿ ತಾಲ್ಲೂಕು ಮೋಟಗಾನಹಳ್ಳಿಯ ರಂಗಸ್ವಾಮಿ ತನ್ನ ಹದಿನೈದನೇ ವಯಸ್ಸಿಗೇ ಮನೆಬಿಟ್ಟು ಮಂಡ್ಯದ ಹೋಟೆಲೊಂದರಲ್ಲಿ ಲೋಟ ತೊಳೆಕೊಂಡಿದ್ದ. ಕ್ರಮೇಣ ಸಿಹಿನೀರು ಕೊಳದ ಅಲಂಕಾರ್ ಬಾರ್‌ಗೆ ಸಪ್ಲೈಯರ್ ಆಗಿ ನಂತರ ಅಲ್ಲಿಯೇ ಕ್ಯಾಷಿಯರ್ ಹುದ್ದೆಗೇರಿದ. ಮಾಲೀಕನ ಮುಂಡಾಮೋಚಿಯೇ ಒಂದಷ್ಟು ದುಡ್ಡು ಜೋಡಿಸಿಕೊಂಡು ಜ್ಯೋತಿ ವೈನ್‌ಸ್ಟೋರ್ ಆರಂಭಿಸಿದ. ಬೆನ್ನಲ್ಲೇ ಸೆಕೆಂಡ್ಸ್ ದಂಧೆಗೆ ಕೈಯಿಟ್ಟ. ಮಂಡ್ಯದ ಸುತ್ತಮುತ್ತಲ ತಾಲ್ಲೂಕುಗಳಲ್ಲೆಲ್ಲ ಬಾರ್‌ಗಳನ್ನು ಗುತ್ತಿಗೆ ಹಿಡಿದು ಕ್ರಮೇಣ ತಾನೇ ಕಳಪೆ ಲಿಕ್ಕರ್ ತಯಾರಿಸಿ ಅದನ್ನು ಬಾಟಲಿಗೆ ತುಂಬಿಸಿ ವಿತರಿಸಲಾರಂಭಿಸಿದ.

ಒಂದೆಡೆ ಸೆಕೆಂಡ್ಸ್ ಸ್ಮಗ್ಲಿಂಗ್, ಮತ್ತೊಂದೆಡೆ ಥರ್ಡ್ಸ್ ದಂಧೆಯಿಂದಾಗಿ ರಂಗಸ್ವಾಮಿ ರಾತ್ರೋರಾತ್ರಿ ಕುಬೇರನಾದ. ಅದೂ ತನಗೆ ಆಶ್ರಯ ಕೊಟ್ಟು ನೆರವಾಗಿದ್ದ ಗುರುರಾಜ ಹೋಲ್‌ಸೇಲ್‌ನ ಧಣಿಗೇ ಒಂದೂವರೆ ಕೋಟಿಯಷ್ಟು ಮುಂಡಾಯಿಸಿದ್ದ!

ಆತನಕ ಮಂಡ್ಯದ ಸಾರಾಯಿ ಗುತ್ತಿಗೆ ಪ್ರಿಯಾ ಹೋಲ್‌ಸೇಲ್ ನಾಗಣ್ಣ ನಿಯಂತ್ರಣದಲ್ಲಿತ್ತು, ಮುಂದೆ ನಾಗಣ್ಣನನ್ನು ಯಾಮಾರಿಸಿ ತಾನೇ ಮಂಡ್ಯದ ಸಾರಾಯಿ ದೊರೆಯಾದ ರಂಗಸ್ವಾಮಿ ಆತನಕ ಯಾರೂ ಮಾಡದ ಅನಾಚಾರವೊಂದಕ್ಕೆ ಕೈಯಿಟ್ಟ. ಅದು ಹುಡಿಪುಡಿ ರೌಡಿಗಳನ್ನೆಲ್ಲ ಗುಡ್ಡೆ ಹಾಕಿ ಅವರನ್ನೇ ರೇಡ್‌ಬಾಯ್‌ಗಳನ್ನಾಗಿಸಿ ಓಡಾಟಕ್ಕೆ ಗಾಡಿ ಕೊಟ್ಟು ಪ್ರತಿನಿತ್ಯ ಎಣ್ಣೆ ಹಾಕಿಸುವುದು. ಹೀಗೆ ರಂಗಸ್ವಾಮಿಯ ರೇಡು ಪಡೆ ಸೇರಿಕೊಂಡವರೇ ಚೀರನಹಳ್ಳಿ ಶಂಕ್ರ, ಕಲ್ಲಳ್ಳಿ ಸ್ವಾಮಿ, ಅಶೋಕ್ ಪೈ ಮತ್ತು ಜಡೇಜಾ ರವಿ!

ಆ ಹೊತ್ತಿಗೆ ಸುಂದ್ರ ಎಂಬ ಪುಟ್ಟ ಗಾತ್ರದ ರೌಡಿಯೊಬ್ಬ ಆನೇಕೆರೆ ಬೀದಿಯಲ್ಲಿ ಬಡ್ಡಿ ದಂಧೆ ಮಾಡಿಕೊಂಡಿದ್ದ. ಅದೇ ಹೊತ್ತಿಗೆ ಮತ್ತೊಬ್ಬ ರೌಡಿ ಅಣ್ಣಯ್ಯನನ್ನು ರಂಗಸ್ವಾಮಿ ಸಾಕಿಕೊಂಡಿದ್ದ. ಆದೊಮ್ಮೆ ಸುಂದ್ರ ತನ್ನಿಂದ ಸಾಲ ಪಡೆದಿದ್ದ ಹೆಂಗಸೊಬ್ಬಳನ್ನು ನಡುರಸ್ತೆಯಲ್ಲೇ ಅವಮಾನಿಸಿಬಿಟ್ಟ. ಈಕೆ ರೌಡಿ ಅಣ್ಣಯ್ಯನ ಸಂಬಂಧಿ ಮತ್ತು ಜಾತಿಯಲ್ಲಿ ಗಾಣಿಗರಾಕೆ. ಈ ಕಾರಣಕ್ಕೇ ರೊಚ್ಚಿಗೆದ್ದ ಅಣ್ಣಯ್ಯ ಸುಂದ್ರನನ್ನು ಕೊಂದುಬಿಟ್ಟ.

ಯಾರಿಗೂ ಗೊತ್ತಿಲ್ಲದ ಸಂಗತಿಯೇನೆಂದರೆ ಸುಂದ್ರನ ಕೊಲೆಗೆ ಫೈನಾನ್ಸ್ ಮಾಡಿದ್ದೇ ಲಿಕ್ಕರ್ ರಂಗಸ್ವಾಮಿ!

ಮುಂದೆ ಜಡೇಡಾ ರವಿ ತನ್ನ ಮಾವ ಸುಂದ್ರನ ಹತ್ಯೆಗೆ ಪ್ರತಿಕಾರಕ್ಕೆ ನಿಂತು ಅಶೋಕ್ ಪೈ, ಕಲ್ಲಳ್ಳಿ ಸ್ವಾಮಿ, ಚೀರನಹಳ್ಳಿ ಶಂಕ್ರ ಮುಂತಾದವರೆಲ್ಲ ಸೇರಿ ಅಣ್ಣಯ್ಯನನ್ನು ಕೊಂದಾಗಲೂ ಇದೇ ಲಿಕ್ಕರ್ ರಂಗಸ್ವಾಮಿಯೇ ದುಡ್ಡೂಕಾಸಿನ ನೆರವು ಕೊಟ್ಟ!

ಮುಂದೆ ಇದೇ ರೌಡಿ ಪಡೆಯನ್ನು ಛೂಬಿಟ್ಟು ಸಾರಾಯಿ ವಿರೋಧಿಸಿ ನೀರಾ ಚಳವಳಿ ಮಾಡುತ್ತಿದ್ದ ರೈತರ ಮೇಲೆ ರಂಗಸ್ವಾಮಿ ದಾಳಿ ನಡೆಸಿದ. ಮಂಡ್ಯ ಮಾತ್ರವಲ್ಲದೇ ಉತ್ತರ ಕರ್ನಾಟಕದ ಬೇರೆಬೇರೆ ಭಾಗಗಳಲ್ಲಿ ಸಾರಾಯಿ ಗುತ್ತಿಗೆ ಹಿಡಿಯುವ ರಂಗಸ್ವಾಮಿಗೆ ತನ್ನ ಸಾರಾಯಿ ಸಾಮ್ರಾಜ್ಯದ ರಕ್ಷಣೆಗೆ ರೌಡಿಗಳು ಬೇಕೇಬೇಕು. ಬೇರೆಲ್ಲ ಲಿಕ್ಕರ್ ಗುತ್ತಿಗೆದಾರರು ಈ ರೀತಿ ರೌಡಿಗಳನ್ನು ಸಾಕಿಕೊಳ್ಳುತ್ತಾರಾದರೂ ಅದನ್ನು ದಂಧೆಗಷ್ಟೇ ಸೀಮಿತ ಗೊಳಿಸಿರುತ್ತಾರೆ. ಆದರೆ ರಂಗಸ್ವಾಮಿ ಮಹಾನ್ ಕಾಮುಕ. ಆತನ ಪ್ರೇಯಸಿಯರು, ಸರಬರಾಜುದಾರರು, ಆ ಸಂಬಂಧದ ಉಸಾಬರಿಗಳನ್ನೆಲ್ಲ ನಿಭಾಯಿಸಲು ತಾನೇ ರೌಡಿಯ ಫೋಜು ಕೊಡುತ್ತಾನೆ.

ಅಣ್ಣಯ್ಯನ ಹತ್ಯೆಯ ನಂತರ ಆತನ ಬಲಗೈ ಬಂಟನಂತಿದ್ದವನು ಚೀರನಹಳ್ಳಿ ಶಂಕ್ರ. ಆಗಿನ್ನೂ ಎಸ್ಪೇ ರಾಮಣ್ಣನೇ ಮಂಡ್ಯಕ್ಕೆ ಡಾನ್ ಆಗಿದ್ದ. ಫೈನಾನ್ಸ್ ವ್ಯವಹಾರವೊಂದರಲ್ಲಿ ರಾಮಣ್ಣ ರಂಗಸ್ವಾಮಿಗೇ ಆವಾಜ್ ಹಾಕಿದ್ದ. ಅದನ್ನು ಮನಸ್ಸಲ್ಲೇ ಇಟ್ಟುಕೊಂಡಿದ್ದ ರಂಗಸ್ವಾಮಿ ಒಳಗೊಳಗೇ ಶಂಕ್ರನನ್ನು ಎತ್ತಿಕಟ್ಟಿದ್ದೇ ರಾಮಣ್ಣನ ಹತ್ಯೆಗೆ ಮಸಲತ್ತು ಮಾಡುತ್ತಲೇ ಇದ್ದ.

ಏನಾಗಬಾರದಿತ್ತೋ ಅದು ನಡೆದೇ ಹೋಯಿತು. ಶಂಕ್ರ ತನ್ನ ತಮ್ಮ ಶಿವರಾಮನನ್ನು ಬಿಟ್ಟು ರಾಮಣ್ಣನನ್ನು ಕೊಲ್ಲಿಸಿಬಿಟ್ಟ. ಇದು ರಾಮಣ್ಣನ ಶಿಷ್ಯ ಜಡೇಜನಿಗೆ ಗೊತ್ತಾಗುವುದು ಎಷ್ಟು ಹೊತ್ತು?

ಈ ಬಾರಿ ರಂಗಸ್ವಾಮಿ ಬೇರೆಯದೇ ತಲೆ ಓಡಿಸಿದ. ಜಡೇಜನ ಕಾಲಿಗೆ ಬಿದ್ದು ದೊಡ್ಡ ಮೊತ್ತದ ಕಪ್ಪ ಸಲ್ಲಿಸಿ ಚೀರನಹಳ್ಳಿ ಶಂಕ್ರನ ಹತ್ಯೆಗೆ ಕಾರಣನಾದ. ಮುಂದೆ ಶಂಕ್ರನ ತಮ್ಮ ಶಿವರಾಮನನ್ನೂ ಜಡೇಜಾ ರವಿ ಕೊಲ್ಲಿಸಿಬಿಟ್ಟ. ಜಡೇಜ ಕಟ್ಟಿಸಿದ ಬಂಗಲೆಗೂ ರಂಗಸ್ವಾಮಿಯ ಲಿಕ್ಕರ್ ದುಡ್ಡು ಹರಿದಿತ್ತು. ಯಾವತ್ತು ಜಡೇಜನಿಗೆ ವಿಪರೀತ ಮಣೆ ಹಾಕುವುದು ಗೊತ್ತಾಯಿತೋ ಆತನಕ ರಂಗಸ್ವಾಮಿಗೆ ಸಾಥ್ ಕೊಡುತ್ತಿದ್ದ ಅಶೋಕ್ ಪೈ ಕ್ರಮೇಣ ದೂರ ಸರಿಯತೊಡಗಿದ.

ಹೇಳಿಕೇಳಿ ಅಶೋಕ್ ಪೈ ಅಂಥಾ ದುಷ್ಟನಲ್ಲ. ತೀರ ವೇಶ್ಯಾವಾಟಿಕೆ ನಡೆಸಿ ಲಾಭ ಮಾಡಿಕೊಳ್ಳುವ ಜಾಯಮಾನ ಆತನದಲ್ಲ. ಆತನ ತಂದೆ ಕಲ್ಲಳ್ಳಿಗೆ ಪೈಲ್ವಾನನಾಗಿದ್ದರಿಂದ ಅಶೋಕನಿಗೆ ಪೈ ಎಂಬ ಅಡ್ಡ ಹೆಸರು ಬಂದಿತ್ತು. ತನ್ನ ತಂದೆಗೆ ಕಾಟ ಕೊಡುತ್ತಿದ್ದ ಗಿನ್ನಿ ಎಂಬಾತನನ್ನು ಕೊಂದು ಜೈಲಿಗೆ ಹೋಗಿದ್ದ ಪೈ ಅಣ್ಣಯ್ಯನ ಕೊಲೆಯ ನಂತರ ತನ್ನ ಪಾಡಿಗೆ ತಾನಿದ್ದುಬಿಟ್ಟಿದ್ದ. ಇಂಥವನನ್ನು ತನ್ನ ಲಿಕ್ಕರ್ ಗ್ಯಾಂಗಿಗೆ ಸೇರಿಸಿಕೊಂಡು ಲಾಭ ಮಾಡಿಕೊಂಡ ರಂಗಸ್ವಾಮಿಗೆ ಆತನನ್ನು ಮುಂದಿಟ್ಟುಕೊಂಡು ಕಲ್ಲಳ್ಳಿ ವಾರ್ಡಿನಿಂದ ತನ್ನ ಮಗನನ್ನು ನಿಲ್ಲಿಸಿ ಕೌನ್ಸಿಲರ್ ಮಾಡುವ ದುರಾಶೆ ಬೇರೆ ಹೆಡೆಯೆತ್ತಿತ್ತು.


ಈ ಹೊತ್ತಿಗಾಗಲೇ ಇನ್ನೊಬ್ಬ ಮಗ ಮಹೇಶನನ್ನು ಬೂದನೂರು ಜಿ.ಪಂ. ಕ್ಷೇತ್ರದಿಂದ ಗೆಲ್ಲಿಸಿದ್ದ ರಂಗಸ್ವಾಮಿಗೆ ಕಲ್ಲಳ್ಳಿಯಿಂದ ಅಶೋಕನೇ ಜೆಡಿಎಸ್ ಅಭ್ಯರ್ಥಿಯಾಗುವ ಸುದ್ದಿ ಕೇಳಿ ಹೊಟ್ಟೆಗೆ ಖಾರ ಕಿವುಚಿದಂತಾಗಿದೆ. ಕ್ರಮೇಣ ಜಡೇಜ ರವಿಯನ್ನು ಪೈ ವಿರುದ್ಧ ಎತ್ತಿ ಕಟ್ಟಿದ್ದಾನೆ. ಅದೇ ಹೊತ್ತಿಗೆ ಬಡ್ಡಿ ಪಾಪಮ್ಮನ ಕೊಲೆಯಾದರೆ ಆ ಕೇಸಿಗೆ ವಿನಾಕಾರಣ ಪೈ ಹೆಸರನ್ನು ಸಿಲುಕಿಸಿದ್ದಾನೆ. ಬೆನ್ನಲ್ಲೇ ಜಡೇಜನ ಬಂಟ ಬಂಗಾರಪ್ಪನನ್ನು ಕಳುಹಿಸಿ ಪೈ ಮುಗಿಸುವುದಕ್ಕೂ ಮಸಲತ್ತು ಮಾಡಿದ್ದಾನೆ. ಎಷ್ಟೆಂದರೂ ಪೈ ಪಳಗಿದ ಪಾತಕಿ. ತನ್ನ ಹತ್ಯೆಗೆಂದು ಬಂಗಾರಪ್ಪನ ಗ್ಯಾಂಗ್ ಬರುತ್ತಿರುವುದನ್ನು ಮೊದಲೇ ಮಾಹಿತಿ ಪಡೆದು ಪೊಲೀಸರಿಗೆ ಸುದ್ದಿ ಮುಟ್ಟಿಸಿದ್ದಾನೆ. ಕೊಲ್ಲಲು ಬಂದ ಜಡೇಜನ ಬಂಟರು ಜೈಲು ಪಾಲಾಗಿದ್ದಾರೆ.

ಯಾವತ್ತು ತನ್ನನ್ನು ಮುಗಿಸುವುದಕ್ಕೆ ರಂಗಸ್ವಾಮಿ ಮತ್ತು ಜಡೇಜ ಪ್ಲಾನ್ ಮಾಡುತ್ತಿರುವುದು ಗೊತ್ತಾಯಿತೋ ಅಶೋಕ್ ಪೈ ದೊಡ್ಡ ಶಿಕಾರಿಗೆ ಅಣಿಯಾಗಿಯೇ ಮಂಡ್ಯ ಬಿಟ್ಟಿದ್ದಾನೆ. ಕೊನೆಗೂ ಜಡೇಜನನ್ನು ಕೊಂದು ತನ್ನ ತಾಕತ್ತೇನೆಂಬುದನ್ನೂ ತೋರಿಸಿದ್ದಾನೆ. ಆದರೆ ಇದ್ಯಾವುದಕ್ಕೂ ಸಂಬಂಧವಿಲ್ಲದ ಲಿಕ್ಕರ್ ನಾಗಣ್ಣನನ್ನು ಮುಗಿಸಲು ರಂಗಸ್ವಾಮಿ ಸ್ಕೆಚ್ ಹಾಕುತ್ತಾನೆಂದರೆ, ಇಷ್ಟಾಗಿಯೂ ಪೊಲೀಸರು ಆತನನ್ನು ಮುಟ್ಟುತ್ತಿಲ್ಲ ಎಂದರೆ ಏನರ್ಥ? ತಾನು ಬದುಕುಳಿಯಲು ಆತ ಏನು ಮಾಡುವುದಕ್ಕೂ ಹೇಸುವವನಲ್ಲ. ಈಗ ಜಡೇಜನನ್ನು ಕೊಂದ ಪೈಗೆ 50 ಲಕ್ಷ ರೂಪಾಯಿ ಆಫರ್ ಕೊಟ್ಟಿದ್ದಾನಂತೆ!

ಲಿಕ್ಕರ್ ರಂಗಸ್ವಾಮಿ ನಿಕಾಲಿಯಾಗದೇ ಮಂಡ್ಯಕ್ಕೆ ನೆಮ್ಮದಿಯಿಲ್ಲ. ಒಂದೋ ಆತನನ್ನು ಎನ್‌ಕೌಂಟರ್ ಮಾಡಬೇಕು. ಅಥವಾ ಜೈಲಿಗೆ ಹಾಕಬೇಕು.

(ಹಿಂದಿನ ಪುಟದಿಂದ)

ವೇಶ್ಯಾವಾಟಿಕೆ ನಡೆಸುತ್ತಿದ್ದಾನೆಂಬುದು ಗೊತ್ತಾಯಿತೋ ಮಂಡ್ಯಕ್ಕೆ ಮಂಡ್ಯವೇ ಆತನನ್ನು ಅಸಹ್ಯದಿಂದ, ತಾತ್ಸಾರದಿಂದ ನೋಡಲಾರಂಭಿಸಿತು. ಇದರ ಪರಮಾವಧಿಯೆಂಬಂತೆ ಪೇಟೆ ಬೀದಿಯ ಮಾರ್ವಾಡಿ ಹೆಣ್ಣುಮಕ್ಕಳ ಪಾಲಿಗೆ ಜಡೇಜನ ಗ್ಯಾಂಗ್ ಅಕ್ಷರಶಃ ಕೀಚಕರಂತೆ ಹಾವಳಿಗಿಳಿಯಿತು. ರಾತ್ರಿ ಯಾದರೆ ಸಾಕು, ಜೈನ್ ಸ್ಟ್ರೀಟ್‌ನಲ್ಲಿ ಅಡ್ಡೆ ಹಾಕುತ್ತಿದ್ದ ಆತನ ಹುಡುಗರು ಒಂದಿಬ್ಬರು ಮಾರ್ವಾಡಿ ಹೆಣ್ಣುಮಕ್ಕಳನ್ನು ಹೊತ್ತೊಯ್ದು ಮುಕ್ಕಿಬಿಟ್ಟರು.



ಮಾರುತಿ

ಇದು ಇಡೀ ಮಂಡ್ಯಕ್ಕೇ ಪುಕಾರಾಯಿತಾದರೂ ಮರ್ಯಾದೆಗೆ ಅಂಜಿದ ಮಾರ್ವಾಡಿಗಳ್ಯಾರೂ ಪೊಲೀಸ್ ಠಾಣೆಗೆ ಬಂದು ದೂರು ಕೊಡಲಿಲ್ಲ. ಡಿವೈಎಸ್‌ಪಿ ಲಾರೆನ್ಸ್ ಮತ್ತು ನಿಷ್ಠುರಿ ಇನ್ಸ್‌ಪೆಕ್ಟರ್ ನಾಗೇಶ್‌ಕುಮಾರ್ ಇಬ್ಬರೂ ಮಂಡ್ಯದಿಂದ ಎತ್ತಂಗಡಿಯಾಗಿದ್ದು ಜಡೇಜನ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಗಿತ್ತು, ನಾಗೇಶ್‌ಕುಮಾರ್ ಜಾಗಕ್ಕೆ ಬಂದ ಸರ್ಕಲ್ ಇನ್ಸ್‌ಪೆಕ್ಟರ್ ಜೈರಾಮ್‌ರನ್ನು ತನ್ನ ಮನೆಗೇ ಕರೆದೊಯ್ದು ನಾಟಿಕೋಳಿ ಸಾರು ಮಾಡಿ ಬಡಿಸುವಷ್ಟರ ಮಟ್ಟಿಗೆ ಜಡೇಜ ಬೆಳೆದುಬಿಟ್ಟಿದ್ದ!

ಇದಿಷ್ಟೇ ಆಗಿದ್ದರೆ ಜಡೇಜನನ್ನು ಹೇಗೋ ಬದುಕಲಿ ಬಿಡಿ ಎಂದು ಮಂಡ್ಯದ ಜನ ಸುಮ್ಮನಾಗುತ್ತಿದ್ದರು. ಆದರೆ ಜಡೇಜನ ದಾರ್ಷ್ಟ್ಯ ಯಾವ ವೇಗದಲ್ಲಿತ್ತೆಂದರೆ ಇಸ್ಪೀಟು ದಂಧೆ, ಕ್ರಿಕೆಟ್ ಬೆಟ್ಟಿಂಗ್, ಮಟ್ಕಾ ಎಲ್ಲಕ್ಕೂ ಕೈಯಿಟ್ಟು ಹೊಸ ಸ್ಕಾರ್ಪಿಯೋ ಗಾಡಿಯೊಂದನ್ನು ಖರೀದಿಸಿ ಶಿವಳ್ಳಿಯ ರೈಸ್‌ಮಿಲ್, ಕಾಳೇನಹಳ್ಳಿ ಗೆಸ್ಟ್‌ಹೌಸ್‌ಗಳಲ್ಲಿ ಅಡ್ಡೆ ಹಾಕುತ್ತಿದ್ದ.

ಮಂಡ್ಯ ಸುತ್ತಮುತ್ತಲ ಹಳ್ಳಿಗಳಲ್ಲಿ ಜಡೇಜನ ಕ್ರೇಜ್ ಎಷ್ಟು ತೀವ್ರವಾಗಿತ್ತೆಂದರೆ ಆತ ಯಾವುದೇ ಹಳ್ಳಿಗೆ ಕಾಲಿಟ್ಟರೂ ಬಡ್ಡಿ ದಂಧೆ ನಡೆಸುತ್ತಿದ್ದ ಆ ಊರಿನ ಪುಂಡರು ಆತನನ್ನು ಗೂಡ್ಸ್ ಗಾಡಿಯಲ್ಲಿ ಹಾರಹಾಕಿ ಮೆರವಣಿಗೆ ಮಾಡುತ್ತಿದ್ದರು!


ಅಂಬರೀಷ್ ಬಿಟ್ಟರೆ ಮಂಡ್ಯದ ಯಾವೊಬ್ಬ ರಾಜಕಾರಣಿಗೂ ಇಲ್ಲದಷ್ಟು ಜನಜಂಗುಳಿ ಆತನ ಸುತ್ತ ಸೇರುತ್ತಿತ್ತು. ಬರುವ ವಿಧಾನಸಭಾ ಚುನಾವಣೆಯಲ್ಲಿ ಮಂಡ್ಯ ಅಥವಾ ಕೆರಗೋಡು ಕ್ಷೇತ್ರಗಳ ಪೈಕಿ ಯಾವುದರಲ್ಲಿ ನಿಂತಿದ್ದರೂ ಜಡೇಜ ಗೆದ್ದು ಬಿಡುತ್ತಿದ್ದ. ಅಕ್ಕಪಕ್ಕದ ಕೆ.ಆರ್. ಪೇಟೆ, ನಾಗಮಂಗಲ, ಮದ್ದೂರು, ಶ್ರೀರಂಗಪಟ್ಟಣಗಳಲ್ಲಿ ಆತನಿಗೆ ವೈಟ್ ಪೆಟ್ರೋಲ್, ಮಟ್ಕಾ, ಬಡ್ಡಿ ದಂಧೆಗಳಿಂದ ವಸೂಲಿ ಮಾಡಿಕೊಡುವ ಹುಡುಗರ ಹಿಂಡೇ ಸೃಷ್ಟಿಯಾಯಿತು. ಇದರಿಂದಾಗಿ ಮಂಡ್ಯದ ಎಮ್ಮೆಲ್ಲೇ ಶ್ರೀನಿವಾಸ್‌ಗೆ ಹುಟ್ಟುತ್ತಿದ್ದ ಆಮದನಿಯ ಒಂದು ಪಾಲು ಜಡೇಜನತ್ತ ಹರಿಯಲಾರಂಭಿಸಿತು.

ಸಹಜವಾಗೇ ಜಡೇಜ ಶಾಸಕ ಶ್ರೀನಿವಾಸ್ ಕೆಂಗಣ್ಣಿಗೆ ಗುರಿಯಾದ. ಮಂಡ್ಯದ ಮತ್ತೊಬ್ಬ ಗಾಡ್‌ಫಾದರ್ ಜಫ್ರುಲ್ಲಾಖಾನ್‌ನನ್ನು ಪೀಡಿಸಿ ಪದೇಪದೇ ದುಡ್ಡು ಕಿತ್ತ, ಮಂಡ್ಯ ಜಿಲ್ಲಾ ಯುವ ಕಾಂಗ್ರೆಸ್ಸಿಗೆ ತಾನೇ ಅಧ್ಯಕ್ಷನಾಗಲು ಹೋಗಿ ವಕೀಲ ಸಚ್ಚಾನಂದ ಮತ್ತು ಆತ್ಮಾನಂದರ ವಿರೋಧ ಕಟ್ಟಿಕೊಂಡ. ಆತನಕ ಮಂಡ್ಯ ಜಿಲ್ಲೆಯಾದ್ಯಂತ ನಡೆಯುತ್ತಿದ್ದ ವೈಟ್ ಪೆಟ್ರೋಲ್ ದಂಧೆಗೆ ಅಧಿಪತಿಯಾಗಿದ್ದ ರೇಡ್ ನಾಗನನ್ನು ಹೆದರಿಸಿ ಇಡೀ ದಂಧೆ ಯನ್ನು ತನ್ನ ಕಂಟ್ರೋಲ್‌ಗೆ ಪಡಕೊಂಡ. ಖಾಸಗಿ ಬಸ್‌ಸ್ಟಾಂಡಿನ ಸೈಕಲ್ ಸ್ಟಾಂಡ್, ಕೆಎಸ್ಸಾರ್ಟಿಸಿ ಸೈಕಲ್ ಸ್ಟಾಂಡ್, ಖಾಸಗಿ ಬಸ್ ಮಾಫಿಯಾ ಇತ್ಯಾದಿಯಾಗಿ ಮಂಡ್ಯದ ಯಾವ ಏರಿಯಾಕ್ಕೆ ಯಾರು, ಯಾವ ದಿನಪತ್ರಿಕೆಯನ್ನು ಹಾಕಬೇಕೆಂಬು ದರವರೆಗೆ ಜಡೇಜನದೇ ಪರ್ಯಾಯ ಸರ್ಕಾರವಾಗಿತ್ತು.



ಕಲ್ಲಹಳ್ಳಿ ಸ್ವಾಮಿ

ಇಂಥ ಹಮ್ಮಿಗೆ ಬಿದ್ದೇ ಜಡೇಜ ತೀರ ಅಪಾಯದ ಕೆಲಸವೊಂದಕ್ಕೆ ಕೈಯಿಟ್ಟ. ಅದು ಬಡ್ಡಿ ಪಾಪಮ್ಮನ ಕೊಲೆ ಕೇಸಿನಲ್ಲಿ ಹಳೇ ಪಂಟರ್ ಅಶೋಕ್ ಪೈಯನ್ನು ಸಿಕ್ಕಿಸಿದ್ದು. ಜಡೇಜನಿಗಿಂತಲೂ ಆತನ ಗಾಡ್‌ಫಾದರ್ ಲಿಕ್ಕರ್ ರಂಗಸ್ವಾಮಿಗೆ ಪೈಯನ್ನು ಹಣಿಯಬೇಕಿತ್ತು. ಮಂಡ್ಯ ನಗರಸಭೆ ಚುನಾವಣೆಯಲ್ಲಿ ಕಲ್ಲಳ್ಳಿಯಿಂದ ತನ್ನ ಮಗನನ್ನು ನಿಲ್ಲಿಸಿ ಗೆಲ್ಲಿಸುವುದು ರಂಗಸ್ವಾಮಿಯ ಉದ್ದೇಶವಾಗಿತ್ತು.



ಜಡೇಜಾ ಶಿಷ್ಯ ದತ್ತ

ಆದರೆ ಕಲ್ಲಳ್ಳಿಯ ಹಳೇ ಪಂಟರ್ ಅಶೋಕ್ ಪೈ ಈ ಹೊತ್ತಿಗಾಗಲೇ ಜೆಡಿಎಸ್‌ನಿಂದ ಅಲ್ಲಿಗೆ ಅಭ್ಯರ್ಥಿಯಾಗುವ ಸಿದ್ಧತೆ ನಡೆಸಿಬಿಟ್ಟಿದ್ದ.

ಬಹುಶಃ ಅಶೋಕ್ ಪೈಗೆ ಚುನಾವಣೆಗೆ ನಿಲ್ಲುವುದು ಸಾಧ್ಯವಾಗಿಬಿಟ್ಟಿದ್ದರೆ ಇವತ್ತು ಜಡೇಜಾ ರವಿ ಬದುಕಿರುತ್ತಿದ್ದ!

ಬಡ್ಡಿ ಪಾಪಮ್ಮ ಲಿಕ್ಕರ್ ಖದೀಮ ರಂಗಸ್ವಾಮಿಯ ಅಸಂಖ್ಯಾತ ಸಖಿಯರ ಪೈಕಿ ಒಬ್ಬಳು. ಆಕೆಯ ಅಳಿಯ ಚಂದ್ರನೇ ರೊಚ್ಚಿಗೆದ್ದು ಆಕೆಯನ್ನು ಕೊಂದು ಹಾಕಿದ್ದ. ಹಾಗೇ ಪಾಪಮ್ಮನನ್ನು ಕೊಂದು ತಲೆಮರೆಸಿಕೊಂಡಿದ್ದ ಅಳಿಯನನ್ನು ಪೊಲೀಸರಿಗೆ ಸರೆಂಡರ್ ಮಾಡಿಸಿ ಮಧ್ಯಸ್ಥಿಕೆ ಮಾಡಿಸುವುದು ಪೈ ಉದ್ದೇಶವಾಗಿತ್ತು. ಆದರೆ ಲಿಕ್ಕರ್ ಕಿರಾತಕ ರಂಗಸ್ವಾಮಿ ಪೊಲೀಸರನ್ನು ಛೂಬಿಟ್ಟು ಕಲ್ಲಳ್ಳಿ ಪೈನನ್ನೇ ಕೊಲೆ ಕೇಸಿಗೆ ಫಿಟ್ ಮಾಡಿಸಿಬಿಟ್ಟ. ಆತ ಕೌನ್ಸಿಲರ್ ಆಗುವುದು ತಪ್ಪಿ ಹೋದದ್ದು ಒಂದೆಡೆಯಾದರೆ ಮತ್ತೊಂದೆಡೆ ಪೊಲೀಸರಿಂದ ತಲೆಮರೆಸಿಕೊಂಡಿರುವುದೇ ಆತನಿಗೆ ತಾಪತ್ರಯ ವಾಯಿತು.

ಅಲ್ಲಿಗೆ ಪೈ ಕೂಡ ನಿರ್ಧರಿಸಿ ಬಿಟ್ಟ. ಯಾರೆಲ್ಲ ಜಡೇಜನಿಂದ ಕಾಟಕ್ಕೀಡಾಗಿದ್ದರೋ ಅಂಥ ಒಬ್ಬೊಬ್ಬರನ್ನೇ ಭೂಗತನಾಗಿದ್ದುಕೊಂಡೇ ಸಂಪರ್ಕಿಸತೊಡಗಿದ. ಇದಕ್ಕೆ ಜೊತೆಯಾದವನು ಹತ ಚೀರನಹಳ್ಳಿ ಶಂಕ್ರನ ಅಕ್ಕನ ಮಗ ಚೇತನ್. ಬಹುಶಃ ಬಡ್ಡಿ ಪಾಪಮ್ಮನ ಕೊಲೆಯ ನಂತರದಿಂದಲೇ ಪೈ ಮಂಡ್ಯ ತೊರೆದಿದ್ದಾನೆ. ಜಡೇಜನ ಒಬ್ಬೊಬ್ಬರೇ ವೈರಿಗಳನ್ನು ಹಿಡಿದು ದೊಡ್ಡ ಮೊತ್ತದ ನಿಧಿ ಸಂಗ್ರಹಿಸಿದ್ದಾನೆ. ಸೈಕಲ್ ರವಿ ಜೊತೆ ಜಡೇಜಾ ಬೆಂಗಳೂರಿನಲ್ಲಿ ಸುತ್ತಾಡಿಕೊಂಡಿದ್ದನ್ನು ಕೊರಂಗು ಕಿವಿಗೆ ಹಾಕಿದ್ದಾನೆ. ಮೊದಲೇ ಸೈಕಲ್ ರವಿಗೂ ಕೊರಂಗು ಬಂಟ. ಕತ್ತಿಗುಪ್ಪೆ ಲಿಂಗನಿಗೂ ನಿಗಿನಿಗಿಸುವ ಜಿದ್ದಾಜಿದ್ದಿಯಿತ್ತಲ್ಲ-

ಅದೇ ಅಂತಿಮವಾಗಿ ಜಡೇಜಾ ರವಿಗೆ ಮುಳುವಾಗಿದೆ!

ಹತ ಜಡೇಜನ ಪತ್ನಿ ಪೂರ್ಣಿಮಾಳ ಆಕ್ರಂದನ ಎಂಥವರನ್ನೂ ತಲ್ಲಣಿಸುತ್ತದೆ ನಿಜ, ಆದರೆ ಮಂಡ್ಯದ ಜನಕ್ಕೆ?

ರವಿಯ ಅಂತ್ಯಕ್ಕೆ ಅಳುವವರೇ ಇಲ್ಲ!

ಪ್ರೀತಿ ಎಂದರೆ ಚು(ಮು)ರುಕ ಗಿಡ ಮತ್ತು ಕೆಲವೈದಿಲ ಗಿಡಗಳೆರಡರ ಮೇಲೂ ತಾರತಮ್ಯವಿಲ್ಲದೇ ಬೀಳುವ ಮಂಜಿನ ಹನಿಯಿದ್ದಂತೆ -ಸ್ವೀಡಿಷ್ ಗಾದೆ

[illegible] ಚುನಾವಣಾ ದಿನಾಂಕ ಘೋಷಣೆಯಾಗುವ [illegible] ಹುಟ್ಟುವ ಮೊದಲೇ ಕುಲಾವಿ ಹೊಲಿಸಲು ಹೊರಟಿದ್ದ ಯಡ್ಡಿಗೂ ಹಾಸನದಲ್ಲಿ ನಡೆದ ಸಮಾವೇಶ ಆಘಾತ ತಂದಿದೆ. ಹಾಸನದ ಸಮಾವೇಶದಲ್ಲಿ ಬಿಜೆಪಿಗಳು ಮಾಡಿದ ಸಮಯಸಾಧಕ ತಂತ್ರಗಳಂತೂ ಜಿಲ್ಲೆಯಲ್ಲಿ ನೆಲೆಯಿಲ್ಲದ ಬಿಜೆಪಿಗೆ ತಳವೂರಲು ಜಾಗ ಹೊಂದಿಸಲು ಹೊರಟಿದ್ದ ಮಾಜಿ ಸಚಿವ ಕೆ. ಎಚ್. ಹನುಮೇಗೌಡರ ಚಿತ್ತವನ್ನು ನೆತ್ತಿಗೇರಿಸಿದೆ. ಇದೆಲ್ಲವನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವ ಜೆಡಿಎಸ್ ಮತ್ತು ಕಾಂಗ್ರೆಸ್‌ಗಳು ಯಾರನ್ನೂ ದೂಷಿಸದೆ ಒಳತಂತ್ರವನ್ನು ಅನುಸರಿಸುತ್ತಿವೆ.


ಏರುತ್ತಿರುವ ಚುನಾವಣಾ ಬಿಸಿ



ಹನುಮೇಗೌಡ



ಜೆಪಿಎನ್ ಜಯಣ್ಣ



ಸುರೇಶ್



ಪರಮೇಶ್ವರಪ್ಪ

ಪ್ರತಿ ಚುನಾವಣೆಯ ಮುಂಚಿನ ಸಾಮಾನ್ಯ ವಿದ್ಯಮಾನ ಎಂಬಂತೆ ಈ ಬಾರಿಯೂ ರಾಜಕೀಯ ಧ್ರುವೀಕರಣ (ಪಕ್ಷದಿಂದ ಪಕ್ಷಕ್ಕೆ ಹಾರುವ ಮಂಗನಾಟ ಎಂದರೇನೇ ಸೂಕ್ತ) ಬಿರುಸುಗೊಂಡಿದೆ. ಚುನಾವಣೆ ಘೋಷಣೆಯಾದ ಬಳಿಕ ಕಾಂಗ್ರೆಸ್ ಧುರೀಣ, ಮಾಜಿ ನಗರಸಭಾ ಅಧ್ಯಕ್ಷ ಜೆ.ಟಿ. ಕುಮಾರ್ ತಮ್ಮನ್ನು ಪಕ್ಷದಲ್ಲಿ ಕಡೆಗಣಿಸಲಾಗುತ್ತಿದೆ ಎಂದು ಆರೋಪಿಸಿ ಮೊನ್ನೆ ನಡೆದ ಬಿಜೆಪಿಗಳ ಜನಜಾಗೃತಿ ಯಾತ್ರೆಯಲ್ಲಿ ಯಡ್ಡಿ ಮುಂದೆ ಸಾಷ್ಟಾಂಗ ನಮಸ್ಕಾರ ಮಾಡಿ ಬಿಜೆಪಿಗೆ ಹಾರಿದರು. ಇನ್ನು ಜಿಲ್ಲೆಯ ಲಿಂಗಾಯತ ಕೋಮಿನ ಪ್ರಭಾವಿ ಯುವ ಮುಖಂಡರಲ್ಲೊಬ್ಬರಾದ ಜೆಡಿಎಸ್‌ನ ವಿಧಾನ ಪರಿಷತ್ ಸದಸ್ಯ ಬಿ.ಆರ್. ಗುರುದೇವ್ ಜೆಡಿಎಸ್ ತೊರೆಯಲು ಸಜ್ಜಾಗಿದ್ದಾರೆ. ಇದಕ್ಕೆ ಪೂರ್ವಭಾವಿಯಾಗಿ ಈಗಾಗಲೇ ತಮ್ಮ ಹೆಂಡತಿ ಜ್ಯೋತಿ ಗುರುದೇವ್ ಅವರನ್ನು ಕಾಂಗ್ರೆಸ್ ಮಡಿಲಿಗೆ ಒಪ್ಪಿಸಿದ್ದಾರೆ.

[illegible] ಜೆಡಿಎಸ್

ರಾಜ್ಯದ ಲಿಂಗಾಯತರಲ್ಲಿ ಜೆಡಿಎಸ್ ವಿರುದ್ಧ ಅಸಮಾಧಾನ ಹೊಗೆಯಾಡುತ್ತಿರುವಾಗಲೇ ಹಾಸನದಲ್ಲಿ ಅದನ್ನು ಬೆಂಕಿಯನ್ನಾಗಿ ಪರಿವರ್ತಿಸುವ ಕೆಲಸವನ್ನು ರೇವಣ್ಣ ಮಾಡುತ್ತಿದ್ದಾರೆ. ಲಿಂಗಾಯತರ ಕೈಯಲ್ಲಿದ್ದ ಜೆಡಿಎಸ್ ಜಿಲ್ಲಾಧ್ಯಕ್ಷರ ಹುದ್ದೆಯನ್ನು ರೇವಣ್ಣನ ಬಕೆಟ್ ಮೇಸ್ತ್ರಿ ಎಂದೇ ಪ್ರಸಿದ್ಧವಾಗಿರುವ ಮಾಜಿ ರಾಜ್ಯಸಭಾ ಸದಸ್ಯ ಎಚ್.ಕೆ. ಜವರೇಗೌಡರಿಗೆ ರವಾನಿಸಲಾಗಿದೆ. ಈ ಹಿಂದೆ ಲಿಂಗಾಯತರ ಅನುಭವಿ ವ್ಯಕ್ತಿ ರಾಜಶೇಖರ್ ಅವರಿಗೆ ದೊರೆಯಬೇಕಿದ್ದ ಹಾಸನ ಜಿಲ್ಲಾ ಪಂಚಾಯತಿ ಅಧ್ಯಕ್ಷ ಸ್ಥಾನವನ್ನು ರೇವಣ್ಣ ತಮ್ಮ ಸಂಬಂಧಿ ಬಾಲಕೃಷ್ಣ ಅವರಿಗೆ ನೀಡುವ ಮೂಲಕ ಲಿಂಗಾಯತರ ಕೆಂಗಣ್ಣಿಗೆ ಗುರಿಯಾಗಿದ್ದರು. ಈಗ ಮತ್ತದೇ ತಪ್ಪನ್ನು ಮಾಡಿದ್ದಾರೆ.

ಅರಸಿಕೆರೆಯಲ್ಲಿ ಹಸ್ತದ್ದೇ ದರ್ಬಾರ್

ಇಡೀ ಜಿಲ್ಲೆಯ ರಾಜಕೀಯದ್ದೇ ಒಂದು ತೂಕವಾದರೆ, ಅರಸಿಕೆರೆ ರಾಜಕೀಯದ್ದೇ ಮತ್ತೊಂದು ತೂಕ. ಲಿಂಗಾಯತ ಮತದಾರರೇ ಹೆಚ್ಚಿರುವ ಈ ಕ್ಷೇತ್ರದಲ್ಲಿ ಇಲ್ಲಿಯತನಕ ಆರಿಸಿ ಬಂದವರೆಲ್ಲಾ ಲಿಂಗಾಯತರೆ. ಜೆಡಿಎಸ್, ಕಾಂಗ್ರೆಸ್ ಮತ್ತು ಬಿಜೆಪಿಗಳು ಒಂದಾದ ಮೇಲೊಂದರಂತೆ ಇಲ್ಲಿ ಆರಿಸಿ ಬಂದಿವೆ.

ಕಳೆದ ಚುನಾವಣೆಯಲ್ಲಿ ಬಿಜೆಪಿಗೆ ಒಲಿದಿದ್ದ ಈ ಕ್ಷೇತ್ರದ ಮತದಾರ ಈ ಬಾರಿ ಅದಕ್ಕೆ ಕೈ ಕೊಡುವ ಸೂಚನೆ ನೀಡುತ್ತಿದ್ದಾನೆ. ಈ ಕ್ಷೇತ್ರದ ಶಾಸಕ ವಿ.ಎಸ್. ಬಸವರಾಜು ರಾಜ್ಯ ರಾಜಕೀಯದ ಬಗ್ಗೆ ವಹಿಸಿದಷ್ಟು ಆಸಕ್ತಿಯನ್ನು ಕ್ಷೇತ್ರದ ಮತದಾರರ ಬಗ್ಗೆ ವಹಿಸದಿರುವುದೇ ಇದಕ್ಕೆ ಕಾರಣ.

ಹಾಸನ

ಈ ಮಧ್ಯೆ ಜೆಡಿಎಸ್ ಅಭ್ಯರ್ಥಿಯಾಗಿ ಇಲ್ಲಿ ಸ್ಪರ್ಧಿಸಲು ಸಜ್ಜಾಗಿ ನಿಂತಿದ್ದ ರೇವಣ್ಣನ ಬಲಗೈ ಭಂಟ ಕುಡಕುಂದಿ ಶಿವಲಿಂಗೇಗೌಡರಿಗೆ ಈ ಮಧ್ಯಂತರ ಚುನಾವಣೆ ಆಘಾತ ತಂದಿದೆ. ಕಳೆದ ಚುನಾವಣೆಯಲ್ಲಿ ಇವರು ಗಂಡಸಿ ಕ್ಷೇತ್ರದಿಂದ ಸ್ಪರ್ಧಿಸಿ ಕೇವಲ 15 ಮತಗಳ ಅಂತರದಿಂದ ಸೋಲುಂಡಿದ್ದರು. ಕ್ಷೇತ್ರ ಪುನರ್ ವಿಂಗಡನೆಯಿಂದ ಗಂಡಸಿ ಕ್ಷೇತ್ರ ಹರಿದು ಹಂಚಿಹೋದ ಕಾರಣ ಅರಸಿಕೆರೆಯತ್ತ ಮುಖ ಮಾಡಿದ್ದರು. ಆದರೆ ಈ ಮಧ್ಯಂತರ ಚುನಾವಣೆ ಅವರನ್ನು ಮತ್ತೆ ಗಂಡಸಿಯತ್ತ ತಿರುಗಿಸಿದೆ.

ಇನ್ನು ಕಾಂಗ್ರೆಸ್ ಅಭ್ಯರ್ಥಿಗಳಾಗಲು ಮಾಜಿ ಶಾಸಕರುಗಳಾದ ಸಿದ್ದಣ್ಣ ಪ್ರಭುಕುಮಾರ್, ಪರಮೇಶ್ವರಪ್ಪ ತುದಿಗಾಲಲ್ಲಿ ನಿಂತಿದ್ದಾರಾದರೂ ಇನ್ನೊಂದೆಡೆಗೆ ಈ ಭಾಗದ ಸಮಾಜ ಸೇವಕ, ಮಾಜಿ ಜೆಡಿಎಸ್ ಮುಖಂಡ ಜೆಪಿಎನ್ ಜಯಣ್ಣ ತಾನೇ ಕಾಂಗ್ರೆಸ್ ಅಭ್ಯರ್ಥಿಯೆಂದು ತಾಲ್ಲೂಕಿನಾದ್ಯಂತ ಪ್ರಚಾರ ಮಾಡುತ್ತಿದ್ದಾರೆ.

ಈ ಮಾಜಿ ಮದ್ಯದ ದೊರೆ ಕಳೆದ 25-30 ವರ್ಷಗಳಿಂದ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಚುನಾವಣಾ ಖರ್ಚಿಗೆ ದುಡ್ಡು ಒದಗಿಸುತ್ತಿದ್ದವರು. ಆದರೆ, ಈಗೀಗ ತಮ್ಮ ಮದ್ಯದ ದುಡ್ಡನ್ನು ತಾಲ್ಲೂಕಿನಾದ್ಯಂತ ಚೆಲ್ಲುತ್ತಾ ಹಳ್ಳಿಹಳ್ಳಿಗಳಲ್ಲಿ ದೇವಸ್ಥಾನ ಕಟ್ಟಿಸುವುದು, ತಾಲ್ಲೂಕಿನಲ್ಲಿ ನಡೆಯುವ ಪ್ರತೀ ಕಾರ್ಯಕ್ರಮಕ್ಕೂ ದುಡ್ಡು ಕೊಡುವುದು – ಹೀಗೇ ತಮ್ಮ ದುಡ್ಡಿನ ಬಲದಿಂದಲೇ ಜನಪ್ರಿಯತೆಯನ್ನು ಬೆಳೆಸಿಕೊಂಡಿದ್ದಾರೆ. ಅಂದರೆ, ಇಲ್ಲಿಯವರೆಗೆ ತಮ್ಮ ದುಡ್ಡನ್ನು ಬೇರೆಯವರ ರಾಜಕೀಯ ಜೀವನ ರೂಪಿಸಲು ಹರಿಸಿದ್ದವರು, ಈ ಬಾರಿ ಅದನ್ನು ತಮ್ಮದೇ ರಾಜಕೀಯ ಕರಿಯರ್ ರೂಪಿಸುವುದಕ್ಕೆ ಚೆಲ್ಲಲು ಹೊರಟಿದ್ದಾರೆ. ವಾಸ್ತವದಲ್ಲಿ ಇದು ಇಲ್ಲಿನ ಕಾಂಗ್ರೆಸ್ ರಾಜಕಾರಣಿಗಳ ನಿದ್ದೆಗೆಡಿಸಿದೆ. ಕ್ಷೇತ್ರದಲ್ಲಿ ಲಿಂಗಾಯತ ಮತದಾರರ ಪ್ರಾಬಲ್ಯವಿದ್ದರೂ ಅವರಿಗಿರುವ ದುಡ್ಡು ಮತ್ತು ಸಮಾಜ ಸೇವಕ ಎಂಬ ಹಣೆಪಟ್ಟಿ ಅವರನ್ನು ಈ ಬಾರಿ ಗೆಲ್ಲಿಸಲೂಬಹುದು. ಕಾಂಗ್ರೆಸ್ ರಾಜ್ಯ ನಾಯಕರಾದ ಸಿದ್ರಾಮಯ್ಯನಂಥವರೊಂದಿಗೆ ಮಾತ್ರವಲ್ಲದೇ, ಹೈಕಮಾಂಡಿನೊಂದಿಗೂ ನೇರ ಸಂಪರ್ಕವಿರಿಸಿಕೊಂಡಿರುವ ಜಯಣ್ಣನಿಗೆ ಟಿಕೆಟ್ ಸಿಗುವುದು ಕಷ್ಟದ ಮಾತೇನಲ್ಲ.

ಗುಂಡ್ಲುಪೇಟೆ [illegible]

ಕಳೆದ 20 ವರ್ಷಗಳಿಂದ ಗಂಡಸಿ ಕ್ಷೇತ್ರವನ್ನು ತಮ್ಮ ತೆಕ್ಕೆಯಲ್ಲಿಯೇ ಇಟ್ಟುಕೊಂಡು ಬಂದಿರುವ ಕಾಂಗ್ರೆಸ್‌ನಿಂದ ಅದನ್ನು ಕಿತ್ತುಕೊಳ್ಳುವುದಕ್ಕೆ ಜೆಡಿಎಸ್ ಮತ್ತು ಬಿಜೆಪಿಗಳು ಕಸರತ್ತು ನಡೆಸಿವೆ. ಕಾಂಗ್ರೆಸ್‌ನಿಂದ ನಾಲ್ಕನೇ ಬಾರಿಗೆ ಆಯ್ಕೆಯಾಗಿರುವ ಸಜ್ಜನ ರಾಜಕಾರಣಿ ಮಾಜಿ ಸಚಿವ ಬಿ. ಶಿವರಾಂ ಅವರ ಜನಪ್ರಿಯತೆಯನ್ನು ಕುಗ್ಗಿಸಲು ಜೆಡಿಎಸ್ ಮತ್ತು ಬಿಜೆಪಿಗಳು ಹಣದ ಹೊಳೆಯನ್ನೇ ಹರಿಸಲು ಸಜ್ಜಾಗಿವೆ.


ಕಳೆದ ಚುನಾವಣೆಯಲ್ಲಿ ಕೇವಲ 15 ಮತಗಳ ಅಂತರದಿಂದ ಸೋತಿದ್ದ ಜೆಡಿಎಸ್‌ನ ಕುಡಕುಂದಿ ಶಿವಲಿಂಗೇಗೌಡನಿಗೆ ಅವನ ಬೆಂಬಲಿಗ ಬೆಂಗಳೂರಿನ ಬಿಲ್ಡರ್ ಹುಲ್ಲಳ್ಳಿ ಸುರೇಶ್ ಕೈಕೊಟ್ಟು ಬಿಜೆಪಿ ಸೇರಿಕೊಂಡಿರುವುದು ಕುಡಕುಂದಿಯ ಪಾಲಿಗೆ ನೆಗೆಟಿವ್ ಪಾಯಿಂಟ್ ಆಗಲಿದೆ. ಅಲ್ಲದೇ, ಕ್ಷೇತ್ರ ಮರುವಿಂಗಡನೆಯ ಕಾರಣ ಗಂಡಸಿ ಕ್ಷೇತ್ರ ಹರಿದು ಹೋಗಿತ್ತಾದ್ದರಿಂದ ಇನ್ನು ಮುಂದೆ ಅರಸಿಕೆರೆಯಲ್ಲಿ ಸ್ಪರ್ಧಿಸಬೇಕು ಎಂದುಕೊಂಡು ಅವರ ಚಿತ್ತವೆಲ್ಲ ಅರಸಿಕೆರೆಯತ್ತ ವಾಲಿ ಗಂಡಸಿಯನ್ನು ಹೆಚ್ಚುಕಡಿಮೆ ಮರತೇ ಬಿಟ್ಟಿದ್ದರು. ಹೀಗಾಗಿ ಗಂಡಸಿಯಲ್ಲಿ ಅವರ ಬಗೆಗಿನ ಸಿಂಪಥಿ ಮತ್ತು ಜನಪ್ರಿಯತೆಯೂ ಉಳಿದಿಲ್ಲ.

ಕಾಂಗ್ರೆಸ್ ತನ್ನ ಪಾರಂಪರಿಕ ಕ್ಷೇತ್ರವಾದ ಗಂಡಸಿಯನ್ನು ಉಳಿಸಿಕೊಳ್ಳುತ್ತದೋ ಅಥವಾ ಜೆಡಿಎಸ್-ಬಿಜೆಪಿಗಳ ಹಣದ ಹೊಳೆ ಆದರಿಂದ ಕ್ಷೇತ್ರವನ್ನು ಕಿತ್ತುಕೊಳ್ಳುತ್ತದೋ ಆ ಮತದಾರನೇ ಬಲ್ಲ.

–ಡಿ. ಗೌಡ


ಶೆಟ್ಟರ್‌ನ್ನು ಎಲ್ಲಾ ಕಡೆ ಕರ್ಕೊಂಡು ಹೋಗೋಕಾಗಲ್ಲ!

ಹುಬ್ಬಳ್ಳಿ




ಬಿಜೆಪಿಯೊಳಗಿನ ಯಡ್ಡಿ-ಅನಂತೂ ಬಣಗಳ ಒಳಜಗಳ ಹಲವಾರು ರೂಪಗಳಲ್ಲಿ ಅನಾವರಣಗೊಳ್ಳುತ್ತಿದೆ. ಏಳು ದಿನಗಳ ಸಿ.ಎಂ. ಕುರ್ಚಿಯ ಸಿಹಿರುಚಿಯನ್ನು ಕಂಡಿರುವ ಯಡ್ಡಿಗೆ ಈಗ ಪಕ್ಷದೊಳಗೇ ಕಹಿರುಚಿಯನ್ನು ಉಣ್ಣಿಸಲು ಅನಂತೂ ಸಜ್ಜಾಗಿದ್ದಾರೆ. ಯಡ್ಡಿಗೆ ಹೋದ ಕಡೆಯಲ್ಲೆಲ್ಲಾ ಶನಿಯಂತೆ ಕಾಡುತ್ತಿರುವ ಅನಂತೂದೇ ಒಂದು ದೊಡ್ಡ ತಲೆನೋವಾಗಿಬಿಟ್ಟಿದೆ. ಮೊನ್ನೆ ಡಿಸೆಂಬರ್ ಎಳರಂದು ಯಡ್ಡಿ ಹುಬ್ಬಳ್ಳಿಗೆ ಆಗಮಿಸಿದ್ದಾಗ ಜಗದೀಶ್ ಶೆಟ್ಟರ್ ಪತ್ತೆಯೇ ಇರಲಿಲ್ಲ. ಮಾಜಿ ಸಿಎಂ ಜಿಲ್ಲೆಗೆ ಬರ್ತಾರೆಂದರೆ ಖುದ್ದು ಶೆಟ್ಟರ್ ರಿಸೀವ್ ಮಾಡಲು ಬಂದಿರ್ತಾರೆ ಅಂದುಕೊಂಡಿದ್ದವರಿಗೆ ಇದೊಂಥರಾ ಶಾಕ್. ಬಂದಿದ್ದು ಶೆಟ್ಟರ್ ಅಲ್ಲ, ಹುಬ್ಬಳ್ಳಿ-ಧಾರವಾಡ ಶಹರ ಅಧ್ಯಕ್ಷ ದತ್ತು ಡೋರ್ಲೆ.

ಇದೂ ಅನಂತೂದೇ ಕೈವಾಡ ಎಂದುಕೊಂಡ ಪತ್ರಕರ್ತರು ಸುಮ್ಮನಿರಲಾರದೇ ಜಗದೀಶ್ ಶೆಟ್ಟರ್ ಎಲ್ಲಿ? ಎಂದು ಯಡ್ಡಿಯನ್ನು ಕೇಳಿಯೇಬಿಟ್ಟರು. ಅದಕ್ಕೆ ಯಡ್ಡಿ, "ಅವರನ್ನು ಎಲ್ಲಾ ಕಡೆ ಕರ್ಕೊಂಡು ಹೋಗೋಕಾಗಲ್ಲ, ಅದರ ಅವಶ್ಯಕತೆನೂ ಇಲ್ಲ" ಎಂದುಬಿಟ್ಟರು. ಸುಮ್ಮನಿರಲಾರದ ಶೆಟ್ಟರ್ ಶಿಷ್ಯ ಕಮ್ ಚೆಡ್ಡಿ ಪತ್ರಕರ್ತ, "ಹೊಸಬರಿಗೆ ಟಿಕೆಟ್ ಕೊಡುವ ಮೂಲಕ, ಪಕ್ಷದೊಳಗೆ ನಾಯಕತ್ವ ಸ್ಥಾನ ನೀಡುವ ಮೂಲಕ ಮತ್ತೊಂದು ಗುಂಪನ್ನು ತಯಾರಿ ಮಾಡುತ್ತೀರಾ?" ಎಂದು ಇನ್ನೊಂದು ಪ್ರಶ್ನೆಯನ್ನು ಯಡ್ಡಿಯ ಕಡೆಗೆ ಎಸೆದ. ಅಷ್ಟು ಹೊತ್ತಿಗಾಗಲೇ ಪಿತ್ತ ನೆತ್ತಿಗೇರಿಸಿಕೊಂಡಿದ್ದ ಯಡ್ಡಿ, "ಆ ಗುಂಪಿಗೆ ನೀನೇ ನಾಯಕನಾಗು" ಎಂದು ಹರಿಹಾಯ್ದುಬಿಟ್ಟರು. ಪಕ್ಕದಲ್ಲಿಯೇ ಇದ್ದ ಅಶೋಕ ಕಾಟವೆ, ಚಂದ್ರಕಾಂತ ಬೆಲ್ಲದ, ಸಿಂಬಣ್ಣನವರ್, ಶಿರಿಯಣ್ಣನವರ್ [illegible] ತಮ್ಮ ಗುರುವಿನ ಸಿಟ್ಟು ನೆತ್ತಿಗೇರಿರುವುದನ್ನು ಕಂಡು ಮುಸಿಮುಸಿ ನಗುತ್ತಿತ್ತು, ಇದನ್ನು ನೋಡಿ ಶೆಟ್ಟರ್ ಶಿಷ್ಯ ಹುಬ್ಬಾಶ್ಯಾಲಿಯಾದನೋ ಅಥವಾ [illegible] ಖುದ್ದು ನಗೆಪಾಟಲಿಗೀಡಾದನೋ ಗೊತ್ತಿಲ್ಲ.



ಬೆತ್ತಲಾದದ್ದು ಎಲ್ಲಣ್ಣನಲ್ಲ, ಎನ್ನೆಲದಿನ್ನೆ!



ಭೂದೇವಿ ಹೇಳಿದ ಆ ಒಂದು ಕೆಲಸವನ್ನು ಮಾತ್ರ ಎರ್ರೆಂಕನಿಂದ ಮಾಡಲಾಗಲಿಲ್ಲ. ಮಿಕ್ಕ ವಿಷಯಗಳೆಲ್ಲಾ ತಂಗಿ ಹೇಳಿದ್ದಂತೇ ಆಗುತ್ತಿತ್ತು. ಮಗನಿಗೆ ತಾತನ ಹೆಸರು ಇಡಬೇಕು ಅಂದುಕೊಂಡ. ಭೂದೇವಿ ಇಲ್ಲ ಅಪ್ಪನ ಹೆಸರೇ ಅಂದಳು. ಎರ್ರೆಂಕ ಎದುರು ಮಾತಾಡಲಿಲ್ಲ.

ಹಟ್ಟಿ ಹಿರಿಯ ಬಂದು ಮಗುವನ್ನ ನೋಡಿ ಸೀನ ಸುಬ್ಬಾ ಅಂತ ಕರೆದ. ಸೀನ ಸುಬ್ಬಾ ಅಲ್ಲ ಎಲ್ಲ ಅಂದ ಎರ್ರೆಂಕ. ಎಲ್ಲ ಅಲ್ಲ ಎಲ್ಲಣ್ಣ ಅಂದಳು ಭೂದೇವಿ. "ಅಪ್ಪ ಅಂದ್ರೆ ಇವಳಿಗೆ ಮಹಾ ಇದು ಕಣೋ ಎರ್ರೆಂಕ'' ಅಂದ ಆ ಹಿರಿಯ.

ಭೂದೇವಿ ಸೋದರಳಿಯನ್ನ ಮೇಲಕ್ಕೆತ್ತಿ ಮುದ್ದಾಡಿದಳು. ಅಯ್ಯಾ ಅಂದಳು, ಎಲ್ಲಣ್ಣಾ ಅಂದಳು. ಎಲ್ಲಯ್ಯಾ ಅಂದಳು. ಆ ಕರೆಯಲ್ಲಿ ತನ್ನದೇ ಆದ ಲೋಕವನ್ನು ಕಟ್ಟಿಕೊಂಡಳು. ಅದರಲ್ಲಿ ಆತುರಾತುರವಾಗಿ ತನ್ನ ಕೆಲಸವನ್ನು ಮುಗಿಸಬೇಕೆಂಬ ಕಾತುರವಿತ್ತು.

ಅಬ್ಬು ತನ್ನ ಮೂಗಿನ ಹೋಲಿಕೆ ಇಟ್ಟುಕೊಂಡೆ ಹುಟ್ಟಿದ್ದಾನೆ. ಅದರ ಪುಟ್ಟ ಕೈಯಿಂದ ತನ್ನ ಮೂಗನ್ನು ನೇವರಿಸಿಕೊಳ್ಳುತ್ತಾ ಮೂಗಿನ ಉದ್ದ ಅಳೆದುಕೊಂಡಳು.

ಊರಿನಲ್ಲಿ ದೊಡ್ಡ ಶ್ಯಾನುಭೋಗ ಸಾಯೋವಾಗ ತನ್ನ ಮಗನಿಗೆ ಐವತ್ತು ಎಕರೆ ತರಿ ಜಮೀನು ಕೊಟ್ಟ. ಎರಡು ಮಾವಿನ ತೋಪು, ಐದಾರೆಕರೆ ಶೇಂಗಾ ಹೊಲ, ಇಪ್ಪತ್ತು ಸಾಲಿನ ತಾಳೆ ಮರಗಳು; ಇಷ್ಟಲ್ಲದೆ ಖುಷ್ಕಿ ಎಷ್ಟೋ ಲೆಕ್ಕವೇ ಇಲ್ಲ. ಅಷ್ಟಕ್ಕೆ ಮುಗೀಲಿಲ್ಲ. ಜತೆಗೆ ಐದು ಹಳ್ಳಿಗಳ ಶ್ಯಾನುಭೋಗಿಕೆ ಕೊಟ್ಟು ಸತ್ತ. ಆದರೆ ಈ ಕೇರಿಯಲ್ಲಿ ಅಪ್ಪ ಸಾಯೋವಾಗ ಕೊಟ್ಟದ್ದು ತನ್ನ ಮೂಗನ್ನ ಮಾತ್ರ. ಅದೂ ಮಗನಿಗೆ ಕೊಡಲಿಲ್ಲ, ಕೊಟ್ಟದ್ದು ಮಗಳಿಗೆ. ಈಗ ಅದನ್ನು ಮೊಮ್ಮಗ ಕಿತ್ತುಕೊಂಡಿದ್ದಾನೆ. 'ನನ್ನ ಮನೆ ಆಸ್ತಿ ನನಗೇ ಸೇರಬೇಕು ಅತ್ತೆ' ಎನ್ನುತ್ತಾ ಅಮ್ಮನ ಹೊಟ್ಟೆಯಲ್ಲಿರುವಾಗಲೆ ಅಳತೆ ಮಾಡಿಕೊಂಡು ಉದ್ದ ಮೂಗಿನ ಸಮೇತ ಹುಟ್ಟಿದ್ದಾನೆ. ಇದು ಅಪ್ಪನ ಮಗುವೂ ಅಲ್ಲ, ಅಮ್ಮನ ಮಗುವೂ ಅಲ್ಲ, ಇದು ಸೋದರತ್ತೆ ಭೂದೇವಿಯ ಮಗು. ಮಾರಮ್ಮನ ಸಾಕ್ಷಿ, ಎಲ್ಲಮ್ಮನ ಸಾಕ್ಷಿ, ಊರಾಚೆ ಇರುವ ಮುಂಗಮೂರಪ್ಪ ಸಾಕ್ಷಿ. ಇದು ಸೋದರತ್ತೆಯ ಮಗುವೇ ಅಂದುಕೊಳ್ಳುತ್ತಲೇ ತನ್ನ ಮುಂದಿನ ಜೀವನಕ್ಕೆಲ್ಲಾ ಒಂದು ಅರ್ಥವನ್ನ ಹುಡುಕಿಕೊಂಡಳು ಭೂದೇವಿ.

ಹಟ್ಟಿಯ ಹಿರಿಯ "ಮಗುವಿಗೆ ಸೋದರ ಮಾವ ಪಂಚೆ ಉಡಿಸಲಿ'' ಅಂದ. ಭೂದೇವಿಯ ಗಂಡ ಎಂಕಟನರಸು ಮುಂದಾದ. ಸೋದರ ಮಾವನ ಪಂಚೆ ಅಂದರೆ ಪಟ್ಟು ಪೀತಾಂಬರವೇನಲ್ಲ, ಕಪ್ಪು ಪುಟಗೋಸಿ ಅಷ್ಟೆ. ಎಂಕಟನರಸು ಮಗುವಿಗೆ ಲಂಗೋಟ ತೊಡಿಸಿದ. ಮಗು ಎರಡೂ ಕಾಲೆತ್ತಿ ಭೂದೇವಿಯ ಮೂಗಿಗೇ ಝಾಡಿಸಿ ಒದೆಯಿತು. ಲಂಗೋಟಿಯ ಒಳಗಿಂದ ಮಗು ಹೋಯ್ದ ಉಚ್ಚೆಯ ಹನಿಗಳು ಎಂಕಟನರಸುವಿನ ಮೇಲೆ ಬಿದ್ದವು. "ಅವಳ ಬಾಯಿಗೇ ಹುಯ್ಯೋ ....'' ಅಭ್ಯಾಸ ಬಲದಿಂದಲೇ ಕೆಟ್ಟ ಮಾತು ಅವನ ಬಾಯಿಂದ ಬಂತು. "ಅವನಿಗೆ ನಮ್ಮಪ್ಪನ ಹೆಸರಿಟ್ಟಿದ್ದೇವೆ. ಹಾಗೆಲ್ಲಾ ಅನ್ನಬೇಡ'' ಅಂದಳು ಭೂದೇವಿ.

ಸೋದರಳಿಯನನ್ನು ಭೂದೇವಿ ಆಟಗಳನ್ನು ಆಡಿಸುತ್ತಾ ಹಾಡುಗಳನ್ನ ಕೇಳಿಸುತ್ತಲೇ ಬೆಳೆಸಿದಳು. ಮಗುವನ್ನ ಕಾಲಮೇಲೆ ಮಲಗಿಸಿಕೊಂಡು ಎಣ್ಣೆ ನೀರು ಹಾಕೋವಾಗ ಕಾಮವ್ವನ ಹಾಡು ಹೇಳುತ್ತಿದ್ದ ಭೂದೇವಿ, ಜೋಗುಳ ಹಾಡುವಾಗ ಲಕ್ಷ್ಮವ್ವನ ಕಥೆಯನ್ನು ಹೇಳುತ್ತಿದ್ದಳು. ಅವನು ಹಾಡು ಕೇಳುತ್ತಲೇ ಆಡುತ್ತಿದ್ದ. ಹಾಡು ಕೇಳುತ್ತಲೇ ತಿನ್ನುತ್ತಿದ್ದ. ಹಾಡು ಕೇಳುತ್ತಲೇ ನಿದ್ರೆ ಮಾಡುತ್ತಿದ್ದ. ಹೆತ್ತ ತಾಯಿ ಲಿಂಗಾಲು ತನ್ನ ಮಗನನ್ನ ಪೂರ್ತಿ ತನ್ನ ನಾದಿನಿಯ ಸುಪರ್ದಿಗೇ ವಹಿಸಿ ಬಿಟ್ಟಿದ್ದಳು. ಭೂದೇವಿಗೆ ಮಕ್ಕಳಾಗಲಿಲ್ಲ, ಅಳಿಯನನ್ನೇ ತನ್ನ ಮಗ ಅಂತ ಭಾವಿಸಿಕೊಂಡಳು.

ಕೆಲಸ ಏನೂ ಇಲ್ಲದ ದಿನಗಳಲ್ಲಿ ಹೆಂಗಸರೆಲ್ಲಾ ಹೊತ್ತಿಗೆ ಮುಂಚೆ ಇದ್ದದ್ದು ತಿಂದು ಗುಡ್ಡವೇರಿ ಬಂದು ತಿಂಗಳ ಬೆಳಕಿನಲ್ಲಿ ಭೂದೇವಿಯ ಮನೆಯ ಮುಂದೆ ಸೇರ್ತಾ ಇದ್ದರು. ಭೂದೇವಿ ನಲ್ಲತಂಗನ ಕಥೇನ ಹೇಳಕ್ಕೆ ಶುರು ಮಾಡುತ್ತಿದ್ದಳು. ದೇವ ರಾಯಾ ದೇವ ರಾಯಾ ಅಂತ ಹಾಡೋದಕ್ಕೆ ಶುರು ಮಾಡಿ ಕಾಶ್ಯಪೂರಿ ಪಟ್ಟಣದಲ್ಲಿ ಅಂತ ಮುಂದುವರೆಯೋ ಆ ಹಾಡು ಬೆಳದಿಂಗಳು ಮಸುಕಾಗುವವರೆಗೂ ನಡೀತಿತ್ತು. ತೋಂತದ್ದಿಂದಕ ಅಂತ ಮಿಕ್ಕ ಹೆಂಗಸರು ಆ ಹಾಡಿಗೆ ಶೃತಿ ಕೂಡಿಸೋರು. ಆ ಹೆಂಗಸರ ನಡುವೆ ತನ್ನ ಸೋದರತ್ತೆಯ ಮಡಿಲಲ್ಲಿ ಕೂತು ಎಲ್ಲಯ್ಯ ಕೂಡಾ ಎಲ್ಲಾ ಹಾಡುಗಳನ್ನೂ ಕೇಳಿಸಿಕೊಳ್ಳುತ್ತಿದ್ದ. ನಿದ್ದೆ ತಡೆದುಕೊಂಡು, ಆಕಳಿಸುತ್ತಾ ತಾನೂ ತೋಂತದ್ದಿಂದಕ ಅಂತಿದ್ದ. ಅವನು ಹಾಗೆ ಹೇಳ್ತಿದ್ದಾಗಲೆಲ್ಲಾ ಭೂದೇವಿಗೆ ಅವನ ಮೇಲೆ ಮುದ್ದು ಉಕ್ಕಿ ಬರ್ತಿತ್ತು. ಅಳಿಯನನ್ನು ಮುದ್ದು ಮಾಡುತ್ತಲೇ ಹಾಗೇ ತನ್ನ ತೊಡೆಯ ಮೇಲೇ ತಟ್ಟಿ ಮಲಗಿಸಿಕೊಳ್ಳುತ್ತಿದ್ದಳು. ಅವನು ನಿದ್ದೆಯಲ್ಲಿಯೂ ತೋಂತದ್ದಿಂದಕ ಅಂತ ಕನವರಿಸುತ್ತಲೇ ಇರುತ್ತಿದ್ದ.

ಎಲ್ಲಣ್ಣ ತನ್ನ ಸೋದರತ್ತೆ ಯಾವ ರಾಗ ಗುನುಗಿದರೆ ಅದೇ ರಾಗ ಗುನುಗುತ್ತಾ ಬೆಳೆದ. ಯಾವ ಹಾಡು ಹಾಡಿದರೆ ಅದೇ ಹಾಡು. ಅತ್ತೆಯ ಕಂಕುಳಲ್ಲಿ ಕೂತುಕೊಂಡು ಗೊಂಬೆಯಾಟ ನೋಡುತ್ತಿದ್ದ. ಮನೆಗೆ ಬಂದ ಮೇಲೆ ತಾನು ಕೋಡಂಗಿ, ಅತ್ತೆ ನೀನು ಬಂಗಾರಮ್ಮ ಅಂತ ಕುಣೀತಿದ್ದ. ಭೂದೇವಿ ಉಬ್ಬಿ ಹೋಗುತ್ತಿದ್ದಳು.

ಬಯಲಾಟದವರು ಊರಿಗೆ ಬಂದರೆ ಊರಿಗೆಲ್ಲಾ ಸಂಭ್ರಮವೋ ಸಂಭ್ರಮ. ಅವರು ಒಂದೇ ಸಮನೆ ಹತ್ತು ಹದಿನೈದು ದಿನಗಳ ಕಾಲ ನಾಟಕಗಳನ್ನು ಆಡುತ್ತಿದ್ದರು. ಅವರು ಆಡೋ ಬಯಲ್ನಾಟಕಗಳಲ್ಲಿ ಚೆಂಚು ಲಕ್ಷ್ಮಿ ನಾಟಕ ಅಂದರೆ ಭೂದೇವಿಗೆ ವಿಪರೀತ ಇಷ್ಟ. ಅಳಿಯನನ್ನು ಎತ್ತಿಕೊಂಡು ಆಟ ನೋಡೋಕೆ ಹೋಗುತ್ತಿದ್ದಳು.

ಬಯಲಾಟದವರು ಊರಹೊರಗೆ ನಾಟಕ ಆಡುತ್ತಿದ್ದರು. ಆಕಡೆ ಒಂದು ಈ ಕಡೆ ಒಂದು ತಾಳೆಮರವನ್ನು ನೆಡುತ್ತಿದ್ದರು. ಎರಡನ್ನು ಸೇರಿಸುವಂತೆ ಮತ್ತೊಂದು ತಾಳೆಮರವನ್ನು ಜಡಿಯುತ್ತಿದ್ದರು. ಅದರ ಮೇಲೆ ಒಂದು ಉದ್ದನೆಯ ಹಲಿಗೆ ಸ್ವಲ್ಪ ಎತ್ತರಕ್ಕೆ ಮಲಗಿಸಿದರೆಂದರೆ ಅದೇ ವಾದ್ಯದವರು ಕುಳಿತುಕೊಳ್ಳೋ ಜಾಗ. ಅದರ ಸುತ್ತಲೂ ತಂದಾನ ಹೇಳುವವರು ತಾಳಗಳನ್ನ ಹಿಡಿದುಕೊಂಡು ನಿಲ್ಲೋರು. ನಾಟಕ ಆಡೋರು ಅದರ ಮುಂದಿದ್ದ ಖಾಲಿ ಜಾಗದಲ್ಲಿ ನಾಟಕ ಆಡುತ್ತಿದ್ದರು.

ಭೂಮಿಯ ಮೈಯಲ್ಲಿ ಬೆಳ್ಳಿಯ ತುರಿಗಜ್ಜಿ!

ನಮ್ಮ ಬಿ. ಚಂದ್ರೇಗೌಡರು ಇತ್ತೀಚೆಗೆ ಮೊದಲ ಬಾರಿಗೆ ವಿಮಾನದಲ್ಲಿ ಪ್ರಯಾಣ ಮಾಡಿದರು. ಆ ಅನುಭವದ ಸುತ್ತ ಒಂದು ಹಾಸ್ಯ ಲೇಖನ ಇಲ್ಲಿದೆ.

ಬೆಂಗಳೂರು-ಮಂಗಳೂರು ನಡುವೆ ಒಂದು ಗೆರೆ ಎಳೆದರೆ ಈ ಗೆರೆ ನಮ್ಮೂರ ಮೇಲಿಂದ ಹೋಗುತ್ತದೆ ಅಥವಾ ಆಸುಪಾಸಿನಲ್ಲಿ ಹೋಗಬಹುದು. ಇದನ್ನು ಹೇಳಲು ನನಗಿರುವ ಅಂದಾಜು ಯಾವುದೆಂದರೆ ಬೆಂಗಳೂರು-ಮಂಗಳೂರು ಪ್ಲೇನ್‌ಗಳು ಓಡಾಡುವುದು ನಮ್ಮೂರಿನ ಆಗಸದ ಮೇಲೆ. ಒಮ್ಮೊಮ್ಮೆ ಪುಯೋಗಾರ್ಥ ಬಂದುಹೋಗುವ ವಿಮಾನಗಳು ಕೂಡ ನಮ್ಮೂರ ಹತ್ತಿರವೇ ಬಂದು ತಿರುಗಿಕೊಂಡು ಹೋಗುತ್ತವೆ.

ಜೆಟ್ ವಿಮಾನ ಬಂದಾಗಿನ ಒಂದು ಸಂದರ್ಭವನ್ನು ಹೇಳಲೇಬೇಕು! ಆಗ ನಾನು ಸಣ್ಣ ಹುಡುಗ. ಊರ ಹತ್ತಿರದ ಹಳ್ಳದ ಸಾಲಲ್ಲಿ ಎಮ್ಮೆ ಮೇಯಿಸುತ್ತಿದ್ದೆ. ಇದೇ ತರ ಮೋಡ ಮುತ್ತಿಕೊಂಡು ಸೂರ್ಯ ಕಾಣದಂತಾಗಿದ್ದ. ಆದರೂ ಅಲ್ಲಲ್ಲಿ ಅಂಗೈಯಗಲದ ಕಡುನೀಲಿ ಬಟ್ಟೆಯಂತೆ ಕಂಡುಬರುತ್ತಿದ್ದ ಆಕಾಶ ಮತ್ತೆ ಮುಚ್ಚಿಕೊಳ್ಳುತ್ತಿತ್ತು. ಆಗ ಇದ್ದಕ್ಕಿದ್ದಂತೆ ಆಕಾಶವನ್ನು ಇಬ್ಭಾಗವಾಗಿ ಸೀಳಿದಂತಹ ಶಬ್ದ ಬರತೊಡಗಿತು. ಆ ಶಬ್ದ ಹತ್ತಿರವೇ ಬಂದಂತೆ ಭಾಸವಾಗಿ ಎದೆ ನಡುಗಿ ಮರದ ಕೆಳಕ್ಕೆ ಓಡಿದೆ. ನಂಜಯ್ಯ ಎಂಬುವನು ಬುದೂರನೆ ಎದ್ದು ಕುಳಿತು ಬೆದರಿದ ಕಣ್ಣಲ್ಲಿ ಇಡೀ ಆಕಾಶವನ್ನು ಶೋಧಿಸತೊಡಗಿದ. ದೂರದಲ್ಲಿ ಮಣ್ಣಾಟ ಆಡುತ್ತಿದ್ದ ಮಕ್ಕಳು ನಾಯಿಮರಿಗಳಂತೆ ಕುಯ್ಯೋ ಮರ್ರೊ ಎಂದು ಚೀರುತ್ತ ತಮ್ಮ ಮನೆಯ ಕಡೆ ಓಡುತ್ತಿದ್ದವು. ದೂರದಲ್ಲಿದ್ದ ಜನಗಳೆಲ್ಲಾ ಈ ಭೀಕರ ಸದ್ದಿನ ಬಗ್ಗೆ ಮಾತನಾಡುವುದು ಕೇಳುತ್ತಿತ್ತು.

ಎಲ್ಲರೂ ಯಾವುದೋ ಅರ್ಥೈಸಲಾಗದ ಅನಾಹುತದಿಂದ ಪಾರಾದವರಂತೆ ನಿಟ್ಟುಸಿರು ಬಿಡುತ್ತಿದ್ದಾಗ, ಮತ್ತೊಮ್ಮೆ ಅದೇ ಶಬ್ದ ಪಶ್ಚಿಮದ ಕಡೆಯಿಂದ ಆರಂಭವಾಯಿತು. ಅಷ್ಟರಲ್ಲಿ ಒಂದು ತುಂಡು ಹೊಲದಗಲದಷ್ಟು ಆಕಾಶ ನೀಲಿಯಾಗಿತ್ತು, ನಮ್ಮನ್ನೆಲ್ಲಾ ಹೆದರಿಸಿದ್ದ ಆ ಪಿಶಾಚಿ ಅಲ್ಲಿಂದ ಹೋದದ್ದು ಕಾಣಿಸಿತು. ತಲೆಕೆಟ್ಟ ರಣಹದ್ದಿನಂತೆ ಹೋದ ಆ ಜೆಟ್ ವಿಮಾನ ನೋಡಿದ ನಂಜಯ್ಯ "ಅದರಲ್ಲಿ ಮನುಸ್ರು ಕುಂತಿಲ್ಲ ಬುಡು. ದೆವ್ವ ಕುಂತಿರಬೇಕು. ಅಲ್ಲಯ್ಯಾ ಇರಪ್ಲೇನ್ ಹಿಂಗೂ ಹೋಗದು ನಿಜವೆ'' ಎಂದು ತಲೆ ಮೇಲೆ ಕೈ ಹೊತ್ತು ಕುಳಿತ.

ಈಗಲೂ ಆ ಶಬ್ದ ಕೇಳಿಬಂದರೆ ಆ ಕ್ಷಣ ನನಗೆ ಬಾಲ್ಯ ಮಗುಚಿಕೊಳ್ಳುತ್ತದೆ. ಅಷ್ಟೇ ಅಲ್ಲ, ಈಗಲೂ ನಮ್ಮೂರ ಮೇಲಿಂದ ಹೋಗುವ ವಿಮಾನದ ಶಬ್ದ ನನ್ನ ಭಾಗಕ್ಕೆ ಬರಿ ಶಬ್ದವಾಗಿ ಉಳಿದಿಲ್ಲ. ಕೈಯಂಚಿನ ಮನೆಯಿಂದ ಏಳುವ ಹೊಗೆ, ಬೇಸಾಯದ ಬದುಕಿನವರು ಹೊಲದ ಕಡೆ ಹೊರಡುತ್ತಿರುವ ತವಕ, ಊರಿನ ನಾಯಿ-ಕೋಳಿ, ಯಾರದೋ ಮನೆಯ ರೇಡಿಯೋದಿಂದ ವಿವಿಧ ಭಾರತಿಯಲ್ಲಿ ಬಿತ್ತರವಾಗುವ ಲತಾ ಮಂಗೇಶ್ಕರ್ ಹಾಡು ಇವುಗಳೊಟ್ಟಿಗೆ ವಿಮಾನದ ಶಬ್ದ ಬೆರೆತು ಹೋಗಿದೆ.


ಒಮ್ಮೆ ಈ ವಿಮಾನದ ಶಬ್ದ ಮತ್ತು ಅದು ಆಕಾಶದಲ್ಲಿ ಹಾರುವ ವಿಸ್ಮಯವನ್ನು ಬಾಂಬೆ ಏರ್‌ಪೋರ್ಟ್ ಸಮೀಪ ಗಂಟೆಗಟ್ಟಲೆ ನಿಂತು ನೋಡಿ ಶಮನ ಮಾಡಿಕೊಂಡೆ. ಅದಕ್ಕೂ ಹಿಂದಿನ ದಿನ ನಮ್ಮೂರ ಕಾಳಣ್ಣ ವಿಮಾನದ ಸಮೀಪವೇ ಹೋಗಿ ನೋಡಿ ಬಂದಿದ್ದ!

ಬೊಂಬಾಯಿಗೆ ಹೋದ ಕಾಳಣ್ಣನ ಮಗ ಕುರ್ಲಾದಲ್ಲಿರುವ ಜನತಾ ಹೋಟೆಲಿನಲ್ಲಿ ಕ್ಲೀನರ್ ಆಗಿ ಸೇರಿಕೊಂಡು ಊರನ್ನೇ ಮರೆತುಬಿಟ್ಟ. ಸಿಟ್ಟುಗೊಂಡ ಕಾಳಣ್ಣ ಬೊಂಬಾಯಿಗೆ ಹೋಗುವವರ ಜೊತೆಯಲ್ಲಿ ಹೋಗಿ ಜನತಾ ಹೋಟೆಲ್ ಬಾಗಿಲಲ್ಲಿ ನಿಂತುಕೊಂಡ, ಟೇಬಲ್ ಕ್ಲೀನ್ ಮಾಡಲು ಬಂದ ಮಗನನ್ನು ಪತ್ತೆ ಹಚ್ಚಿ "ಏನ್ಲಾ ಹಿಟ್ಟಿಕ್ಕೆ ಕಾಗದನೂ ಹಾಕದಂಗೆ, ದುಡ್ಡೂ ಕಳುಸದಂಗೆ ಇಲ್ಲಿ ಸೇರಿಕಂಡಿದ್ದಿಯಲ್ಲಾ. ಹೆತ್ತು ಹೊತ್ತು ದೊಡ್ಡೋನು ಮಾಡಿ ಬೊಂಬಾಯಿಗೆ ಕಳಿಸಿದ್ದು ಸಾರ್ಥಕಾಯ್ತು ಬುಡು'' ಎಂದು ಊರ ಮುಂದಿನ ನ್ಯಾಯವನ್ನು ಬಾಂಬೆ ಹೋಟೆಲ್ ಮುಂದೆ ತೆಗೆದು ನಿಂತ.

ಹೆದರಿದ ಹುಡುಗ ಅಪ್ಪನನ್ನು ಒಳ ಕರೆದುಕೊಂಡು ಹೋಗಿ ಜೋಪಾನವಾಗಿ ಮಡಗಿದ್ದ ಸಂಬಳ ತೋರಿದ್ದರಿಂದ ಖುಷಿಯಾದ. ಕಾಳಣ್ಣ "ಇಲ್ಲೇ ತಿರುಗಾಡಿಕೊಂಡು ಬತ್ತೀನಿರು'' ಎಂದು ಹೊರಟ. ಹೀಗೆ ಹೊರಟವನಿಗೆ ಹತ್ತಾರು ನಿಮಿಷಗಳಿಗೊಮ್ಮೆ ಹದ್ದಿನಂತೆ ಬಂದಿಳಿಯುವ ವಿಮಾನ ಕಾಣಿಸಿದವು. ಕುತೂಹಲದಿಂದ ಇನ್ನೂ ಮುಂದೆ ಹೋದ. ಅಲ್ಲಿ ಕೋಟೆಯಂತಹ ಕಬ್ಬಿಣದ ಗೋಡೆ ಕಂಡಿತು. ಅದರ ಪಕ್ಕವೇ ಒಂದು ಗುಡ್ಡ. ಆ ಗುಡ್ಡ ಹತ್ತಿ ಇಳಿದರೆ ಹೊರಡುವ ಸಿಗ್ನಲ್‌ಗಾಗಿ ಕಾಯುವ ವಿಮಾನ ನಿಂತಿರುತ್ತದೆ.

ಕಾಳಣ್ಣ ಅದರ ಸಮೀಪವೇ ಬರತೊಡಗಿದ. ಇದನ್ನ ಗಮನಿಸಿದ ಭದ್ರತಾ ಪಡೆಗಳು "ಏ ಠೆರೋ ಕೌನ್ ಹೋತುಂ'' ಎಂದು ಕೂಗುತ್ತಾ ಓಡಿಬರತೊಡಗಿದರು. ಕಾಳಣ್ಣ ಕೈ ಸನ್ನೆಯಿಂದಲೇ "ಇಲ್ಲೇ ಏರಪ್ಲೇನ್ ನೋಡಿ ಕಂಡೋಯ್ತಿನಿ, ಸುಮ್ಮನೋಗಿ'' ಎಂದು ಮುಂದುವರಿದೇ ಬಿಟ್ಟ. ಫ್ಲೈಟ್ ಹೊರಟ ಬೆಸಿಗೆ ಅದರ ಬಾಲದ ನೇರಕ್ಕಿದ್ದ ಕಾಳಣ್ಣ ಬಿದ್ದು ಚೆಲ್ಲಾಡಿ ಹೋದ, ಮೈ ಕೈ ತರಚಿ ಹೋಯಿತು. ಅಷ್ಟರಲ್ಲಿ ಬಂದು ಪ್ರಶ್ನಿಸತೊಡಗಿದ ಭದ್ರತಾ ಪಡೆಯವರಿಗೆ "ಬದರಕೆರೆ ಸಾರು, ನಮ್ಮುಡಗ ಇಲ್ಲೇ ಜಂತಾ ಹೋಟೆಲ್‌ವುನೆ'' ಎಂದು ಸರಾಗವಾಗಿ ಹೇಳಿದ ಕಾಳಣ್ಣ. ಆದಾರೆ ಅವರಿಗೆ ಬದರಕೆರೆ ಗೊತ್ತಿರಲಿಲ್ಲ. ಆಗ ಕಾಳಣ್ಣನಿಗೆ ಮೈಸೂರು ನೆನಪಿಗೆ ಬಂತು. ಕಡೆಗೆ "ನಾನು ಮೈಸೂರು'' ಎಂಬುದನ್ನು ಹಿಡಿದುಕೊಂಡು ಹಿಂದಿಯಲ್ಲಿ ಅವರೇನೇ ಕೇಳಿದರೂ "ಮೈಸೂರು'' ಎಂದು ಸುಮ್ಮನಾಗುತ್ತಿದ್ದ.

ಸಂಜೆಯವರೆಗೂ ಕೂರಿಸಿಕೊಂಡಿದ್ದ ಭದ್ರತಾ ಪಡೆಗೆ ಈತ ಯಾವ ಉಗ್ರಗಾಮಿಯೂ ಅಲ್ಲ ಎಂಬುದು ಮನವರಿಕೆಯಾಯ್ತು. ಏಕೆಂದರೆ ಕಾಳಣ್ಣನ ಆಕಾರವೇ ಹಾಗಿತ್ತು. ಮದುವೆಯಲ್ಲಿ ಕಿವಿಗೆ ಹಾಕಿಕೊಂಡಿದ್ದ ಹತ್ತು ಕಡಕು, ನೀಲಿ ಅಂಗಿ, ಮಂಡಿ ಮುಚ್ಚುವ ಖಾಕಿ ಚೆಡ್ಡಿ, ಆ ಚೆಡ್ಡಿ ಕಾಣುವಂತೆ ಎತ್ತಿಕಟ್ಟಿರುವ ಮಾಸಲು ಪಂಚೆ, ಜೇಬಲ್ಲಿ ಒಂದು ಕಟ್ ಗಣೇಶ ಬೀಡಿ,




ಪ್ರೀತಿಯ ಬಗ್ಗೆ ಬಹಳ ಸೂಕ್ಷ್ಮವಾಗಿರುವವರು ಪ್ರೀತಿಸುವುದಕ್ಕೆ ಅಸಮರ್ಥರೂ ಆಗಿರುತ್ತಾರೆ -ಡೊನಾಗ್ಯಾನ್ ಬಿಟ್ಸ್

ನಾಟಕ ಆಡಿದಷ್ಟು ಹೊತ್ತು ಹರಳೆಣ್ಣೆಯ ದೊಂದಿ ಉರಿಯುತ್ತಿತ್ತು, ಹೊರಗ [illegible] ಬೆಳಗುತ್ತಿತ್ತು.

ಶ್ಯಾನುಭೋಗರು, ದೊಡ್ಡ ಗೌಡರುಗಳು ನಾಟಕದವರ ಸಮೀಪದಲ್ಲಿ ಕುಳಿತುಕೊಳ್ಳುತ್ತಿದ್ದರು. ಅವರ ಹಿಂದೆ ಅಗಸ, ಕುಂಬಾರ, ಹಜಾಮ ಹೀಗೆ ಮಿಕ್ಕ ಜಾತಿಗಳವರು ಕುಳಿತುಕೊಳ್ಳುತ್ತಿದ್ದರು. ಹೊಲೆಯರ ದಿಬ್ಬದ ಮೇಲೆ ಹೊಲೆಯರು, ಮಾದಿಗರ ದಿಬ್ಬದ ಮೇಲೆ ಮಾದಿಗರು ಕೂತುಕೊಳ್ಳುತ್ತಿದ್ದರು. ಅವೆರಡೂ ನಾಟಕ ನಡೆಯುತ್ತಿದ್ದ ಜಾಗದಿಂದ ತುಂಬಾ ದೂರವಿರುತ್ತಿದ್ದವು. ಅದು ಹಾಗಿದ್ದುದರಿಂದಲೇ ಅವರು ಊರಿನ ಮೇಲಿನ ಜಾತಿಯವರ ಕಣ್ಣಿಗೆ ಬೀಳದಂತೆ ಕೂತುಕೊಳ್ಳಲು ಆಗುತ್ತಿತ್ತು. ನಾಟಕ ಶುರುವಾಗಕ್ಕೆ ಮುಂಚೆ ಅವರು ದಿಬ್ಬದ ಮೇಲೆ ಬರುವಂತಿರಲಿಲ್ಲ, ಸಹಜವಾಗಿ ಊರಿನ ಮುಖ್ಯಸ್ಥರಾದ ಶ್ಯಾನುಭೋಗ, ದೊಡ್ಡ ಗೌಡರುಗಳು ಬರದ ಹೊರತು ನಾಟಕ ಪ್ರಾರಂಭವಾಗುತ್ತಿರಲಿಲ್ಲ. ದೊಡ್ಡ ಗೌಡರು ಬಂದು ಕುಂತಾದ ಮೇಲೆ ನಿಧಾನವಾಗಿ ಶ್ಯಾನುಭೋಗ ಬರ್ತಿದ್ದ. ಶ್ಯಾನುಭೋಗ ಬಂದ ತಕ್ಷಣ ನಾಟಕದವರು ಶ್ಯಾನುಭೋಗನನ್ನ ದೊಡ್ಡದಾಗಿ ಹೊಗಳುತ್ತಿದ್ದರು. ನಂತರವೇ ಸೂತ್ರಧಾರಿ ನಾಟಕ ಚಾಲೂ ಮಾಡುತ್ತಿದ್ದ. ಶ್ಯಾನುಭೋಗನೂ ಬಂದದ್ದಾಗಿದೆಯೆಂದು ತಿಳಿದನಂತರವೇ ಹೊಲೆಮಾದಿಗರು ದಿಣ್ಣೆಗಳ ಮೇಲೆ ಸೇರುತ್ತಿದ್ದರು. ಯಾರಾದರೂ ತಿಳಿಯದೇ ಮೊದಲೇ ಬಂದು ಕೂತರೆಂದರೆ ಅವರಿಗೆ ಬಯ್ಗುಳು ಗ್ಯಾರಂಟಿ.

ಪುಟ್ಟ ಎಲ್ಲನ್ನ "ನನಗೇನೂ ಕಾಣಿಸ್ತಾನೆ ಇಲ್ಲ ಅತ್ತೆ'' ಅನ್ನುತ್ತಿದ್ದ. ಎತ್ತಿಕೊಂಡು ನಿಂತರೆ ಗೌಡರ ಕಣ್ಣಿಗಾದರೂ ಬೀಳಬಹುದು ಅಥವಾ ಶ್ಯಾನುಭೋಗರ ಕಣ್ಣಿಗಾದರೂ ಬೀಳಬಹುದು. ಸಹಜವಾಗಿ ಅವರೇನೂ ಹಿಂದಕ್ಕೆ ತಿರುಗಿ ನೋಡೋರಲ್ಲ, ಒಂದು ವೇಳೆ ನೋಡಿದರೆಂದರೆ ಸಮಸ್ಯೇನೇ, ಆದರೂ ಅಳಿಯನಿಗಾಗಿ ಎದ್ದು ನಿಲ್ಲೋಳು ಭೂದೇವಿ.



ಅನುವಾದ: ಪ್ರೊ. ನಗರಗೆರೆ ರಮೇಶ್

ನಾಟಕ ಬೆಳಗಿನವರೆಗೂ ನಡೆಯೋದು. ಎಲ್ಲನ ಅಷ್ಟೂ ಹೊತ್ತು ನಿದ್ದೆಗೆಟ್ಟು ನಾಟಕ ನೋಡುತ್ತಿದ್ದ.

ರಾತ್ರಿ ಎಲ್ಲಾ ನಾಟಕ ನೋಡಿ ಬೆಳಗಾಗುತ್ತಿದ್ದಂತೆಯೇ "ಮರ ಹತ್ತಬಲ್ಲೆ ಓ ಚಿಂಚಿ! ಗುಡ್ಡ ಹತ್ತಬಲ್ಲೆ'' ಅಂತಾ ಅತ್ತೆಯ ಬೆನ್ನ ಮೇಲೆ ತಾಳ ಹಾಕುತ್ತಾ ಹಾಡುತ್ತಿದ್ದ, ಭೂದೇವಿಗೆ ಕೊಪ್ಪರಿಗೆ ದುಡ್ಡು ಸಿಕ್ಕಿದಷ್ಟು ಸಂಭ್ರಮವೋ ಸಂಭ್ರಮ. ಅವನು ಅಲ್ಲಿಗೇ ನಿಲ್ಲಿಸ್ತಿರಲಿಲ್ಲ, ಚೆಂಚುಲಕ್ಷ್ಮಿ ನಾಟಕದ ಆ ಹಾಡಿನ ಧಾಟಿಯಲ್ಲಿಯೇ ತಾನೂ ಹೊಸ ಹಾಡುಗಳನ್ನ ಕಟ್ಟುತ್ತಿದ್ದ. "ಮುದ್ದೆ ಮಾಡಬಲ್ಲೆಂಯಾ? ಭೂದೇವಿ ಎಸರು ಮಾಡಬಲ್ಲೆಂಯಾ? ಎಸರು ಹಾಕಿ ಎಲ್ಲನ ಹೊಟ್ಟೆ ತುಂಬಬಲ್ಲೆಯಾ?'' ಅಂತ ಹಾಡ್ತಿದ್ದ. ಭೂದೇವಿ ಸೋಜಿಗಗೊಂಡು ಅವನ ಮುಖವನ್ನೇ ನೋಡ್ತಾ ಇದ್ದರೆ ಅವನ ಬಾಯಿಂದ ಮತ್ತೊಂದು ಹಾಡು ಹೊರಡೋದು... "ಹಾಗ್ಯಾಕೆ ನೋಡ್ತೀಯೇ ಅತ್ತೆ, ಹೇಗಿದೆ ನನ್ನ ಹಾಡು ಮತ್ತೆ?'' ಅಂತ ಅವನು ಹಾಡುತ್ತಿದ್ದಂತೆಯೇ ಭೂದೇವಿ ಬಿದ್ದು ಬಿದ್ದು ನಗೋಳು. ಅವನನ್ನ ಎಳೆದುಕೊಂಡು ಹೋಗಿ ತನ್ನ ಅತ್ತಿಗೆಯ ಹತ್ತಿರ ಕೂಡಿಸಿ ಅವನ ಆಟ ಪಾಟ ಎಲ್ಲವನ್ನೂ ಬಿಡಿಸಿ ಬಿಡಿಸಿ ಹೇಳುತ್ತಿದ್ದಳು. ಲಿಂಗಾಲು ತನ್ನ ನಾದಿನಿಯ ಸಂಭ್ರಮವನ್ನು ಆಶ್ಚರ್ಯದಿಂದ ನೋಡುತ್ತಿದ್ದಳು.

ಒಂದು ದಿನ ಎಲ್ಲನ್ನನಿಗೆ ಹೊಸ ಅನುಭವ. ಆ ಅನುಭವ ಭೂದೇವಿಗೆ ಹೊಸದಲ್ಲ, ಅವಳ ಅಣ್ಣನಿಗೆ, ಅತ್ತಿಗೆಗೆ, ಆ ಹಟ್ಟಿಯಲ್ಲಿ ಹುಟ್ಟಿ ಬೆಳೆದ ಯಾರಿಗೂ ಹೊಸದಲ್ಲ, ಇನ್ನೂ ಹೊಸದಾಗಿ ಜಗತ್ತನ್ನ ಕಣ್ಣುಗಳಲ್ಲಿ ತುಂಬಿಕೊಳ್ಳುತ್ತಿದ್ದ ಎಲ್ಲನ್ನನಿಗೆ ಮಾತ್ರ ಪೂರ್ತಿ ಹೊಸ ಅನುಭವ.

ರಾತ್ರಿ ನಾಟಕ ನೋಡಿದ ಮೇಲೆ ಮರುದಿನ ನಾಟಕದವರ ಡೇರೆಗಳ ಕಡೆ ಹೋಗಬೇಕು ಅನ್ನಿಸಿತು ಎಲ್ಲನ್ನನಿಗೆ. ಅತ್ತೆಯನ್ನು ಕೇಳಿದರೆ ಬೇಡ ಅಂದಳು. ಅವಳು ಬೇಡ ಅಂದದ್ದೇಕೆ ಅನ್ನೋದೂ ಅವನಿಗೆ ತಿಳಿಯಲಿಲ್ಲ, ಆ ನಾಟಕ ನಡೆಯುವಾಗಲೂ ಅಷ್ಟೆ - "ಹತ್ತಿರ ಹೋಗಿ ನಾಟಕ ನೋಡೋಣ ಅತ್ತೆ'' ಅಂತ ಅವನೆಂದರೆ ಭೂದೇವಿ "ಬೇಡ ಇಲ್ಲಿಂದಲೇ ನೋಡೋಣ'' ಅಂತಿದ್ದಳು. ಅವನಿಗೊಂದೂ ಅರ್ಥ ಆಗ್ತಿರಲಿಲ್ಲ.

ಅತ್ತೆ ಅವನಿಗೆ ತಂಗಳು ತಿನ್ನಿಸಿ ತಾನು ಮಂಕರಿ ಎತ್ತಿಕೊಂಡು ಎಣ್ಣೆ ಬೀಜ ಆಯ್ದುಕೊಂಡು ಬರೋಕೆ ಹೋಗಿದ್ದಳು. ಅವಳು ಹಿಂದಿರುಗಿ ಬರೋ ಹೊತ್ತಿಗೆ ನಾಟಕದವರ ಡೇರೆಗಳನ್ನ ನೋಡಿ ಬಂದುಬಿಡಬಹುದೆನ್ನಿಸಿತು ಎಲ್ಲನ್ನನಿಗೆ. ಅಲ್ಲಿಗೆ ಹೊರಟ.

ಆ ಡೇರೆಗಳ ಹತ್ತಿರ ತನ್ನ ಹಾಗೇ ಬಹಳ ಜನ ಗುಂಪು ಸೇರಿದ್ದರು. ನಾಟಕದವರ ಕಿರೀಟಗಳನ್ನ, ಅವರ ದಿರಿಸುಗಳನ್ನ ಅಗಲಗಣ್ಣುಗಳಿಂದ ನೋಡುತ್ತಿದ್ದರು. ಹಾಗೆ ಆಶ್ಚರ್ಯದಿಂದ ನೋಡುವವರ ಗುಂಪಿನೊಳಗೆ ತಾನೂ ಹೊಕ್ಕು ನಾಟಕದವರನ್ನ ನೋಡ್ತಿದ್ದ. ನಿಜವಾಗಲೂ ಅವರ ಕಿರೀಟಗಳು ವಿಚಿತ್ರವಾಗಿವೆ. ಅಷ್ಟರಲ್ಲಿ ಯಾರೋ ತನ್ನ ಕಡೆಗೇ ನೋಡುತ್ತಿದ್ದನ್ನ ಗಮನಿಸಿದ ಎಲ್ಲನ್ನ. ಹಾಗೆ ನೋಡುತ್ತಿದ್ದವ ನಿಧಾನವಾಗಿ ಮಾತು ತೆಗೆದ. "ನೀನು ಹೊಲೆಯ ಅಲ್ಲವೇನೋ!'' "ನಾನು ಎರ್ರೆಂಕನ ಮಗ.'' ಅಲ್ಲಿದ್ದವರೆಲ್ಲರೂ ಎಲ್ಲನ್ನನ ಕಡೆ ನೋಡಿದರು. ಅವನ ಜತೆ ಮಾತನಾಡಿದವನು ಸುಮ್ಮನಾಗಲಿಲ್ಲ, ತಾಳಿ [illegible] ಒಂದೇ ಸಮನೆ [illegible] ಮೇಲೆ [illegible] ಸುರಿದಂತಾಯಿತು. ಎಲ್ಲ [illegible] ಎಂದು ಅರ್ಥಮಾಡಿಕೊಳ್ಳುವ ಮುಂಚೆ ಸುತ್ತಲಿನವರೆಲ್ಲರೂ ಅವನ ಮೇಲೆ ಬಿದ್ದಂತೆ ಆಯಿತು. ತನಗೇ ಗೊತ್ತಿಲ್ಲದಂತೆ ಅವನು ಅಲ್ಲಿಂದ ಓಡಲು ಶುರು ಮಾಡಿದ. ಹಿಂದಿನಿಂದ ಅವರೆಲ್ಲಾ ಅಟ್ಟಿಸಿಕೊಂಡು ಬರುತ್ತಿರುವಂತೆ ಆಯಿತು. ಕಲ್ಲು ಬೀಸುತ್ತಿರುವಂತೆ ಆಯಿತು. ತನ್ನ ಸುತ್ತಲೂ ಕಲ್ಲುಗಳ ಮಳೆ. ಕಲ್ಲೊಂದು ಬಲವಾಗಿ ಹೊಡೆಯಿತು. ಓಟ ನಿಲ್ಲಲಿಲ್ಲ, ಯಾವ ದಿಕ್ಕಿನಲ್ಲಿ ಓಡ್ತಾ ಇದೀನಿ ಅನ್ನೋದೂ ತಿಳಿಯದೇ ಓಡುತ್ತಲೇ ಇದ್ದ. ದೂರ, ದೂರ ಊರು ಕಾಣಿಸದಷ್ಟು ದೂರ ಓಡುತ್ತಲೇ ಇದ್ದ. ಪೊದೆಗಳನ್ನು ಹಾರಿದ. ಮುಳ್ಳುಗಳನ್ನು ತುಳಿದ, ಗುಡ್ಡಗಳನ್ನು ಏರಿದ. ಕಾಲುವೆಗಳನ್ನು ಹಾರಿದ. ಎಡವಿ ಬಿದ್ದು ಕಲ್ಲಿಗೆ ತಗಲಿ ಮೂಗು ಒಡೆಯಿತು, ನೆತ್ತರು ಹರಿಯಿತು, ಮೊಣಕಾಲ ಚಿಪ್ಪು ಸೀಳಿತು, ಪಾದಗಳು ಪಾದಗಳಂತಿರಲಿಲ್ಲ, ಕೆಂಪು ಚಂದನದ ಹೆಕ್ಕಳಿಕೆಯಂತಾದವು. ಆದರೂ ಓಟ ಮಾತ್ರ ನಿಲ್ಲಲಿಲ್ಲ, ಹಾದಿಯಲ್ಲಿ ಹೊಳೆ ಅಡ್ಡಬಂತು. ಆದರೂ ನಿಲ್ಲಲಾಗದು. ಓಡುತ್ತಲೇ ನೀರಿಗೆ ಹಾರಿದ. ನೀರು ಮೊಳಕಾಲಿನವರೆಗೂ ಬಂದಿತು, ಇನ್ನೂ ಮುಂದೆ ನಡೆದ; ಭುಜಗಳವರೆಗೂ ಏರಿತು. ವಿಚಿತ್ರ. ತನ್ನ ಸುತ್ತಲ ನೀರೆಲ್ಲಾ ಕೆಂಪು. ಕಪ್ಪು ಭುಜದ ಮೇಲೆ ಕೆಂಪು ಗೀರುಗಳು. ಆ ಬಿಸಿಲಲ್ಲಿ ವಿಕಾರವಾಗಿ ಕಾಣಿಸುತ್ತಿದ್ದವು. ಇನ್ನೂ ಆಳಕ್ಕೆ ನಡೆದ. ಕೈಗಳನ್ನು ಮೇಲೆತ್ತಿಕೊಂಡ. ಕುತ್ತಿಗೆ ಸುತ್ತಲೂ ನೆತ್ತರ ಚಿತ್ತಾರ. ನಿಧಾನವಾಗಿ ಏನೋ ಬದಲಾವಣೆ. ಒಂದೇ ಸಾರಿ ದಡ ಸೇರಿದಂತೆ. ನೀರಿನ ಆಳ ಕಡಿಮೆಯಾಗತೊಡಗಿತು. ಕುತ್ತಿಗೆಯಿಂದ ಭುಜಕ್ಕೆ, ಎದೆಗೆ, ನಡುವಿನ ಎತ್ತರಕ್ಕೆ ಇಳಿದು ಕೊನೆಗೆ ಎಲ್ಲನ್ನ ನೀರಿನಿಂದ ಆಚೆಗೆ ದಡಸೇರಿದ. ದಡ ಸೇರಿದ ನಂತರ ನೋಡಿಕೊಂಡರೆ ಕಟ್ಟಿಕೊಂಡಿದ್ದ ಲಂಗೋಟಿಯೇ ಇರಲಿಲ್ಲ, ಅದು ನೀರಿನಲ್ಲಿ ಎಲ್ಲಿ ತೇಲಿ ಹೋಯಿತೋ! ಹುಚ್ಚನಂತೆ ನೋಡಿಕೊಂಡ. ಬರಿಮೈಲೇ ಹೊಳೆಯ ದಡದಲ್ಲಿ ನಡೆದ.

ಹೊಳೆಗೆ ಈ ಕಡೆ ಎಲ್ಲನದಿನ್ನೆ. ಆ ಕಡೆ ಯಾವ ಊರು? ಗೊತ್ತಿಲ್ಲ, ದಾರಿಯಂತೂ ಇದೆ. ತಾನು ಆ ಹಾದಿ ಹಿಡಿಯಬಹುದೋ ಇಲ್ಲವೋ ಗೊತ್ತಿಲ್ಲ.

(ಮುಂದುವರೆಯುತ್ತದೆ)



ಬಿ. ಚಂದ್ರೇಗೌಡ

ಬೆಂಕಿಪೊಟ್ಟಣ ಮತ್ತು ಎಲ್ಲೂ ಹೋಗಲಾರದಷ್ಟು ಚಿಲ್ಲರೆ ಕಾಸು. ಈ ವಸ್ತುಗಳ ಪತ್ತೆಯಿಂದ ನಿರಾಶೆಗೊಂಡ ಭದ್ರತಾಪಡೆ ಆತನನ್ನು ಬಿಟ್ಟು ಕಳಿಸಿತ್ತು. ತನ್ನ ಬಿಡುಗಡೆ ಬಗ್ಗೆ ಆತ್ಮವಿಶ್ವಾಸದಿಂದಲೇ ಕುಳಿತಿದ್ದ ಕಾಳಣ್ಣ ಭದ್ರತಾಪಡೆ "ಅರೆ ಜಾವ್'' ಎಂದಾಗ, "ಬತ್ತೀನಿ ಸ್ವಾಮಿ'' ಎಂದು ನೆಂಟರಿಗೆ ಹೇಳಿದಷ್ಟೇ ಸಲೀಸಾಗಿ ಹೇಳಿಬಂದಿದ್ದ.

ಈ ಕಾಳಣ್ಣ ನನಗೆ ಸಂಬಂಧಿಯಾಗಬೇಕಿದ್ದರಿಂದ ವಿಮಾನದ ಬಗ್ಗೆ ನನಗೂ ಇವನಷ್ಟೇ ಕುತೂಹಲವಿದ್ದರೂ ಎಂದೂ ಅದರಲ್ಲಿ ಕೂರುವ ಸಾಹಸ ಮಾಡಿರಲಿಲ್ಲ, ಲೇಹ್‌ನಲ್ಲಿ 'ಸೈನಿಕ' ಚಿತ್ರ ತೆಗೆಯುತ್ತಿದ್ದ ಯೋಗೀಶ್ವರ್ ಎಂಬ ನಟ ಕರೆದಾಗಲೂ ಹೋಗಲಾಗಿರಲಿಲ್ಲ. ಆದರೆ ಈಗ "ಚೆನ್ನೈನ ಪ್ರಸಾದ್ ಸ್ಟುಡಿಯೋಗೆ ಹೋಗಿ 'ಅವ್ವ'ನನ್ನು ನೋಡಿಕೊಂಡು ಬರೋಣ'' ಎಂದು ಕವಿತಾ ಲಂಕೇಶ್ ಫೋನ್ ಮಾಡಿ ಹೇಳಿದಾಗ – ಅದರಲ್ಲೂ ಫ್ಲೈಟ್‌ನಲ್ಲಿ ಹೋಗೋಣ ಎಂದಾಗ — ನಾನು ಕೂಡಲೇ ಹೊರಟುಬಿಟ್ಟೆ.

ಕವಿತಾ ಮನೆಯಿಂದ ಬೆಂಗಳೂರು ವಿಮಾನ ನಿಲ್ದಾಣ ತಲುಪಿದಾಗ ಕೆಎಸ್‌ಆರ್‌ಟಿಸಿ ಬಸ್ಸ್ಟಾಂಡಿಗೇ ಬಂದ ಅನುಭವವಾಯ್ತು, ಅಷ್ಟೊಂದು ಜನ. ತಮ್ಮ ತಪಾಸಣೆಗೆ ಕ್ಯೂನಲ್ಲಿ ನಿಂತ ಜನರ ಸಂತೆ ನೋಡಿ ಏರ್‌ಪೋರ್ಟ್ ಬಗ್ಗೆ ಇದ್ದ ಕುತೂಹಲ ಅರ್ಧ ಕಡಿಮೆಯಾಯ್ತು, ನಾವು ಮನೆಬಿಟ್ಟದ್ದು ಏಳುಗಂಟೆಗೆ, ಫ್ಲೈಟ್ ಹೊರಟದ್ದು ಹತ್ತೂವರೆಗಂಟೆಗೆ. ನೂರಾರು ಸಂದನ್ನು ತಪಾಸಣೆ ಮಾಡಿಸಿಕೊಂಡ ನಂತರ ವಿಮಾನದೊಳಕ್ಕೆ ತೆಗೆದುಕೊಂಡು ಹೋಗಿ ತುಂಬುವ ಬಸ್ಸು ಬಂತು. ವಿಮಾನದಲ್ಲಿ ಹೋಗಬೇಕೆಂದರೆ ಬಸ್ಸಿನ ಪ್ರಯಾಣವೂ ಕಡ್ಡಾಯ! ಮನೆಯಿಂದ ಏರ್‌ಪೋರ್ಟ್‌ಗೆ ಟ್ಯಾಕ್ಸಿ, ಅಲ್ಲಿಂದ ಬಸ್ಸು ನಂತರ ಫ್ಲೈಟ್, ಮತ್ತೆ ಚೆನ್ನೈನಲ್ಲಿ ಅದೇ ರಿಪೀಟ್. ಇದನ್ನೆಲ್ಲಾ ನೋಡಿದರೆ ಟ್ಯಾಕ್ಸಿಯಲ್ಲೇ ಚೆನ್ನೈಗೆ ಹೋಗಿ ಬರಬಹುದಿತ್ತು ಎಂದು ಕವಿತಾ ಹೇಳಿದಾಗ ಹೌದು ಎನ್ನಿಸಿತು.

ಮೊದಲ ಬಾರಿ ವಿಮಾನವೇರಿದ ನನ್ನನ್ನು ಕವಿತಾ ಕಿಟಕಿ ಪಕ್ಕ ಕೂರಿಸಿದರು. ನಿಧಾನಕ್ಕೆ ಹೊರಟ ಜೆಟ್ ವೇಗಗಳಿಸಿಕೊಂಡು ಇದ್ದಕ್ಕಿದ್ದಂತೆ ಭೂಮಿ ಸಂಪರ್ಕ ಕಡಿದುಕೊಂಡಿತು. ಸಹಜ ಆಕಾರದಲ್ಲೇ ಕಾಣುತ್ತಿದ್ದ ಕಟ್ಟಡಗಳು ಬೆಂಕಿಪೆಟ್ಟಿಗೆಯಂತಾಗಿ ಹೊಲಗಳೆಲ್ಲಾ ಕರವಸ್ತ್ರದಗಲ ಕಂಡು ಪ್ರಾಣ ಹೋಗುತ್ತಿರುವ ಅನುಭವವಾಯ್ತು, ಹೊಟ್ಟೆ ನಡುಗಲಾರಂಭಿಸಿತು. ಕಡೆಗೆ ಭೂಮಿಯನ್ನೇ ನೋಡುವುದನ್ನು ಬಿಟ್ಟು ಸೀಟಿಗೆ ಒರಗಿಕೊಂಡು ಕಣ್ಮುಚ್ಚಿದೆ. ಧೈರ್ಯ ಮಾಡಿ ಕಣ್ಣು ತೆರೆದಾಗ ಭೂಮಿ ಮಂಗಮಾಯವಾಗಿತ್ತು, ಇಡೀ ಭೂಮಂಡಲವೆಲ್ಲಾ ಬೆಳ್ಳಿಬಣ್ಣದ ಹತ್ತಿರಾಶಿಯಿಂದ ಮುಚ್ಚಿಹೋಗಿತ್ತು, ಮೇಲೆ ಮತ್ತದೇ ನೀಲಶುಭ್ರ ಆಕಾಶ!

ಆದರೂ ಆಗಾಗ್ಗೆ ಹರುಕಲುಮೋಡದ ದೆಸೆಯಿಂದಾಗಿ ಭೂಮಿ ಭಾವಿಯೊಳಗಣ ನೆಲದಂತೆ ಕಂಡು ಮರೆಯಾಗುತ್ತಿತ್ತು, ಅಷ್ಟರಲ್ಲಿ ಈ ನೆಲದವರೇ ಅಲ್ಲದಂತಿದ್ದ ಗಗನಸಖಿಯರು ಕಿತ್ತಲೇ ರಸ, ಚಾಕಲೇಟ್ ತಂದು ಮಾರುವವರಂತೆ ಕೊಟ್ಟರು. ಕಿತ್ತಲೇ ರಸಕ್ಕೆ ಕಿತ್ತಲೆ ಸ್ವಾದವಿರಲಿಲ್ಲ, ಚಾಕಲೇಟ್ ಎಂಬುದನ್ನು ಬಾಯಿಗೆ ಹಾಕಿಕೊಂಡಾಗ ಹುಣಸೇ ಹಣ್ಣು ತಿಂದಂತಾಯಿತು. ಹೊಟ್ಟೆ ತೊಳಸಿದ ಅನುಭವ ಜೊತೆಗೆ ಮೂತ್ರಬಾಧೆ!

ಕಿಟಕಿಯಿಂದ ನೋಡಿದರೆ ಎಲ್ಲವೂ ನಿಶ್ಚಲವಾಗಿದೆ. ಫ್ಲೈಟ್ ಒಂದಗುಲವೂ ಮುಂದೆ ಸರಿಯುತ್ತಿಲ್ಲ, ಕಣ್ಮುಚ್ಚಿಯಾದರೂ ಹಾರಾಡುವ ಮಜ ತೆಗೆದುಕೊಳ್ಳೋಣವೆಂದರೆ ಇದ್ದಕ್ಕಿದ್ದಂತೆ ಫ್ಲೈಟ್ ನಡುಗಿತು. ನಾನು ಗಾಬರಿ ಕಣ್ಣಿಂದ ಗಗನಸಖಿಯರನ್ನ ನೋಡಿದೆ. ಅವರು ಆರಾಮವಾಗಿ ತಮ್ಮ ಕೆಲಸ ಮಾಡುತ್ತಿದ್ದರು. ನಾನು ಗಾಬರಿಗೊಂಡಿರುವುದನ್ನು ಗಮನಿಸಿದ ಕವಿತಾ ಒಳಗೊಳಗೇ ನಗುತ್ತಾ "ಪ್ಲೇನ್ ಮೋಡದೊಳಗೆ ಹೋಗುವಾಗ ಒಮ್ಮೊಮ್ಮೆ ಹಾಗೆ ಶಬ್ದ ಮಾಡುತ್ತೆ, ಹೆದರಬೇಡಿ ಗೌಡ್ರೆ'' ಎಂದರು.

ಆದರೂ ನನ್ನ ಕಿಟಕಿ ಹೊರಗೆ ಕಾಣುತ್ತಿದ್ದ ವಿಮಾನದ ರೆಕ್ಕೆ ಮೇಲೇಳತೊಡಗಿತು. ವಿಮಾನ ಓರೆಯಾಗಿ ಬಲಕ್ಕೆ ತಿರುಗಿಕೊಳ್ಳುತ್ತ ಮತ್ತೂ ಭಯ ಹುಟ್ಟಿಸಿತು. ಹೀಗೆಂದು ನಾನು ಸಾವಿಗೆ ಹೆದರುತ್ತೇನೆ ಎಂದಲ್ಲ. ಸಾವನ್ನು ಗೆದ್ದಂದಿನಿಂದಲೇ ನಿಜವಾದ ಬದುಕು ಆರಂಭವಾಗುತ್ತದೆಂದು ಮಹಾನುಭಾವರು ಹೇಳಿರುವ ಮಾತನ್ನು ಆಗಾಗ್ಗೆ ನೆನಪಿಸಿಕೊಳ್ಳುತ್ತಲೇ ಇರುತ್ತೇನೆ. ಆದರೆ ನನ್ನ ಭಯವಿದ್ದದ್ದು ಸಾವಿನ ಕ್ರಮದ ಬಗ್ಗೆ. ನಮ್ಮ ದೇಶದ ಕಾನಿಷ್ಕ ಫ್ಲೈಟ್ ಸಾವಿರಾರು ಅಡಿ ಎತ್ತರದಲ್ಲಿ ಸ್ಫೋಟಗೊಂಡು ಅದರಲ್ಲಿದ್ದ ಜನರೆಲ್ಲಾ ಅಟ್ಲಾಂಟಿಕ್ ಸಾಗರಕ್ಕೆ ಬೀಳುತ್ತಿರುವ ದೃಶ್ಯ ಇಪ್ಪತ್ತು ವರ್ಷಗಳಾದರೂ ನೆನಪಲ್ಲಿ ನುಗ್ಗಿ ಬರುತ್ತಿರುವುದರಿಂದ ಈ ಜೆಟ್ ಏರ್‌ವೇಸ್‌ನಲ್ಲಿ ಹೋಗುತ್ತಿರುವಾಗಲೂ ಅದು ನೆನಪಿಗೆ ಬರಬೇಕೆ!

ಅವರೇನೋ ಸಮುದ್ರಕ್ಕೆ ಬಿದ್ದು ಕೆಲವು ಅಡಿ ಕೆಳಕ್ಕೆ ಹೋಗಿ ನಂತರ ಮೇಲೆ ಬಂದರು. ಇಲ್ಲಿ ನಾನು ತಮಿಳುನಾಡು ಹೊಲ ಅಥವಾ ಮರದ ಮೇಲೆ ಬಿದ್ದರೆ ಗತಿಯೇನು ಎಂದೆಲ್ಲಾ ಯೋಚಿಸುವಾಗ ಬೆಂಕಿಪಟ್ಟಿಗೆ ಆಕಾರದ ಕಟ್ಟಡಗಳು ಸಹಜ ಆಕಾರ ಪಡೆದುಕೊಳ್ಳತೊಡಗಿದವು. ವಿಮಾನ ತಮಿಳುನಾಡು ನೆಲ ಮುಟ್ಟಿ ತಪ್ಪಿಸಿಕೊಂಡು ಬಂದಂತೆ ಓಡತೊಡಗಿತು. "ಅರೆ, ಆಗ್ಲೆ ಚೆನ್ನೈ ಬಂದೇಬಿಟ್ಟಿತು. ಮುಕ್ಕಾಲುಗಂಟೆನೂ ಆಗಲಿಲ್ಲ'' ಎಂದು ಉದ್ಗಾರ ತೆಗೆದು ಪ್ರಸಾದ್ ಸ್ಟುಡಿಯೋ ಕಡೆ ಟ್ಯಾಕ್ಸಿಯಲ್ಲಿ ಹೊರಟೆವು. ಆದರೆ ನನಗೆ ಯಾವ ಕಾರಣಕ್ಕೂ ನಾನು ತಮಿಳುನಾಡಿನಲ್ಲಿ ಇದ್ದೇನೆ ಅನ್ನಿಸಲಿಲ್ಲ. ಬೆಂಗಳೂರಿನ ಪೂರ್ವ ದಿಕ್ಕಿನ ಯಾವುದಾದರೂ ಭಾಗದಲ್ಲಿ ಸಂಚರಿಸುವ ಅನುಭವವಾಯ್ತು. ಅಷ್ಟರ ಮಟ್ಟಿಗೆ ತಮಿಳರು ನಮ್ಮ ಬೆಂಗಳೂರನ್ನ ತಮಿಳುನಾಡು ಮಾಡಿದ್ದಾರಲ್ಲ ಅನ್ನಿಸಿತು.

ಚೆನ್ನೈನ ಪ್ರಸಾದ್ ಸ್ಟುಡಿಯೋದಲ್ಲಿ ನಮ್ಮ ದೇಶದ ಪ್ರತಿಭಾವಂತ ಕ್ಯಾಮರಾ ಕಲಾವಿದ ಮಧು ಅಂಬಟ್ ಮತ್ತವರ ಕುಟುಂಬ ಹಾಗೂ ಹಿನ್ನೆಲೆ ಸಂಗೀತ ನಿರ್ದೇಶಕ ಐಸಾಕ್‌ರವರ ಜೊತೆ 'ಅವ್ವ' ನೋಡಿದ ನಂತರ, ಭಾಷೆ ಅರಿವಾಗದಿದ್ದರೂ ಸಿನಿಮಾ ಭಾಷೆಯಲ್ಲಿ ಚಿತ್ರ ನೋಡಿ ಮೆಚ್ಚಿಕೊಂಡ ಮಧು ಮತ್ತು ಐಸಾಕ್‌ರ ಕುಟುಂಬ ಕವಿತಾರನ್ನ ಮೆಚ್ಚಿ ಹರಸಿ ಹೋದರು. ಒಬ್ಬ ಚಿತ್ರದಲ್ಲಿನ ಬೈಗುಳ ಮೆಚ್ಚಿಕೊಂಡು "ಮುಂಡೆ ಮಗ ನಲ್ಲ ಇರಕ್ಕು'' ಎಂದು ನಗುತ್ತಾ ಹೋದ.

ನಾವು ಮತ್ತೆ ಬೆಂಗಳೂರಿಗೆ ಹೊರಟೆವು. ಈ ಬಾರಿ ಸಿಕ್ಕಿದ್ದು ವಿಜಯ್ ಮಲ್ಯನ ಕಿಂಗ್‌ಫಿಷರ್ ಫ್ಲೈಟ್. ಇದರಲ್ಲಿ ಒಂದೇ ತರ ಕಾಣುತ್ತಿದ್ದ ಗುಲಾಬಿ ಕೆನ್ನೆಯ, ಸುಂದರ ಕಾಲುಗಳ ಗಗನಸಖಿಯರಿದ್ದರು. ಅವರು ಕೊಡುವ ಊಟವನ್ನು ಬೇಡ ಎನ್ನಲಾಗಲಿಲ್ಲ, ತೆಗೆದುಕೊಂಡು ಗುನ್ನಾ ಪಟ್ಟ ಕವರ್ ಬಿಚ್ಚಿದರೆ, ಮೂರು ಚಿಕನ್ ಪೀಸು, ಒಂದಿಡಿ ಅನ್ನ, ಪಕ್ಕದಲ್ಲಿ ಬೇಳೆ ತೊವ್ವೆ. ಆ ಚಿಕನ್ ಪೀಸನ್ನು ಹತ್ತಿಯಿಂದ ತಯಾರಿಸಿದಂತಿದ್ದು ತಿನ್ನಲಾಗಲಿಲ್ಲ, ಬೇಳೆ ತೊವ್ವೆಯಂತೂ ಮಕ್ಕಳ ಅಮೇಧ್ಯಕ್ಕೆ ಉಪ್ಪು ಮೆಣಸು ಹಾಕಿದಂತಿತ್ತು. ಒಟ್ಟಿನಲ್ಲಿ ಅದು ಗಗನದಲ್ಲಿ ತಿಂದು ಹಾರಾಡುವವರ ಆಹಾರವೇ ಹೊರತು ನಮ್ಮಂತೆ ಭೂಮಿಯಲ್ಲಿ ಬದುಕುವವರು ತಿನ್ನುವಂತಹ ಆಹಾರವಲ್ಲ, ಇದನ್ನ ಸ್ವರ್ಗದ ಆಹಾರವೆಂತಲೂ ಕರೆಯಬಹುದು.

ಹೀಗೆ ಯೋಚಿಸುತ್ತಾ ಕೆಳಕ್ಕೆ ನೋಡಿದರೆ ಬೆಂಗಳೂರ ಮೇಲೆ ಕಿಂಗ್‌ಫಿಷರ್ ಹಾರಾಡುತ್ತಿದೆ! ರನ್‌ವೇನಲ್ಲಿ ಬೇರಾವುದೋ ಫ್ಲೈಟ್‌ಗೆ ಬೆಂಕಿ ಹೊತ್ತಿರುವುದರಿಂದ ಇನ್ನು ನಲವತ್ತೈದು ನಿಮಿಷ ಬೆಂಗಳೂರ ಮೇಲೆ ಕಿಂಗ್‌ಫಿಷರ್ ಹಾರಾಡಬೇಕಿದೆ ಎಂದು ಪೈಲೆಟ್ ದಪ್ಪ ಮಡಿಕೆ ದನಿಯಲ್ಲಿ ಹೇಳಿದ. ನಿಜಕ್ಕೂ ಮಜಾ ಅನ್ನಿಸಿತು. ಆದರೆ ಸ್ವಲ್ಪ ಹೊತ್ತಿನ ನಂತರ "ಅಷ್ಟು ಸಮಯ ಹಾರಾಡುವ ಪೆಟ್ರೋಲ್ ಇಲ್ಲ, ಬೇಗ ಇಳಿದರೆ ಸರಿ ಇಲ್ಲವೆಂದರೆ ವಾಪಸು ಚೆನ್ನೈಗೆ ಹೋಗಬೇಕು'' ಎಂದು ಅದೇ ದನಿ ಹೆದರಿಸಿತು. ತುಸು ಹೊತ್ತಿನ ನಂತರ ಇನ್ನು ಹದಿನಾಲ್ಕು ನಿಮಿಷದಲ್ಲಿ ಇಳಿಯುತ್ತೇವೆ ಎಂದ ಆತ ಮತ್ತೆ ಹೇಳಿದಾಗ "ಸದ್ಯ'' ಎಂದು ನಿಟ್ಟುಸಿರು ಬಿಟ್ಟೆ.

ಆಕಾಶದಿಂದ ಬೆಂಗಳೂರನ್ನು ನೋಡಿದಾಗ [illegible] ಆಕಾಶವಾಗಿ ಕಂಡು ಕುವೆಂಪು ಬರೆದ ಸಾಲು ನೆನಪಿಗೆ ಬಂತು. ಕುವೆಂಪು ಒಮ್ಮೆ ರಾತ್ರಿಯಲ್ಲಿ ಆಕಾಶ ನೋಡಿ ಬಾನ ತುಂಬ ಕಿಕ್ಕಿರಿದ ಚುಕ್ಕಿ ನೋಡಿ "ಬಾನಿನ ಮೈಯಲ್ಲಿ ಬೆಳ್ಳಿಯ ತುರಿಗಜ್ಜಿ'' ಎಂದಿದ್ದರು. ಅವರೇ ನನಗಾದಿನ ರಾತ್ರಿ ಕಂಡಿದ್ದು ಭೂಮಿಯ ಮೈಯಲ್ಲಿ ಬೆಳ್ಳಿಯ ತುರಿಗಜ್ಜಿಯ ಜೊತೆಗೆ [illegible] ಗಾ[illegible]

ಕ್ಯಟ್ಟ ಕ್ಯಲಸ ಮಾಡೋರ್ಯಲ್ಲ ಜೆಡಿಎಸ್ಸು ಅಂತರಲ್ಲಾ!

ಮೆಂಷ್ಣ ಸಮೀಪದ ಊರಿನ ರಾಮಕೃಷ್ಣ ಎನ್ನುವವನು ನೂರಾರು ಮದುವೆಯಾಗಿ ವಂಚಿಸಿದ್ದಾನೆ ಎಂಬ ಸುದ್ದಿ ಕೇಳಿ ಅಚ್ಚರಿಗೊಂಡಿದ್ದಲ್ಲದೆ ಅದನ್ನೇ ಕಾಳಮಾವ ಮತ್ತು ಸೀರಮಾವನಿಗೂ ಹೇಳುತ್ತಿದ್ದ ಜುಮ್ಮಿ ಉಗ್ರಿ ಬಂದ ಕೂಡಲೇ:

"ಲೋ ಉಗ್ರಿ, ನೋಡು ನೀನಿನ್ನು ಮದಿವಾಗಿಲ್ಲ, ಅವನ್ಯಾರೊ ಆಗ್ಲೆ ನೂರಾರು ಮದಿವಾಗಿದ್ದನಂತೆ" ಎಂದಳು.

"ಯಾರೆ ಅಂಗಂದೋರು?"

"ಟಿವಿಲಿ ಹೇಳ್ತ ಅವುರೆ ಕಂಡ್ಯ, ವತ್ತಾರಿಂದ ಸಂಜೆಗಂಟ ಅದ್ನೆ ಹೇಳಿದ್ರು."

"ಆ ಸೂಳೆಮಕ್ಕಳು ದುಃಖಪಡೊ ವಿಷಯನ್ನೆಲ್ಲ ತಮಾಷಿ ಮಾಡ್ತರೆ, ತಮಾಷಿ ಸುದ್ದಿನ ಗಂಭೀರವಾಗೇಳ್ತರೆ ಕಣೆ."

ಬಯಲು ಸೀಮೆಯ
ಕಟ್ಟೆ ಪುರಾಣ
ಬಿ. ಚಂದ್ರೇಗೌಡ

"ಆದ್ರು ಅವುನಿಗ್ಯಾರು ಹೆಣ್ಣು ಕೊಟ್ರುಲಾ?" ಎಂದ ಕಾಳಮಾವ.

"ಏ ಅವುನು ಮದಿವಾಗಿಲ್ಲ ಕಣಮಾವ. ಮದಿವಾಯ್ತನಿ ಅಂತ ಮಾತು ಮುಗಸೋನು, ವರದಕ್ಷಿಣೆ ಈಸಗಂಡು ಮುಂದಲೂರಿಗೋಗನು, ಅಲ್ಲೂ ಹಿಂಗೆ ಮಾಡಿಕಂಡು ತಿರಗುತಿದ್ದ ಹತ್ತು ದಿನ ಕಳ್ತನ ಮಾಡಿದೋನು ಒಂದಿನ ಸಿಗದಿಲವೆ? ಅಂಗೆ ಸಿಗಾಯ್ಕಂಡವುನೆ" ಎಂದ ಉಗ್ರಿ.

"ಅವುನು ಜೆಡಿಎಸ್ ಪಾರ್ಟಿಯೋನಂತೆ ನಿಜವೆ?"

"ಇತ್ತೀಚೆಗೆ ಕ್ಯಟ್ಟ ಕ್ಯಲಸ ಮಾಡೋರ್ಯಲ್ಲ ನಾನೂ ಜೆಡಿಎಸ್ಸು, ನನಿಗೆ ಕುಮಾರಸ್ವಾಮಿ ಗೊತ್ತು, ರೇವಣ್ಣ ನನ್ನ ಫ್ರೆಂಡು ಅಂತ ಹೇಳಿಕತ್ತರೆ ಕಣೆ."

"ಇವುರು ಅಂಗೆ ಅವುರಲ್ಲ ಬುಡು."

"ಆ ದ್ಯಾವೇಗೌಡನತ್ರ ಯಾವನಾರ ಮರಿಯಾದಿ ಇರೋನು ಇದ್ದನೆ? ಇದ್ದುದರಲ್ಲಿ ಕೆ.ಆರ್. ಪೇಟೆ ಕಿಷ್ಣ ಪರವಾಗಿಲ್ಲ ಅನ್ನಂಗಿದ್ದ ಅವುನು ಆತ್ತತ್ತ ಅನ್ನಂಗಾದ. ಇನ್ನ ಚೆಲುವ, ಚೆನ್ನಿಗ, ಅಂದಾನಿ, ಅಲ್ಲಂಗೂರು ಥೂ ಅವ ಈ ತಂಪೊತ್ತಿನಲ್ಲಿ ನ್ಯನಿಸಗಬಾರ್ದು ಬುಡೆ."

"ಅಂಗರೆ ಈಗ ನೂರಾರು ಮದಿವಾದೋನು ಜೆಡಿಎಸ್ ಅಲ್ಲ ಅನ್ನು?"

"ಅಂಥೋರ ಜೆಡಿಎಸ್ ಅನ್ನಂಗಿಲ್ಲ ಕಣೆ. ಯಲ್ಲಾ ಪಾರ್ಟಿಲೂ ಇರತರೆ, ಮುಖ್ಯವಾಗಿ ರೂಲಿಂಗ್ ಪಾರ್ಟಿಲಿರತರೆ."

"ಅದ್ಯಲ್ಲಾ ಇರ್ಲಿ, ಹೆಣ್ಣೆತ್ತೋರ್‍ಯಾಕೆ ಇಂತ ದಡ್ಡ ಸೂಳೆಮಕ್ಕಳಾಗ್ಯವುರೆ?" ಎಂದ ಕಾಳಮಾವ.

"ಮದ್ದಿಂದ ಅವುರಂಗೆ ಅಲವೆ ಮಾವ? ಯಾವನಾರ ಹೆಣ್ಣು ಕೇಳಕೆ ಬಂದ್ರು ಅಂದ್ರೆ ಸಾಕು ಕೂಡ್ಲೆ ಒಪ್ಪಿಗತ್ತವೆ. ಅವುನ್ಯಾರು, ಎಲ್ಲಿಂದ ಬಂದ, ಕುಲಗೋತ್ರ ಏನು ಯಾವುದ್ನು ಕೇಳದಿಲ್ಲ, ಮಾತು ಕತಿಯಾದ ಎಂಟೇ ದಿನಕೆ ಮದುವೆ ಮಾಡಿ ಕಳುಸ್ತರೆ. ಅಂಗಾದ್ರೆ ಇನ್ಯಂಗಾದತೂ ಅಂತ?" ಎಂದು ಜುಮ್ಮಿ ತೀರ ಅನುಭವಸ್ಥೆಯಂತೆ ಮಾತನಾಡುವಾಗ ನಗಾಡಿದ ಉಗ್ರಿ,

"ನಿಂದೊಂಚೂರ ತಿರುಗಿ ನೋಡಿಕಳೆ ಇನ್ನಬ್ಬರಿ ಗೇಳ್ತಿಯಲ್ಲಾ, ನಂಜುಂಡಪ್ಪನು ನೀನು ಒಂದು ಜೋಡಿನೆ?" ಎಂದ.

"ಇಸಿಸಿ ಜೋಡಿನೆ ಕಂಡ್ಲ, ಅದೇನು ಅವುರ ಮಾಡಿಕಂಡಿದ್ದೆ ಅಂಗನೋಡಿದ್ರೆ ಅವುರ ದೇವುರೆ ಜ್ವತೆ ಹಾಕ್ಯವುನೆ ಇಲ್ದೆಯಿದ್ರೆ ನಂಜುಂಡಪ್ಪನ ಮನೆ ಉದ್ಧಾರಾಯಿತ್ತೆ?" ಎಂದ ಕಾಳಮಾವ.

"ತಿಳಕಂಡೇನ್ಲ?" ಎಂದಳು ಜುಮ್ಮಿ.


"ತಿಳಕಂಡೆ ಬುಡು. ನೀನು ಸರಿಯಾದೊನ್ನ ಮದಿವಾಗಿದ್ರೆ ನನಿಗೆಲ್ಲಿ ಸಿಗತಿದ್ದೆ?" ಎಂದು ಗೊಣಗಿಕೊಂಡ.

"ಏನಂದ್ಲ?"

"ವಳ್ಳೆ ಜೋಡಿ ಬುಡು ನಿಂದು. ಅಂಗೆ ಕುಮಾರಸ್ವಾಮಿ ಅನಿತಕ್ಕನ ಜೋಡಿಯಂಗಿದ್ದಿರಿ."

"ಆಹಹ ಹೋಲಿಕೆ ಮಾಡಕ್ಯೆ ಇನ್ಯಾರು ಸಿಗಲಿಲ್ವೆ ನಿನಿಗೆ?"

"ಅಂಗಲ್ಲ ಕಣೆ, ನಂಜುಂಡಪ್ಪನೂ ಒಂದೊಂದಿನ ಮನೆಲಿ ಮನಗದಿಲ್ಲ, ವಲ ಕ್ವಟಗೆ ಜಗಲಿ ಹುಡಿಕಂಡೋಯ್ತನೆ. ಅದ್ಕೆ ಕುಮಾರಸ್ವಾಮಿಗೋಲಿಸಿದೆ" ಎಂದು ಉಗ್ರಿ ನಗಾಡಿದ.



"ಕುಮಾರಸ್ವಾಮಿತ ಇದ್ದ ಯುಮ್ಯೆಲ್ಲೆಗಳೆಲ್ಲ ವಂಟೋಯ್ತಾಯಿದ್ದರಂತಲ್ಲಾ, ನಿಜವೆ?"

"ಸಂತೆ ಮುಗಿತಲ್ಲ, ಇನ್ಯಾಕಿದ್ದರಲ್ಲೀ? ದ್ಯಾವೇಗೌಡ ಸುಂಕ ತಗಂಡು ಗೂಡಾರ ಹಾಕಿ ಯಾಪಾರ ಮಾಡಿಕಳಿ, ಅವುಕಾಸ ಕೊಟ್ಟಿದ್ದ, ಅವುನ ದೈಸಿಂದ ಅವುನಿಗೂ ಕಾಸಾದೊ ಇವುಕು ಜೇಬು ತುಂಬತು. ಇನ್ನೊಂದು ಸಂತೆ ಹುಡಿಕಂಡು ವಂಟವೆ ಅತ್ಲಾಗೆ."

"ಅಂಗಂತಿಯಾ?"

"ಇನ್ನೇನು ಮತ್ತೆ, ಸಂತೆ ಮುಗದ ಮ್ಯಾಲೂ ಇರಕ್ಕೆ, ದ್ಯಾವೇಗೌಡನ ಮಕ್ಕಳತ್ರ ಯಾವ ಇಚಾರ ಇದ್ದತೂ. ವೈರಿಗಳ ಸೃಷ್ಟಿ ಮಾಡಿಕಬೇಕು. ಅವುರ ವಿರುದ್ಧ ಹೋರಾಡಬೇಕು. ಅವುರ ಹುಟ್ಟಡಗಿಸಬೇಕು. ಇದೇ ತಾನೆ ದ್ಯಾವೇಗೌಡ ಕಲಿಸಿರೊ 'ರಾಜಕಾರಣ."

"ನಿಜ ಕಂಡ್ಯ" ಎಂದ ಸೀರ ಏನೊ ಹೊಳೆದವನಂತೆ.

"ಅವುರು ವೈರಿಗಳಿಲ್ದೆ ಜೀವನನೆ ಮಾಡಕ್ಯಾಗದಿಲ್ಲ ಅನ್ನೊ ಸ್ಥಿತಿಗೆ ಬಂದೋಗ್ಯವುರೆ ಕಣೊ. ಸೀರಮಾವ, ಈಗಾಗ್ಲೆ ರಾಜಕಾರಣಿಗಳ ಹ್ಯಗೆನಿಷ್ಟು ಮಾಡಿಕಂಡಿದ್ರು ಈಗ ನೋಡು ಸ್ವಾಮಿಗಳನೂ ಎದರಾಯ್ಕಂಡ್ರಂತೆ."

"ಯಾವ ಸ್ವಾಮಿಗಳು?"

"ಲಿಂಗಾಯಿತ್ರ ಸ್ವಾಮಿಗಳ್ಯಲ್ಲ ಸಿಟ್ಟಾಗಿದ್ದರಂತೆ."

"ಆಗ್ಲಿಬುಡ್ಯ, ಅವುರ್‍ಯಾಕ್ ರಾಜಕಾರಣ ಮಾಡಕ್ಕೆ ಬರಬೇಕು? ಯಾವ ಸರ್ಕಾರ ಬಂದ್ರೇನು ಅಂತ ಮುಕಳಿ ಮುಚಗಂಡಿರಕ್ಯಾಗದೆ" ಎಂದು ಸೀರ ಸಿಟ್ಟಾದ.


"ಸ್ವಾಮಿಗಳಿಗಂಗ್ಯಲ್ಲ ಅನ್ನಬ್ಯಾಡ ಕಣೊ."

"ಅನ್ನೊ ಅಂತ ಕ್ಯಲಸ ಅವುರ್‍ಯಾಕ್ಲ ಮಾಡಬೇಕು? ಜನಗಳ ಕಾಲಿಗೆ ಬೀಳಿಸಿಗಳೊ ಅಂತ ಮನ್ಸ ಯಂಗಿರಬೇಕು? ಕಾಗೆ ಸಂಗ ಮಾಡಿ ಗರುಡಪಕ್ಷಿ ಹೇಲತಿನ್ನದ ಕಲಿತು ಅಂತ ಈ ರಾಜಕಾರಣಿಗಳ ಸವಾಸಕ್ಕೆ ಅವುರ್‍ಯಾಕ್ ಬರಬೇಕು?"

"ಸೀರ ಚಿಗಪ್ಪ ಹೇಳೊ ಮಾತಲ್ಲೂ ಸತ್ಯ ಇದೆ ಕಣೊ ಉಗ್ರಿ" ಎಂದು ವಾಟಸ್ಸೆ ಬಂದ.

ಭೂಕಬಳಿಕೆ ಆಧ್ಯಾತ್ಮ!

ಸೋಮಾರಿತನವೇ ಮೂರ್ತಿವೆತ್ತಂತೆ ಇದ್ದ ಇದು ಆವತ್ತು ಸಂಭ್ರಮದಲ್ಲಿತ್ತು. 'ಏನೋ ಮುಂಡೆಮಗನೆ ಇಷ್ಟು ಚಟುವಟಿಕೆಯಿಂದ ಇದ್ದೀಯಲ್ಲೋ' ಅಂತ ಪ್ರೀತಿಯಿಂದ ಕೆನ್ನೆ ಸವರಿದ ಮುದುಕಿ ತನ್ನ ಗಲ್ಲದ ಮೇಲೆ ಎರಡೂ ಕೈಬೆರಳುಗಳ ನಟಿಗೆ ಮುರೀತು. 'ಆರ್ಟ್ ಆಫ್ ಲಿವಿಂಗ್‌ಗೆ ಹೋಗ್ತಿದೀನಿ ಅಜ್ಜಿ' ಅಂತು ಇದು. 'ಹೋಗಿ ಬಾರೋ ಮುಂಡೇಮಗನೆ, ಬದುಕೋ ದಾರಿ ಕಲ್ತುಕೊಂಡು ಬಾರೋ' ಅಂತ ಹರಸಿತು ಅಜ್ಜಿ. 'ಅದಕ್ಕೇ ಹೋಗ್ತಿದೀನಿ ಅಜ್ಜಿ ಬದುಕುವ ಕಲೆ ಕಲ್ತುಬರೋಕೆ' ಅಂತ ಇದು ಉತ್ಸಾಹದಿಂದ ನುಡೀತು. ಎಲಎಲಾ ಇದೇನು ಸೋಜಿಗ ಇದು, ಮಾಜಿ ಮುಖ್ಯ ಮಂತ್ರಿಯವರು ಹಾಲಿಯಾಗಿದ್ದಾಗ ಕುರ್ಚಿಯನ್ನಲಂಕರಿಸಿದ್ದ ಸ್ವಾಮೀಜಿಗಳ ಪಾದಸ್ಪರ್ಶ ಮಾಡುತ್ತಿದ್ದ ಚಿತ್ರ ಪತ್ರಿಕೆಗಳಲ್ಲೆಲ್ಲ ಬಂದಿತ್ತಲ್ಲ ಅದರಿಂದ ಏನಾದರೂ ಪ್ರಭಾವಿತನಾದನೋ; ಅಥವಾ ಟಿವಿಗಳಲ್ಲಿ ಬರುವ 'ಬದುಕುವ ಕಲೆ' ಮೇಲಿನ ಉಪನ್ಯಾಸದಿಂದ ಪ್ರೇರೇಪಿತನಾದನೋ ತಿಳೀದೆ ಹೋಯ್ತು, ಪಕ್ಕಕ್ಕೆ ಕರೆದು ವಿಚಾರಿಸಿದಾಗ ಆ ಇದು 'ರಾಮ ಸ್ವಾಮಿ' ಅಂತ ಏನೇನೋ ಹೇಳ್ತ ಅವಸರದಿಂದ ಹೊರಟು ಹೋಯಿತು. ಟ್ಯೂಬ್‌ಲೈಟ್ ಹತ್ತಿಕೊಂಡಿತು. ಇದರ ಸಡಗರ ಸಂಭ್ರಮಕ್ಕೆ ಕಾರಣ ಇವು ಯಾವ್ಯೂ ಅಲ್ಲ ಪರಂತು ಎ.ಟಿ. ರಾಮಸ್ವಾಮಿ ನೀಡಿದ ವರದಿ ಅಂತ!



ಸಹಜವೇ. ರವಿಶಂಕರ ಗುರೂಜಿ ತಮ್ಮ ಆರ್ಟ್ ಆಫ್ ಲಿವಿಂಗ್‌ಗೆ ಅದೆಷ್ಟೋ ಎಕರೆ ಸರ್ಕಾರದ ಭೂಮಿಯನ್ನು ಬಳಸಿಕೊಂಡಿದ್ದಾರೆ ಅಂತ ಆ ವರದಿಯಲ್ಲಿ ಹೇಳಿತ್ತು, 'ಬದುಕುವ ಕಲೆ'ಯ ಪ್ರಾತ್ಯಕ್ಷಿಕತೆಗಾಗಿ ಹೀಗೆ ಮಾಡಿರಬಹುದು! ನಮ್ಮ 'ಇದ'ರ ತರಹವೇ ಈ ಕಲೆಯನ್ನು ಕರಗತ ಮಾಡಿಕೊಳ್ಳಲು ಇನ್ನೂ ಅದೆಷ್ಟು ಮಂದಿ ಗುರೂಜಿಗಳ ಮುಂದೆ ಕಾಯ್ದು ಕುಳಿತಿದ್ದಾರೋ ತಿಳಿದುಬಂದಿಲ್ಲ. ಆಧ್ಯಾತ್ಮ ಸಾಧನೆಗಾಗಿ ಇನ್ನೂ ಹಲವಾರು ಮಠಾಧೀಶರುಗಳು ಸರ್ಕಾರಿ ಭೂಮಿಯನ್ನು ಬಳಸಿಕೊಳ್ಳುತ್ತಿರುವುದರಿಂದ ಆ ಮಠಾಧೀಶರ ಎದುರು 'ಭೂ ಕಬಳಿಕೆ ಆಧ್ಯಾತ್ಮ' ವಿದ್ಯೆಯನ್ನು ಅರಿಯಲು ಭಕ್ತರು ಮುಕುರಿಬಿದ್ದಿರಬಹುದು.

ಮಠಗಳು ದೈವಸ್ಥಾನವಾಗಿರುವುದರಿಂದ ದೈವನಿರ್ಮಿತ ಈ ಭೂಮಿಯ ಯಾವ ಭಾಗವನ್ನಾದರೂ ಆತನ ಸೇವೆಗಾಗಿ ಬಳಸಿಕೊಳ್ಳುವುದು ಸಮಂಜಸವಾಗಿದೆ ಎಂದು ಇದುವರೆವಿಗೂ ಯಾವ ಮಠಾಧಿಪತಿಗಳೂ ಸಮರ್ಥಿಸಿಕೊಂಡಿಲ್ಲದಿರುವುದಕ್ಕೆ ಕಾರಣ ತಿಳಿದುಬಂದಿಲ್ಲ. ಹಲವು ಮಠಾಧೀಶರು ತಮ್ಮ ಪೀಠ ಭೂಕಬಳಿಕೆ ಮಾಡಿಲ್ಲ ಎಂದು ಹೇಳುತ್ತಿರುವುದರಿಂದ (ಸರ್ಕಾರಿ ದಾಖಲೆಗಳು ಅಲ್ಲಗಳೆದರೂ!) ಪರೋಕ್ಷವಾಗಿ ಮೇಲಿನ ಸಿದ್ಧಾಂತವನ್ನೇ ಪ್ರತಿಪಾದಿಸಿದಂತಾಗುತ್ತದೆ ಎಂಬುದೇ ಒಂದು ಸಮಾಧಾನ!

ಆಧ್ಯಾತ್ಮ ಸಾಧನೆಗಾಗಿ ಪ್ರಭಾವಿ ಮಠಗಳು ವಿವಿಧ ಮಾರ್ಗಗಳನ್ನು ತುಳಿಯಬೇಕಾದ ಅನಿವಾರ್ಯತೆ ಇರುವಂತಿದೆ. ಜನ ಕಲ್ಯಾಣ ಗುರಿ ಹೊಂದಿರುವ ಮಠಗಳು ಸರ್ಕಾರ ರಚನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿವೆ. ಪೇಜಾವರ ಹಾಗೂ ಆದಿಚುಂಚನಗಿರಿ ಶ್ರೀಗಳು ಜೆಡಿಎಸ್-ಬಿಜೆಪಿ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬರಲು ಬಹಳವಾಗಿ ಶ್ರಮಿಸಿದ್ದರು. ಕಂಕಣಬಲ ಬಲವಾಗಿರಲಿಲ್ಲವಾಗಿ ಆ ವಿವಾಹ ಮುರಿದುಬಿತ್ತು, ಛೆಛೆ ಹೀಗಾಗುವುದು ಎಂದರೇನು, ಶಾಸ್ತ್ರೋಕ್ತವಾದ ಮದುವೆ ಇದು, ಸ್ವಲ್ಪ ಜೋಡಿ ಏರುಪಾರಾಗಿದ್ರೇನು, ಇದನ್ನ ಮತ್ತೆ ಒಂದುಗೂಡಿಸಬೇಕು ಅನ್ನುವ ಸದುದ್ದೇಶದಿಂದ ವೀರಶೈವ ಮಠಗಳು ಈ ಜವಾಬ್ದಾರಿಯನ್ನು ಕೈಗೆತ್ತಿಕೊಂಡವು. ಅದು ಫಲ ನೀಡಲಿಲ್ಲವಾಗಿ ಮಠಾಧೀಶರುಗಳು ಬಹುಚಿಂತೆಗೆ ಒಳಗಾದರು. ತಮ್ಮ ಗುರುಗಳಿಗೆ ಆದ ಮುಖಭಂಗದಿಂದ ನೊಂದ ಶಿಷ್ಯಗಣ ಇದನ್ನು ಸರಿದೂಗಿಸಲು ಬೀದಿಗಿಳಿಯಿತು. ಇದನ್ನು ಅರ್ಥ ಮಾಡಿಕೊಳ್ಳದ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ 'ಮಠಾಧೀಶರು ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಬಾರದು' ಎನ್ನುವುದೆ!

ನುಡಿಯಬಹುದೆ ಇಂತಹ ಅಪದ್ಧವನ್ನ?

ಉರಿದೆದ್ದಿತ್ತು ಜನ!

ಜನ ಎಂದರೆ ಯಾರು?

ವೀರಶೈವ ಮುಖಂಡರು!

ಇವರೇ ಅಲ್ಲವೆ ಮಠಾಧೀಶರ ಮುಖವಾಣಿ!

ಏನು ಮಾಡಿದರು ಈ ಮುಖಂಡರು?

ಬಂದ್‌ಗೆ ಕರೆ ನೀಡಿದರು!

'ಯಶಸ್ವಿ ಬಂದ್' ಬೀಗಿದರು ಮುಖಂಡರು!

ನೊಂದಿತು ಬಡ ಜನತೆ.

ಈ ಬಂದ್‌ಗಳದ್ದೇ ಒಂದು ಕಥೆ ಇದೆ. ಹಲವಾರು ಬಂದ್‌ಗಳನ್ನ ನೋಡಿದ ಅನುಭವದ ಕಥನ ಇದು. ಯಾರೂ ಸಂಪೂರ್ಣ ಮನಸ್ಸಿನಿಂದ ಅಂಗಡಿ ಮುಂಗಟ್ಟುಗಳ ಬಾಗಿಲುಮುಚ್ಚಿ ದಿನದ ಆದಾಯವನ್ನು ಕಳೆದುಕೊಳ್ಳಲು ಇಷ್ಟಪಡುವುದಿಲ್ಲ, ಬಾಗಿಲು ಮುಚ್ಚಿಸಲೆಂದೇ ಒಂದು ಪಡೆ ಇರುತ್ತದೆ. ಇವರೇ ಬಂದ್ ನಾಯಕರು! ಅವರನ್ನು ಕಂಡರೇ ಸಾಕು. ಬಾಗಿಲು ಹಾಕಲೇಬೇಕು. ಹಾಗಿರುತ್ತದೆ ಅವರ ವರಸೆ! ಮಾಧ್ಯಮಗಳಲ್ಲಿ ಬರುತ್ತಿದೆ- 'ಯಶಸ್ವಿ ಬಂದ್!' ಅಂದರೇನು ಅರ್ಥ ಅಂದರೆ ಗೂಂಡಾಪಡೆ ಅಲ್ಲಿ ಶಕ್ತಿಯುತವಾಗಿದೆ! ಇನ್ನು ಕೆಲವು ಕಡೆ 'ಬಂದ್ ಭಾಗಶಃ ಯಶಸ್ವಿ.' ಅಂದರೆ ಅರ್ಥ ಗೂಂಡಾಪಡೆ ಅಲ್ಲಿ ಅಷ್ಟು ಪ್ರಭಾವಶಾಲಿಯಾಗಿಲ್ಲ!

ಈ ತರಹದ ಆಧ್ಯಾತ್ಮ ಸಾಧನೆ ಮಠಾಧೀಶರ ಗಮನಕ್ಕೆ ಬಾರದೆಯೂ ನಡೆದಿರಬಹುದು. ಇದು ಮಠದ ಕೊಡುಗೆ ಅನ್ನುವುದನ್ನಂತೂ ಅಲ್ಲಗಳೆಯುವ ಹಾಗಿಲ್ಲ.

ಇತ್ತ ಮಠಾಧೀಶರು ಇಂತಹ ಆಧ್ಯಾತ್ಮ ಸಾಧನೆಗಳಲ್ಲಿ ತಮ್ಮ ಗಮನ ಕೇಂದ್ರೀಕರಿಸುತ್ತಿರಲಾಗಿ ಅತ್ತ ರಾಜಕೀಯ ಪ್ರಮುಖರೂ, ಪ್ರಭಾವಿಶಾಲಿಗಳೂ, ಭೂಕಬಳಿಕೆಯನ್ನು ಯಶಸ್ವಿಯಾಗಿ ಮಾಡಿಕೊಂಡು ಸುಖೀರಾಜ್ಯದಲ್ಲಿ ಆನಂದತುಂದಿಲರಾಗಿ ಇರುತ್ತಿರಲಾಗಿ... ಅಕಟಕಟ... ಎ.ಟಿ. ರಾಮಸ್ವಾಮಿ ಎಂಬ ಮಾಯಾವಿ ಇವರ ಬಂಡವಾಳವನ್ನೂ ಬಯಲು ಮಾಡಬೇಕೆ..... ಚುನಾವಣೆ ಹತ್ತಿರಕ್ಕೆ ಬರುತ್ತಿದೆ.

ಅನಾರ್
ಎಚ್.ಎಲ್. ಕೇಶವಮೂರ್ತಿ

ಈಗ ಈ ಆರೋಪ! ಗೆಲ್ಲಬೇಡವೆ ಪಕ್ಷ? ಆರೋಪದ ನಿರಾಕರಣೆಗಾಗಿ-

ನುಗ್ಗಿತು ವೀರಪಡೆ

ಉಗ್ರಉಗ್ರಪ್ಪ ಪಡೆ

ಸ್ಪೀಕರ್ ಛೇಂಬರ್ ಕಡೆ

ಅದು ಅಲ್ಲಿ ಕಂಡದ್ದು ಏನನ್ನ?

ಎ.ಟಿ. ರಾಮಸ್ವಾಮಿಯನ್ನ!

ಉಗ್ರಪ್ಪನವರಿಗೆ ಅವರು ಕಡತ ತಿದ್ದುತ್ತಿರುವುದು ಕಂಡಿತು!

ತಕ್ಷಣ ಉಗ್ರರಾದರು ಉಗ್ರಪ್ಪ,

ಕಡತ ಹರಿದರು, ಮೇಜು ಮುರಿದರು! ಕಾಂಗ್ರೆಸ್ ಸಂಸ್ಕೃತಿ ಮೆರೆದರು!

"ದಳ ಬುಡತಿಯಂತಲ್ಲಾ ಸೀನು?" ಎಂದಳು ಜುಮ್ಮಿ.

"ನಾನ್ಯಾವತ್ತು ದಳದಲ್ಲಿದ್ದನಕ್ಕ ದಳ ಬುಡಕ್ಕೆ? ನಾನು ಪಾರ್ಟಿ ಸದಸ್ಯನೂ ಅಲ್ಲ, ಕಾರ್ಯಕರ್ತನೂ ಅಲ್ಲ, ದ್ಯಾವೇಗೌಡನ ಫಾಲೋಯರ್ ಮದ್ಲೆ ಅಲ್ಲ, ಅಂತದ್ರಲ್ಲಿ ನಾನ್ಯಂಗೆ ದಳ?"

"ಮತ್ತೆ ರೂಲಿಂಗ್ ಪಾರ್ಟಿಲಿದ್ದಿನಿ ಅಂತಿದ್ದಂತೆ" ಎಂದ ಉಗ್ರಿ.

"ನಿನಿಗಿಷ್ಟ ಇರ್ಲಿ ಇಲ್ದೆಯಿರ್ಲಿ ರೂಲಿಂಗ್ ಪಾರ್ಟಿ ಆದಳತಕೆ ಒಳಪಟ್ಟಿರತಿ ತಾನೆ. ಅದೇ ಮೀನಿಂಗಲ್ಲಿ ನಾನು ಅಂಗಂದಿರಬವುದು. ಅದ್ಕೆ ನನ್ನ ದಳ ಅಂದುಬುದದಾ? ದಿಸೀಸ್ ನಾನ್‌ಸೆನ್ಸ್" ಎಂದ ಪಾಟಿಸ್ಸೆ.

"ಅಂತೂ ನಾನು ದಳ ಅಂತ ಹೇಳಿಕಳಕೆ ನಾಚಗಾಗೋ ಕಾಲ ಬಂದೊಯ್ತು ಕನೊ."

"ಊ ಕನೊ, ಅದ್ಕೆ ಚೆಲುವರಾಯಸ್ವಾಮಿ ಟೀಮು ದಳಬಿಟ್ಟು ಪ್ರಕಾಸನತ್ರ ಹೋಗಿದ್ರು. ಅವುರ್ಯಲ್ಲ ಹೋದ್ರೆ ತೀರಮರಿಯಾದಿನೆ ಹೋಯ್ತದೆ ಅಂತ ಕುಮಾರಸ್ವಾಮಿ ಕರದಿದ್ದನಂತೆ."

"ತಿರಗ ಬಂದಿದ್ದರೆ?"

"ವಸಿ ಬಂದವ ವಸಿ ಅಲ್ಲೇ ಅವೆ. ಪಾಪ ಅವುಕೂ ಪ್ರಾಣ ಸಂಗಟ. ಜುಲುಪು ಜುಲುಪು ಕೆ. ರಾಂರಾಂ ಅಂತ ಕುಮಾರಸ್ವಾಮಿತ ಬಂದವಂತೆ."

"ಇನ್ನಾಟ ಆಡುಸ್ತನೆ ಬುಡು ದ್ಯಾವೇಗೌಡ."

"ಆಗ್ಲೆ ಚೆಲುವರಾಯಸ್ವಾಮಿ ಮ್ಯಾಲೆ ಕಣ್ಣು ಮಡಗಿದ್ದನಂತೆ."

"ಅವುನು ಕಣ್ಣುಬುಟ್ಟ ಅಂದ್ರೆ ಸನಿ ಕಣ್ಣು ಬುಟ್ಟಂಗಲವೆನೊ. ಚೆಲುವರಾಯಸ್ವಾಮಿ ಚುನಾವಣೆಗೆ ನಿಂತಮ್ಯಾಲೆ ಅವುನೆದರಾಳಿಗೆ ದುಡ್ಡು ಕೊಟ್ಟು ಸೋಲಂಗೆ ಮಾಡ್ತನೆ, ಅಮ್ಯಾಲೆ ಅವುನೆ ಪಾರ್ಟಿಬುಟ್ಟು ಹೋಗಂಗೆ ಮಾಡ್ತನೆ. ಅಂತೂ ಅವನ ಮಕ್ಕಳಿಗಿಂತ ಮುಂದಕೆ ಹ್ಯಜ್ಜೆ ಹಾಕಿದೊರ್ನ ಯಾರ್ನೂ ಬಿಟ್ಟಿಲ್ಲ ಅವುನು."

"ಅವುನು ಮಾಡಿದ್ದು ಅವುನಿಗೆ ತಿರಿಕತ್ತದಿರು." ■

ಎಂತಹ ಧೀರ ಕೃತ್ಯ!

ಅಗೋ ಬಂದಿತು ಇವರಿಗೆ ಅಭಯಹಸ್ತ ಮಲ್ಲಿಕಾರ್ಜುನ ಖರ್ಗೆ ರೂಪದಿ. ಸಾರಿದರು ಅವರು- 'ವಿಧಾನಸಭೆ ವಿಸರ್ಜನೆ ಆದ ಮೇಲೆ ಸದನ ಸಮಿತಿಯೂ ವಿಸರ್ಜನೆ ಆಗುತ್ತದೆ. ಆದುದರಿಂದ ರಾಮಸ್ವಾಮಿಯವರು ವರದಿಯನ್ನು ರಾಜ್ಯಪಾಲರಿಗೆ ನೀಡುವ ಹಾಗಿಲ್ಲ!'

ಹಾಗಾದರೆ ಭೂಕಬಳಿಕೆ?

ಅದೂ ವಿಸರ್ಜನೆ!

ಅಬ್ಬಾ ಎಂತಹ ಪಾರದರ್ಶಕತೆ!

*****

ಕೋಮುವಾದಿ ವಿರೋಧಿಗಳಿಗೆ ಈಗ ಒಂದು ಸಂದಿಗ್ಧ ಪರಿಸ್ಥಿತಿ. ಮುಂದಿನ ಚುನಾವಣೆಯಲ್ಲಿ ಬೆಂಬಲಿಸುವುದು ಯಾರನ್ನ? ಪಕ್ಷಗಳೇನೋ ಅಸಂಖ್ಯಾತವಾಗಿವೆ. ಒಂದು ಪಕ್ಷ ಹೊರಹಾಕಿದರೆ ಇನ್ನೊಂದು ಪಕ್ಷ ಆತುಕೊಳ್ಳಲು ಸರದಿಯಲ್ಲಿ ನಿಂತಿರುತ್ತದೆ. ಹಾಳಾಗಿ ಹೋಗಲಿ ಗುಮ್ಮನಗುಸಕನಂತೆ ಒಳಗೊಳಗೆ ಜಾತಿಧರ್ಮ ಅಂತ ಕುಮ್ಮಕ್ಕು ನೀಡಿದರೂ ಬಹಿರಂಗವಾಗಿ ತೋರಿಸಿಕೊಳ್ಳಲ್ಲ ಅಂತ ಕಾಂಗ್ರೆಸ್ ಕಡೇ ಒಲಿಯೋಣ ಅಂದರೆ ಅಲ್ಲಿ ನೋಡಿ ಹೇಗಾಗಿದೆ.

ಮಲ್ಲಿಕಾರ್ಜುನ ಖರ್ಗೆ?

ಭಾವೀ ಮುಖ್ಯಮಂತ್ರಿ!

ಸಿದ್ಧರಾಮಯ್ಯ?

ಭಾವಿ ಮುಖ್ಯಮಂತ್ರಿ!

ಮಾರ್ಗರೆಟ್ ಆಳ್ವ?

ಸಂಸತ್ತಿಗೆ ಸ್ಪರ್ಧಿಸುವುದಿಲ್ಲ, ವಿಧಾನಸಭೆಗೆ ಸ್ಪರ್ಧಿಸುತ್ತಾರೆ. ಯಾಕೆ

ಅವರೂ ಭಾವೀ ಮುಖ್ಯಮಂತ್ರಿ!

ರೆಬೆಲ್ ಸ್ಟಾರ್ ಅಂಬರೀಷ್?

ದಿಟೋ...

.....

.....

ಹೀಗೇ ಹನುಮಂತನ ಬಾಲದಂತೆ ಇವರ ಸಂಖ್ಯೆ ಬೆಳೆಯುತ್ತಲೇ ಹೋಗುತ್ತಿದೆ.

ಈ ಪಕ್ಷದಲ್ಲಿ ಭಾವೀ ಶಾಸಕರುಗಳೇ ಇಲ್ಲ, ಭಾವಿ ಮುಖ್ಯಮಂತ್ರಿಗಳೇ ಎಲ್ಲ!

ಕೂಸು ಹುಟ್ಟುವುದಕ್ಕೆ, ಮುಂಚೇನೆ ಕುಲಾವಿ ಹಾಕ್ತಾರೆ! ■

ಆಚಾರ್ಯ

ಈತ ತುಂಬಾ ಸಂಕೋಚದ ಮನುಷ್ಯ. ಈ ಆಚಾರ್ಯ ನರೇಂದ್ರ ದೇವ. ಓದಿಕೊಂಡು ತೀರಾ ಹತ್ತಿರದ ಗೆಳೆಯರೊಂದಿಗೆ ಹರಟುತ್ತ ಅಸಹಾಯಕರಿಗೆ ನೆರವಾಗುತ್ತ ಇದ್ದುಬಿಡುವುದು ನರೇಂದ್ರ ದೇವ ಅವರಿಗೆ ಇಷ್ಟ. ಆದರೆ ನರೇಂದ್ರ ದೇವ ರಾಜಕಾರಣಿ ಕೂಡ ಆಗಿದ್ದರು. ಮನಸ್ಸಿನಲ್ಲಿ ಮಂಡಿಗೆ ತಿನ್ನುವುದು ರಾಜಕಾರಣವಲ್ಲ; ಆಳದ ಸಣ್ಣ ನೋವು ಕೂಡ ಬಹಿರಂಗ ಜಗತ್ತಿನಲ್ಲಿ ಚಲಾವಣೆ ಪಡೆದಾಗಲೇ ರಾಜಕಾರಣ. ಇದು ಕ್ರಿಯೆಯ ಕಣ. ಅಲ್ಲಿಯೇ ಒಬ್ಬ ಮನುಷ್ಯನ ಅನ್ನಿಸಿಕೆಗಳೆಲ್ಲ ಒರೆಗೆ ಹಚ್ಚಲ್ಪಡುವುದು; ಆತನ ವ್ಯಕ್ತಿತ್ವ ಪರೀಕ್ಷೆಗೊಳಗಾಗುವುದು.

ಹಿಂಜರಿಕೆಯ ನರೇಂದ್ರ ದೇವ 'ನಾನು ನಾಯಕನಲ್ಲ, ನನಗೆ ರಾಜಕಾರಣಿಯ ಗುಣಗಳಿಲ್ಲ, ಅನ್ನುತ್ತಿದ್ದರು; ಆದರೆ ಮಾಡಿದ್ದನ್ನೆಲ್ಲ ಅಚ್ಚುಕಟ್ಟಾಗಿ, ಪ್ರಾಮಾಣಿಕವಾಗಿ, ಯಶಸ್ವಿಯಾಗಿ ಮಾಡುತ್ತಿದ್ದರು. ಇವರು ಉತ್ತರ ಪ್ರದೇಶದ ಶಾಸಕರಾಗಿದ್ದರು; ಶಾಸಕನೊಬ್ಬ ಜನತೆಗೆ ನೆರವಾಗಬಹುದಾದ ರೀತಿಯಲ್ಲೆಲ್ಲ ನೆರವಾದರು. ಇವರು ಒಂದು ವಿಶ್ವವಿದ್ಯಾನಿಲಯವನ್ನು ಆರಂಭಿಸಿ ಯಶಸ್ವಿಯಾಗಿ ನಡೆಸಿದರು. ನೆಹರೂ, ಗಾಂಧೀಜಿಯ ಮಿತ್ರರಾಗಿದ್ದರೂ ಅವರ ಹೊಗಳು ಭಟ್ಟರಾಗಲಿ, ಆಜ್ಞಾಪಾಲಕರಾಗಲಿ ಆಗಿರಲಿಲ್ಲ, ಭಾರತದಲ್ಲಿ ಸಮಾಜ ವಾದ ಹುಟ್ಟುವುದಕ್ಕೆ ಕಾರಣರಾದ ವರಲ್ಲಿ ಒಬ್ಬರು ನರೇಂದ್ರ ದೇವ.

ರಷ್ಯಾದ ಸಮಾಜವಾದ ಲೆನಿನ್, ಸ್ಟಾಲಿನ್‌ರ ಕೈಯಲ್ಲಿ ನರಮೇಧವಾದಾಗ ಬೆಚ್ಚಿಬಿದ್ದ ಸೋಷಲಿಸ್ಟರಲ್ಲಿ ನರೇಂದ್ರ ದೇವ ಒಬ್ಬರು. ಲೋಹಿಯಾ ಅವರಂತೆಯೇ ಅಮೆರಿಕಾದ ಸಾಮ್ರಾಜ್ಯಶಾಹಿ, ರಷ್ಯಾದ ಸರ್ಕಾರಿಶಾಹಿಯನ್ನು ತಿರಸ್ಕರಿಸಿದ ನರೇಂದ್ರ ದೇವ ಭಾರತಕ್ಕೆ ಸಮಾನತೆ, ಸ್ವಾತಂತ್ರ್ಯ ಎರಡನ್ನೂ ತರುವ ಕನಸು ಕಂಡವರು. ನೆಹರೂ ಅವರ ಹುಸಿ ಭರವಸೆ, ಅದಕ್ಷ ಆಡಳಿತದಿಂದ ಬೇಸತ್ತು ಕಾಂಗ್ರೆಸ್‌ನಿಂದ ಹೊರಬಂದವರು. ಯಾರನ್ನೂ ದ್ವೇಷಿಸದೆ ಕ್ಷುಲ್ಲಕ ವಿಚಾರದ ಜನರನ್ನು ಅವರ ಭಿನ್ನಮತಕ್ಕಾಗಿ ಆಕ್ಷೇಪಿಸಿದರು. ಅರ್ಧ ಶತಮಾನದ ಹಿಂದೆ ನಮ್ಮ ಜನತೆ ಕಂಡ ನ್ಯಾಯವಂತ ಭಾರತದ ಕನಸಿನಲ್ಲಿ ಒಂದಾದವರು ಈ ಆಚಾರ್ಯ.

ಈ ವರ್ಷ ಭಾರತ ಆಚಾರ್ಯ ನರೇಂದ್ರ ದೇವ ಅವರ ಜನ್ಮಶತಾಬ್ಧ ಆಚರಿಸುತ್ತಿದೆ. ಇವರು ಹುಟ್ಟಿದ್ದು 1889 ರಲ್ಲಿ, ಕುತೂಹಲದ ವಿಷಯವೆಂದರೆ ಅದೇ ವರ್ಷ ಜವಾಹರಲಾಲ್ ನೆಹರು ಮತ್ತು ಹೆಡಗೆವಾರ್ ಕೂಡ ಹುಟ್ಟಿದ್ದು.

ಆಚಾರ್ಯ ಅವರ ಬದುಕಿನ ಬಗ್ಗೆ ಯೋಚಿಸಿದಂತೆಲ್ಲ ಕೆಟ್ಟುಹೋಗಿರುವ ನಮ್ಮ ರಾಜಕೀಯ ಮತ್ತು ರಾಜಕಾರಣಿಗಳ ಬಗ್ಗೆ ವಾಕರಿಕೆ ಬರುತ್ತದೆ. ಇಲ್ಲಿ ವಿಚಾರಗಳ, ಸಿದ್ಧಾಂತಗಳ ಚರ್ಚಿತವಾಗುವುದೇ ಇಲ್ಲ; ಎಲ್ಲಕ್ಕೂ ಸ್ವಾರ್ಥವೇ ಕಾರಣವಾದ್ದರಿಂದ ಈ ಧೂರ್ತರು ಬಾಯಿ ಬಿಟ್ಟೊಡನೆ ಜಗಳವೇ ಆಗುತ್ತದೆ.

ಆಚಾರ್ಯ ನರೇಂದ್ರದೇವ ಬುದ್ಧ, ಗಾಂಧಿ ಮತ್ತು ಮಾರ್ಕ್ಸ್‌ಗಳ ಸಮ್ಮಿಳನವನ್ನು ಕಾಣಲು ಬಯಸಿದರು. ಮಾರ್ಕ್ಸ್ ಸಮಾನತೆಯ ಬಗ್ಗೆ ಚಿಂತಿಸಿದ್ದ, ಬುದ್ಧ ನಿರೀಶ್ವರೀ ಜಗತ್ತಿನ ವೈಚಾರಿಕತೆಗೆ ಒತ್ತುಕೊಟ್ಟಿದ್ದ, ಗಾಂಧೀಜಿ ನ್ಯಾಯವಂತ, ಮಾನವೀಯ ಸಮಾಜಕ್ಕಾಗಿ ಕಾತರಿಸಿದ್ದರು.

ಆಚಾರ್ಯರ ಒಂದು ಮಾತು ಹೀಗಿದೆ: "ನೈತಿಕ ಪ್ರತಿಭಟನೆಯು ಕ್ರಾಂತಿಕಾರಿ ಉದ್ದೇಶಗಳಿಂದ ಕೂಡಿ ಕ್ರಾಂತಿಕಾರಿ ಹೋರಾಟಕ್ಕೆ ಪೂರಕವಾಗಿರಬೇಕು."


ಮರೆಯುವ ಮುನ್ನ



■ ಪಿ. ಲಂಕೇಶ್ -ಜುಲೈ 23, 1989

ಒಂದು ಚುಟುಕ


ನೀವು ಮಿಲ್ಟನ್ ಬಗ್ಗೆ ಕೇಳಿರಬಹುದು. ಈತ ಮಹಾ ಸಂಪ್ರದಾಯವಾದಿಯಾದರೂ ಬಂಡಾಯಗಾರ; ಹದಿನೇಳನೇ ಶತಮಾನದಲ್ಲಿ ಅರಸೊತ್ತಿಗೆಯ ವಿರುದ್ಧ, ದೊರೆಗಳ ಭ್ರಷ್ಟಾಚಾರ, ಚರ್ಚಿನ ದಬ್ಬಾಳಿಕೆಯ ವಿರುದ್ಧ ಹೋರಾಡಿದವನು.



ಮಹಾ ವಿದ್ವಾಂಸನೂ ಕವಿಯೂ ಆಗಿದ್ದ ಮಿಲ್ಟನ್ ವಾಕ್ ಸ್ವಾತಂತ್ರ್ಯದ ಪರವಾಗಿ ಮಾತಾಡಿದವನು, ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ಪ್ರತಿಭಟನೆ ಮಾಡಿದವನು. ಈತ ಹೆಂಗಸರ ವಿಷಯದಲ್ಲಿ, ನೈತಿಕತೆಯ ವಿಷಯದಲ್ಲಿ, ಕಟ್ಟುನಿಟ್ಟು ಮನುಷ್ಯ. ಒಬ್ಬರು ಈತನಿಗೆ ಹೇಳಿದರಂತೆ:- "ನಿನ್ನ ಮಗಳಿಗೆ ಇನ್ನೊಂದು ಭಾಷೆ ಕಲಿಸು teach her ano ther tongue..."

ಮಿಲ್ಟನ್ ಹೇಳಿದ: ``One tongue is enough for any woman."

ರಕ್ತಪಾತದ ಹುಟ್ಟುಹಬ್ಬ



ನೂರನೇ ಹುಟ್ಟುಹಬ್ಬದ ಬಗ್ಗೆ ಹೇಳುತ್ತಿದ್ದಾಗಲೇ ಇನ್ನೂರನೆಯ ಒಂದು ಹುಟ್ಟುಹಬ್ಬದ ಬಗ್ಗೆ ಹೇಳಲೇಬೇಕು. ಅದು ಫ್ರೆಂಚ್ ಕ್ರಾಂತಿ. ಫ್ರೆಂಚ್ ಕ್ರಾಂತಿಯ ಬ್ಯಾಸ್ಟೈಲ್-ಫ್ರಾನ್ಸಿನ ಕುಖ್ಯಾತ ಜೈಲು-ಪ್ರಜೆಗಳ ವಶವಾದದ್ದು ಜುಲೈ 14 ನೇ ತಾರೀಖು; ಇನ್ನೂರು ವರ್ಷದ ಹಿಂದೆ. ಈ ಜೈಲಿನಲ್ಲಿದ್ದ ಮದ್ದು ಗುಂಡುಗಳನ್ನು ವಶಪಡಿಸಿಕೊಂಡ ಜನ ಗಿಲಟೀನ್ ನೆಟ್ಟರು. ಫ್ರಾನ್ಸ್‌ನಲ್ಲಿ ಆಗ ಇದ್ದ ಭ್ರಷ್ಟತೆ, ಅನ್ಯಾಯ, ಅಸಮಾನತೆಯ ವಿರುದ್ಧ ಸಿಡಿದೆದ್ದಿದ್ದ ಜನ ದೊರೆ ಹದಿನಾರನೆ ಲೂಯಿಯ ತಲೆ ಕತ್ತರಿಸಿದರು. ಎಲ್ಲ ಶೋಷಕರು, ಮೋಸಗಾರರು, ಕಾಳಸಂತೆಕೋರರನ್ನು ಹಿಡಿದು ತಂದು ಗಿಲಟೀನ್‌ಗೆ ಒಡ್ಡಿದರು. ನೆತ್ತರ ಕೋಡಿ ಹರಿಯಿತು. ಒಮ್ಮೆ ರಕ್ತ ಕಂಡ ಜನ ಇನ್ನಷ್ಟು ರಕ್ತಕ್ಕೆ ಕಾತರಿಸಿದರು. ಗೊಂದಲಮಯ ವಾತಾವರಣದಲ್ಲಿ ಸೇಡು, ಪ್ರತೀಕಾರ ಕೂಡ ಹುಟ್ಟಿಕೊಂಡವು. ತನ್ನ ಸಾತ್ವಿಕ ಸಿಟ್ಟಿನಿಂದ, ಪ್ರಚಂಡ ಭಾಷಣಗಳಿಂದ ಜನರನ್ನು ದಂಗೆಗೆ ಉದ್ರೇಕಿಸಿದ್ದ ಕ್ರಾಂತಿಕಾರಿ ರಾಬ್‌ಸ್ಪಿಯರ್‌ನ ರುಂಡ ಕೂಡ ಉರುಳಿ ಬಿತ್ತು.

ಅದಕ್ಷ ದೊರೆಯನ್ನು ಮುಗಿಸಲಾಯಿತು. ಜನರ ಶಕ್ತಿಯನ್ನು ರೂಢಿಸಲಾಯಿತು. ಪ್ರಜಾಪ್ರಭುತ್ವದ ನಿಯಮಗಳನ್ನು ರೂಪಿಸಲಾಯಿತು. ಹೊಸತೊಂದು ಸ್ವಾತಂತ್ರ್ಯ ಸಮಾನತೆಯ ಯುಗವನ್ನು ಆರಂಭಿಸಲಾಯಿತು. ಸರ್ವಾಧಿಕಾರ ತಲೆಯೆತ್ತದಂಥ ಪರಿಸರ ಸೃಷ್ಟಿಸಲಾಯಿತು. ಇಷ್ಟೆಲ್ಲ ಆಯಿತು, ಆದರೆ ಅರಾಜಕತೆ ಮಾತ್ರ ಹಾಗೇ ಉಳಿಯಿತು. ಫ್ರಾನ್ಸಿನ ಬಡತನ, ಗೊಂದಲಗಳಲ್ಲಿ ದಿಟ್ಟನಾಯಕನಂತೆ ಕಾಣಿಸಿಕೊಂಡ ವ್ಯಕ್ತಿಯೊಬ್ಬ ಮೂಡಿದ. ಆತ ಇಡೀ ವಿಶ್ವವನ್ನೇ ಗೆಲ್ಲುವ ಹುಮ್ಮಸ್ಸಿನಿಂದ ಹೊರಟು ಫ್ರಾನ್ಸಿನ ಇನ್ನೊಬ್ಬ ದೊರೆಯೇ ಆದ. ಅವನೇ ನೆಪೋಲಿಯನ್ ಬೋನಾಪಾರ್ಟೆ.

ಅರ್ಧ ಬರೆದ ಕವಿತೆ



ಅರ್ಧ ಬರೆದ ಕವಿತೆ
ಒಂದೆರಡು ಸಾಲು ಕವಿತೆ
ನಿನ್ನ ಮನೆ ಬಾಗಿಲು ತಟ್ಟಿತು
ಬಿಸಿಲಿಂದ ಬಾಡಿತ್ತು
ಮಳೆಯಿಂದ ನೆನೆದಿತ್ತು
ಇನ್ನು ಒಂದು ಹೆಜ್ಜೆಯೂ ಮುಂದಿಡಲಾಗದಂತೆ
ಕುಸಿಯುವ ಮುನ್ನ
ನಿನ್ನ ಮನೆ ಸಿಕ್ಕಿತು
ಮುಚ್ಚಿದ ಬಾಗಿಲು
ತೆರೆಯಲೇ ಇಲ್ಲ
ಕವಿತೆ ಅಂಗಳದಲ್ಲೇ
ರಾತ್ರಿ ಕಳೆಯುತ್ತಿದೆ
ಅಲ್ಲೇ ಜಗಲಿಯ ಮೇಲೆ
ಮುದುಡಿ ಮಲಗಿದೆ
ಕೂಗಲು ಸ್ವರವಿಲ್ಲ
ಗಂಟಲು ಕಟ್ಟಿದೆ

ಒಮ್ಮೆ ಬಾಗಿಲು ತೆರೆದು
ದೀಪದ ಬೆಳಕಿಟ್ಟು ನೋಡಬಾರದೇ?
ಆಗ ಮಾತ್ರ ತಿಳಿಯುತ್ತದೆ ನಿನಗೆ
ಕವಿತೆಯ ಹಕ್ಕು
ಬಳಲಿ ಬೆಂಡಾಗಿರುವ ಕವಿತೆಗೀಗ
ಬೇಕಾಗಿರುವುದು ಒಂದು ಸಾಂತ್ವನ ನುಡಿ,
ಒಂದು ತುತ್ತು ಅನ್ನ, ಬದಲಾಯಿಸಲು
ಬಟ್ಟೆ,
ಒಂದಿಷ್ಟು ಖಾಸಗೀ ನೆರಳು-
ಅದು ನಿನ್ನಾಶ್ರಯ ಮಾತ್ರ.


ಕಾಲ ಮಿಂಚಿಲ್ಲ
ಹೊಸ್ತಿಲ ಬಳಿ ಇರುವ ಕವಿತೆಯ
ಬರಮಾಡಿಕೋ ಒಳಗೆ
ಅಭಯ ಕೊಡು
ಮುಂದಿನ ಸಾಲುಗಳನ್ನು ಬರೆ
ಸಾಧ್ಯವಾದರೆ ಕವಿತೆ ಪೂರ್ಣಗೊಳಿಸು
ಸಾಯಲು ಬಿಡದಂತೆ....

■ ಜ್ಯೋತಿ ಗುರುಪ್ರಸಾದ್

ಕತ್ತಲೆಯ ಕಾರಣಕ್ಕಾಗಿ ಪ್ರೇಮದಾಟವನ್ನು ನಿಲ್ಲಿಸಲಾಗುವುದಿಲ್ಲ -ಟಾಮ್ ಮ್ಯಾಸನ್

ವರ್ಗ/ ಜಾತಿ ರಾಜಕಾರಣಕ್ಕೆ ಹೆಗ್ಡೆ ಬಲಿ

ಶೃಂಗೇರಿಯ ಕಲ್ಕುಳಿ ವಿಠಲ್ ಹೆಗ್ಡೆ ಯಾರು? ಎಂಥವರು? ಹೇಗೆ? ಎಂಬ ವಿಚಾರ ಕರ್ನಾಟಕದ ಜನರಿಗೆಲ್ಲಾ ಗೊತ್ತು. ಆದರೂ ಮಲೆನಾಡಿನ ಎಲ್ಲ ಭೂಮಾಲೀಕರಂತೆ ಆದಿವಾಸಿ ಗಿರಿಜನರನ್ನು, ದಲಿತರನ್ನು, ಕೂಲಿ ಕಾರ್ಮಿಕರನ್ನು ದುಗ್ಗಾಣಿಗೆ ದುಡಿಸಿಕೊಂಡು, ಅವರ ಮೇಲೆ ದೌರ್ಜನ್ಯವೆಸಗಿದ್ದರೆ ಈಗ ಅವರು ಕೈಯ್ಯಾರೆ ಬೆಳೆಸಿದ್ದ ಅಡಿಕೆ ಗಿಡಗಳಿಂದ ಅನ್ಯರು ಬಂದು ಗೊನೆ ತೆಗೆಯದ ನೋವಿಗೆ ಗುರಿಯಾಗುತ್ತಿರಲಿಲ್ಲ. ಆದರೆ ಅದಕ್ಕೆ ಬದಲಾಗಿ ವಿಠಲ್ ಮಾಡಿದ ಮಹಾಪರಾಧ ವೆಂದರೆ, ಇದೇ ಜನರ ಹಿತರಕ್ಷಣೆಗಾಗಿ, ಅವರ ಹಕ್ಕು-ಬಾಧ್ಯತೆಗಳಿಗಾಗಿ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ಜೀವಮಾನ ಪೂರ್ತಿ ಹೋರಾಡಿಕೊಂಡು ಬಂದದ್ದು. ಇದು ಮಲೆನಾಡಿನ ಊಳಿಗಮಾನ್ಯ ದೊರೆಗಳಿಗೆ, ಅವರ ಪರವಾದ ಸಂಘ ಪರಿವಾರ




ರಾಜಕಾರಣಿಗಳಿಗೆ, ಸರ್ಕಾರಿ ಅಧಿಕಾರಿಗಳಿಗೆ ಹಾಗೂ ಅವರ ತಾಪೇದಾರಿಗಳಾದ ಪೊಲೀಸರಿಗೆ ಕಣ್ಣೆಸುರಾದುದು ಸ್ವಾಭಾವಿಕವೇ. ಇದು ಇಂದಿ ಮಾಡಿ ದರ್ಗ/ಜಾತಿ ರಾಜಕಾರಣವೆಂದು ಬೇರೆ ಹೇಳಬೇಕಾಗಿಲ್ಲ.

ಆದ್ದರಿಂದ ಮೊದಲು ಹೆಗ್ಡೆಯ ಧ್ವನಿ ನಿಲ್ಲಿಸಿದರೆ ತಮ್ಮ ಶೋಷಣೆಯ ಕಾರುಬಾರು ಸುಸೂತ್ರ ಎಂದು ಭಾವಿಸಿದ ಮೇಲ್ವರ್ಗ/ಜಾತಿಗಳ ಷಡ್ಯಂತ್ರವು ದಲಿತರ ತಲೆಗೆ ಎಣ್ಣೆ ತೀಡಿ, ಅವರಿಂದ ವಿಠಲ್ ವಿರುದ್ಧ ದಲಿತರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಕೇಸು ಜಡಿಸಿದ್ದಾರೆ. ಈ ಬಹಿರಂಗ ಸತ್ಯವನ್ನು ಸಾರ್ವಜನಿಕರು ಮನಗಾಣಬೇಕು.

ಹಾಗೆ ನೋಡಿದರೆ, ಸರ್ಕಾರಿ ಜಮೀನು ಸೇರಿದಂತೆ ದಲಿತರ ಹಿಡುವಳಿಗಳನ್ನು ಒತ್ತುವರಿ-ಆಕ್ರಮಿಸಿಕೊಂಡಿರುವ ಸಾಕಷ್ಟು ಭೂಮಾಲೀಕರು ಮಲೆನಾಡು ಪ್ರಾಂತ್ಯದಲ್ಲಿದ್ದಾರೆ. ಸರ್ಕಾರ ಸಂಕಲ್ಪ ಬದ್ಧವಾಗಿದ್ದರೆ ತನಿಖೆ ನಡೆಸಿ ಆ ಎಲ್ಲ ಅನ್ಯಾಯ ಅಕ್ರಮಗಳನ್ನು ಸರಿಪಡಿಸಲಿ. ಇಲ್ಲವಾದರೆ, ಕೇವಲ ವಿಠಲ್ ಹೆಗ್ಡೆಯವರ ಮೇಲಿನ ಈ ಕ್ರಮ ಪಕ್ಷಪಾತದಿಂದ ಕೂಡಿದ್ದೂ, ದುರುದ್ದೇಶ ಪ್ರೇರಿತವೂ ಆಗಿದೆಯೆಂದು ಜನರು ಭಾವಿಸಬೇಕಾಗುತ್ತದೆ.

ಇದೇ ಸಂಚಿಕೆ (ಲಂಕೇಶ್ 12.12.07)ಯ ಶಿವಸುಂದರ್ ಅವರ 'ಅಸ್ಸಾಮಿನ ಆದಿವಾಸಿಗಳು ಮತ್ತು ಭಾರತದ ನಾಗರಿಕರು' ಎಂಬ ವಿಶ್ಲೇಷಣಾತ್ಮಕ ಲೇಖನವೂ ಸಹ ಮಲೆನಾಡಿನ ಆದಿವಾಸಿ-ಗಿರಿಜನರ ಹಾಗೂ ರಾಷ್ಟ್ರದ ಎಲ್ಲೆಡೆ ಇರುವ ಬುಡಕಟ್ಟು ಜನರ ಸಮಾಜೋ-ಆರ್ಥಿಕ ಸಮಸ್ಯೆಗಳ ಮೇಲೂ ಬೆಳಕು ಹಾಯಿಸುತ್ತದೆ. ಒಟ್ಟಾರೆ ದಲಿತರು, ಆದಿವಾಸಿ-ಗಿರಿಜನರು ಮುಂತಾಗಿ ಅತ್ಯಂತ ಕೆಳಗಿನ ಸಮೂಹಗಳು ನಾಗರಿಕ ಸಮಾಜದೊಂದಿಗೆ ಸೇರಿ ತಮಗೊಂದು ಪಾಲುದಾರಿಕೆ ಕೇಳಲು ಹೊರಟದ್ದನ್ನು 'ಇವರು ಸಹಿಸರು. ಆದ್ದರಿಂದಲೇ ನಗರಕ್ಕೆ ನುಗ್ಗಿದ ಚಿರತೆಗಳನ್ನು ಬೇಟೆ ಮಾಡಿ ದಂತೆ, ಅಸ್ಸಾಮಿನ ರಾಜಧಾನಿ ಗೌಹಾಟಿಯ ಬೀದಿಬೀದಿಗಳಲ್ಲಿ ಅವರ ಬೇಟೆಯಾಡಿದ್ದುದನ್ನು ಪೊಲೀಸ್ ಪಡೆ ಹಾಗೂ ಕೋಮುವಾದಿಗಳು ಕಂಡೂ ಕಾಣದಂತೆ ನಿಂತು ನೋಡಿ enjoy ಮಾಡಿದುದನ್ನು ಸ್ಮರಿಸಿಕೊಂಡರೆ ಸಾಕು ಈ ರಾಷ್ಟ್ರದ ನೈತಿಕ ಅಧಃಪತನಕ್ಕೆ ಎಲ್ಲಿಯುಂಟೇ ಎಂದು ಗಾಬರಿಯಾಗುತ್ತದೆ. ಹಾಗಾದರೆ ಜನತಂತ್ರದ ರಕ್ಷಣೆ?

-ಪ್ರೊ. ಶಿವರಾಮಯ್ಯ, ಬೆಂಗಳೂರು




ಡಿಸೆಂಬರ್ 5ರ ಸಂಚಿಕೆಯ ಆರೋಗ್ಯಕರ ಚರ್ಚೆಗೆ orkut ನಲ್ಲೊಂದು ಚಾವಡಿ ಕುರಿತು ಎ.ಎ. ಶಫೀರ್, ಕೊಡಗು, ಇವರ ಆಶಯ ಮತ್ತು ಮನವಿ ನಿತ್ಯ ಶೋಧನೆಯ ನೆಲೆಯಿಂದ ಸ್ವಾಗತಾರ್ಹ. ಏಕೆಂದರೆ ಮುಕ್ತ ಚರ್ಚೆ ಆರೋಗ್ಯಕರ ಬೆಳವಣಿಗೆಗೆ ಅತೀ ಅಗತ್ಯ.

ಸಂಘ ಪರಿವಾರ ನಿರ್ದೇಶಿತ ಅಭಿಪ್ರಾಯಗಳು ಯಾವಾಗಲೂ ಏಕಮುಖಿ ಚಿಂತನೆಯ epicentre ಗಳು. ಸದರಿ ಪರಿವಾರದವರು ಗೌರಿ ಲಂಕೇಶ್ ವಿರುದ್ಧ orkut ನಲ್ಲಿ ನಮೂದಿಸಿದ ಅಪವಾದಗಳ ಸತ್ಯಾಸತ್ಯತೆಗಳನ್ನು ವಿವೇಚನೆಗೆ ಒಳಪಡಿಸಿದರೆ ಅವುಗಳೆಲ್ಲವು ಪ್ರಗತಿಪರ ಮನೋಧರ್ಮದ ವಿರುದ್ಧವಿರುವ ಅನಾರೋಗ್ಯಕಾರಿ ಮನಸ್ಸಿನ ಪ್ರತಿಫಲನಗಳು. ಚಿಂತನೆಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವೂ ವ್ಯಕ್ತಿತ್ವ ವಿಕಸನದ ಅಡಿಗಲ್ಲು. ಆದರೆ ಮೂಲಭೂತವಾದಿ ಮನಸ್ಸುಗಳು ಸ್ವಾತಂತ್ರ್ಯದ ಅರ್ಥವನ್ನು ಫ್ಯಾಸಿಸ್ಟ್ ಸ್ವರೂಪದಲ್ಲಿ ಚಿತ್ರಿಸಿಕೊಳ್ಳುತ್ತಾರೆ. ಇದು ಸಾಮಾಜಿಕ ಸ್ವಾಸ್ಥ್ಯದ ಹಿತದೃಷ್ಟಿಯಿಂದ ಅತ್ಯಂತ ಅಪಾಯಕಾರಿ ಹಾಗೂ ವ್ಯಕ್ತಿತ್ವ ವಿಕಸನದ ದೃಷ್ಟಿಯಿಂದಲೂ ಹಾನಿಕಾರಿ.



'ಲಂಕೇಶ್' ವಾರ ಪತ್ರಿಕೆಯೊಂದಿಗೆ ಸುಮಾರು ಹನ್ನೆರಡು ವರ್ಷಗಳಿಂದ ಒಡನಾಟ ಹೊಂದಿರುವ ನಾನು ಈ ಪತ್ರಿಕೆಯ ಆಶಯ ಮತ್ತು ಕಾಳಜಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದೇನೆ. ಪ್ರಾಮಾಣಿಕವಾಗಿ ಈ ನಾಡಿನ ಜನತೆಯಲ್ಲಿ ವೈಚಾರಿಕ ಕ್ರಾಂತಿಯನ್ನು ದಿಟ್ಟವಾಗಿ ರೂಪಿಸಿದ ಪತ್ರಿಕೆ 'ಲಂಕೇಶ್.' ದಮನಿತರ, ಅಲ್ಪಸಂಖ್ಯಾತರ, ದಲಿತರ, ಮಹಿಳೆಯರ ಮತ್ತು ನಿರ್ಲಕ್ಷಿತ ಸಮುದಾಯದ ಪರವಾಗಿ ವಸ್ತುನಿಷ್ಠವಾಗಿ ಮತ್ತು ಅತ್ಯಂತ ಮಾನವೀಯ ಕಾಳಜಿಯಿಂದ ಧ್ವನಿ ನೀಡಿದೆ.

ಭಾರತದ ಸಂವಿಧಾನವೂ ಈ ದೇಶವನ್ನು secular ರಾಷ್ಟ್ರವೆಂದು ಸಾರಿದೆ. ಧಾರ್ಮಿಕ ಸ್ವಾತಂತ್ರ್ಯವನ್ನು ಗುರುತಿಸಿದೆ ಮತ್ತು ಇಲ್ಲಿನ ಬಹುತ್ವ ಸಂಸ್ಕೃತಿಯನ್ನು ಎತ್ತಿ ಹಿಡಿದಿದೆ. ಆದ್ದರಿಂದ ಸಂವಿಧಾನದ ಆಶಯಗಳಿಗೆ ಚಿಂತನೆ ಮತ್ತು ಕ್ರಿಯೆಗಳ ಮೂಲಕ ವಿರುದ್ಧವಾಗಿ ವರ್ತಿಸಿದವರೆಲ್ಲರೂ ಈ ದೇಶದ ಸಮಗ್ರತೆಗೆ, ಐಕ್ಯತೆಗೆ ಧಕ್ಕೆ ತರುವವರು. ಈ ನೆಲೆಯಲ್ಲಿ ಸಂಘ ಪರಿವಾರದವರು ಮತ್ತು ಅವರ ರಾಜಕೀಯ ಮುಖಗಳು ಈ ದೇಶದ ಸಂವಿಧಾನದ ಅನ್ವಯ, ಇಲ್ಲಿನ ಸಮಗ್ರತೆ, ಐಕ್ಯತೆ ಮತ್ತು ಸಾಮರಸ್ಯತೆಗೆ ಪ್ರಧಾನ ಶತ್ರುಗಳು ಎಂಬುವುದರಲ್ಲಿ ಎರಡು ಮಾತಿಲ್ಲ. ಇವರ ಅಭಿಪ್ರಾಯಗಳು, ನಡೆಸಿದ ಹತ್ಯಾಕಾಂಡಗಳು ಮತ್ತು ಅಭಿವೃದ್ಧಿಯ ಮಾದರಿಗಳನ್ನು ಅವಲೋಕಿಸಿದರೆ ಮನುಷ್ಯತ್ವವಿರುವ ಪ್ರತಿಯೊಬ್ಬನಿಗೂ ಅರ್ಥವಾಗುತ್ತದೆ.



ಗೌರಿ ಲಂಕೇಶ್ ನಕ್ಸಲ್ ಪರ ಎಂಬುವುದನ್ನು ವಸ್ತುನಿಷ್ಠವಾಗಿ ನೋಡಬೇಕು. ಯಾವುದೇ ಚಳವಳಿಯ ನ್ಯಾಯಪರ ಬೇಡಿಕೆಯನ್ನು ಬೆಂಬಲಿಸುವ ಹಕ್ಕು ಎಲ್ಲರಿಗೂ ಇದೆ. ನಕ್ಸಲಿಸಂನ ಸಾಧನದ ಬಗ್ಗೆ 'ಲಂಕೇಶ್' ಎಂದಿಗೂ ಸಮರ್ಥಿಸಿಕೊಂಡಿಲ್ಲ, ನಕ್ಸಲ್ ಹೆಸರಿನಲ್ಲಿ ಅಮಾಯಕರ ಹತ್ಯೆಯ ಖಂಡನೆ ಮತ್ತು ನ್ಯಾಯಯುತ ಬೇಡಿಕೆಯ ಹಕ್ಕಿನ ಬಗ್ಗೆ ಧ್ವನಿ ನೀಡಿದೆ. ಇದು ಯಾವುದೇ ರೀತಿಯಲ್ಲೂ ಪ್ರಜಾಪ್ರಭುತ್ವ ವಿರೋಧಿಯಲ್ಲ. "ಕಾಮಾಲೆ ಕಣ್ಣಿನವರಿಗೆ ಲೋಕವೆಲ್ಲ ಹಳದಿ ಕಂಡಂತೆ" ಚೆಡ್ಡಿಗಳಿಗೆ ಗೌರಿ ಲಂಕೇಶ್ ನಕ್ಸಲೈಟಾಗಿ ಗೋಚರಿಸಿರುವುದು ಸಹಜ.

ಗೌರಿ ಲಂಕೇಶ್, ತೆಹೆಲ್ಕಾ ಇವೆಲ್ಲವು ನಮ್ಮ ವೈಚಾರಿಕತೆಯ, ಮಾನವೀಯತೆಯ ಮತ್ತು ಸಹೃದಯತೆಯ ಕೈಗನ್ನಡಿಗಳು. ಗಾಂಧೀಜಿಯ "Truth is God, God is truth" ಎಂಬ ಆತ್ಮಸಾಕ್ಷಾತ್ಕಾರದ ಪ್ರತಿಫಲನಗಳು. ಇವುಗಳ ಪರ ಧ್ವನಿ ಎತ್ತುವುದೇ ಮಾನನೀಯತೆಯ ತುದಿತದ ಪ್ರಾರಂಭ. ಎ.ಎ. ಶಫೀರ್‌ರವರು ಸೃಷ್ಟಿಸಿದ ಕಮ್ಯುನಿಟಿಗಳು ಮತ್ತು ಅವರ ಸದಾಶಯದ ಮನವಿಗೆ ನಾವೆಲ್ಲರೂ ಸ್ಪಂದಿಸಬೇಕಾಗಿದೆ. ನಾಡಿನಲ್ಲಿ ಫ್ಯಾಸಿಸ್ಟ್ ಸರ್ಕಾರ ಪತನಗೊಂಡಿದೆ. ಮುಂಬರುವ ಜನತಂತ್ರ ಸರ್ಕಾರದ ಆಗಮನದ ಸಂದರ್ಭಕ್ಕೆ, ಆರೋಗ್ಯಕಾರಿ ಜನಾಭಿಪ್ರಾಯವನ್ನು ಮೂಡಿಸಬೇಕಿದೆ.

-ಎಂ.ಆರ್. ವಿದ್ಯಾಧರ ರೈ, ಮಡಿಕೇರಿ

ಉಡುಪಿಯಲ್ಲಿ ಈ ವಾರ ನಡೆಯಲಿರುವ 74 ನೇ ಅಖಿಲ ಕನ್ನಡ ಸಾಹಿತ್ಯ ಸಮ್ಮೇಳನ ಸಮಿತಿಯಲ್ಲಿ ಸಂಘ ಪರಿವಾರದವರೇ ತುಂಬಿಕೊಂಡಿದ್ದಾರೆಂದು ಪತ್ರಿಕೆ ಸಮ್ಮೇಳನ ನಿಗದಿಯಾದಾಗಲೇ ಪ್ರಕಟಿಸಿತ್ತು. ಜತೆಗೆ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾಗಿರುವ ಶೇಷಗಿರಿ ರಾವ್ ಬಿಜೆಪಿ-ಆರ್‌ಎಸ್‌ಎಸ್ ಸಂಘ ಪರಿವಾರದ ಪ್ರತಿಪಾದಕರೂ ಹೌದು. ಆ ಕಾರಣಕ್ಕಾಗಿಯೇ ಪ್ರತಿಭಟನೆ ವ್ಯಕ್ತಪಡಿಸಿ ಬಂಡಾಯ ಸೌಹಾರ್ದ ಸಾಹಿತ್ಯ ಸಮ್ಮೇಳನವನ್ನು ಕರ್ನಾಟಕ ಕೋಮು ಸೌಹಾರ್ದ ವೇದಿಕೆ ವತಿಯಿಂದ ಹಮ್ಮಿಕೊಂಡಿದ್ದು ಸಂತಸದ ಸಂಗತಿ. ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಇಡೀ ಜನಾಂಗ-ಸಮುದಾಯದ ಪ್ರತೀಕ. ಆದರೆ ಇಲ್ಲಿ ನಡೆಯುತ್ತಿರುವುದೇನು? ಅದೊಂದು ಮೂಲಭೂತವಾದಿಗಳ ಸಮ್ಮೇಳನವೆ. ಸಮ್ಮೇಳನಾಧ್ಯಕ್ಷರು ಪ್ರಗತಿಪರರಿಗೆ, ಸಾಮಾಜಿಕ ಕಳಕಳಿ, ಚಿಂತನಾಶೀಲರಿಗೆ ಆದ್ಯತೆ ಕೊಡಬೇಕಿತ್ತು. ಹಿಂದುತ್ವವಾದಿಗಳಿಗೆ ಉಸ್ತುವಾರಿ ವಹಿಸಿದರೆ ಎಲ್ಲವೂ ಹೇಗೆ ಕೇಸರಿಮಯವಾಗುತ್ತದೆ ಎಂಬುದಕ್ಕೆ ಇದೊಂದು ನಿದರ್ಶನ.

ಸ್ಪಂದನ, ಸಹಾನುಭೂತಿ, ಸಹಭಾಗಿತ್ವ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ಕಾಣಲು ಸಾಧ್ಯವೇ? ಹಿಂದೂ-ಮೂಲಭೂತವಾದಿಗಳ ಯಶಸ್ವಿ ಭೋಜನ ಸಮ್ಮೇಳನ ಎನ್ನಬಹುದು. ಹಿಂದುತ್ವದ ರಾಜಕೀಯಕ್ಕೆ, ಕೋಮುದ್ವೇಷಕ್ಕೆ, ಜನರನ್ನು ಸಜ್ಜುಗೊಳಿಸುವ ಸಮ್ಮೇಳನವೆಂದರೂ ತಪ್ಪಾಗಲಾರದು.

ಕೋಮು ಸೌಹಾರ್ದಕ್ಕೆ ಜಯವಾಗಲಿ.

ಹಿಂದೂ ಮೂಲಭೂತವಾದಕ್ಕೆ ಧಿಕ್ಕಾರವಿರಲಿ.

-ಡಿ.ಎಲ್. ನಾಗರಾಜ್, ಹರಪನಹಳ್ಳಿ

ನವೆಂಬರ್ 21ರ ಸಂಚಿಕೆಯಲ್ಲಿ 'ಲಿಂಗಾಯತರ ಕೈಚಳಕ' ಎಂಬ ವರದಿಯಲ್ಲಿ ಶ್ರೀಶ್ರೀಶ್ರೀ 1008 ಜಗದ್ಗುರು ರಾಮ್ ಪದವಿಭೂಷಿತ ಶ್ರೀ ಭೀಮಶಂಕರ ಲಿಂಗ ಶಿವಾಚಾರ್ಯ ಭಗವತ್ಪಾದರು ಕೇದಾರ ಪೀಠ ಇವರ ಬಗ್ಗೆ ಬರೆದಿದ್ದೀರಿ. ಆದರೆ 1008 ಬಗ್ಗೆ ಸ್ವಾಮೀಜಿಗಳೇ ಅನೌನ್ಸ್ ಮಾಡಿಕೊಂಡಿರುತ್ತಾರೆ ಎಂದು ಹೇಳಿದ್ದೀರಿ. ಅದು ಸತ್ಯಕ್ಕೆ ದೂರವಾದ ವಿಚಾರ. ಶ್ರೀಶ್ರೀಶ್ರೀ 1008 ಎನ್ನುವುದು 1008 ಸಲ ಶ್ರೀ ಸೂಚಿಸುವ ಅರ್ಥವೇ ಹೊರತು ಬೇರೆ ಏನೂ ಅಲ್ಲ. ಮತ್ತು ಪತ್ರಿಕೆಯಲ್ಲಿ ನೀವು ಸ್ವಾಮಿಗಳ ಬಗ್ಗೆ 'ಸ್ವಾಮಿ' ಎಂದು ಬರೆದಿದ್ದೀರಿ. ಭ್ರಷ್ಟ ರಾಜಕಾರಣಿಗಳ ಬಗ್ಗೆ ಬರೆಯುವಂತೆ ಸ್ವಾಮಿಗಳ ಬಗ್ಗೆ ತಾವು ಬರೆಯಬಾರದೆಂಬುದು ನನ್ನ ಅನಿಸಿಕೆ.

-ಎಸ್.ಎಸ್. ರುದ್ರೇಶ್, ತುಮಕೂರು



ಕಮಲ್ ದಶಾವತಾರಿ ಕಮಾಲ್!

ಹಿಂದಿ, ತೆಲುಗು, ತಮಿಳು ಭಾಷೆಗಳಲ್ಲಿ ಏಕಕಾಲದಲ್ಲಿ ನಿರ್ಮಾಣವಾಗುತ್ತಿರುವ ಕಮಲ್ ಹಾಸನ್‌ರ ಬಹು ನಿರೀಕ್ಷಿತ ಚಿತ್ರ 'ದಶಾವತಾರಂ'ನ 2008ರ ಮಕರ ಸಂಕ್ರಾಂತಿಗೆ ಬಿಡುಗಡೆಯಾಗಬೇಕಿತ್ತು. ಆದರೆ ಗ್ರಾಫಿಕ್ಸ್ ಕೆಲಸ ಇನ್ನೂ ಬಾಕಿಯಿರುವುದರಿಂದ ಬಿಡುಗಡೆ ಇನ್ನಷ್ಟು ಮುಂದಕ್ಕೆ ಹೋಗಿದೆ.






ಇಷ್ಟಕ್ಕೂ ಈ ಸಿನಿಮಾ ಚಿತ್ರಪ್ರೇಮಿಗಳಲ್ಲಿ ಈ ಪರಿ ಕುತೂಹಲ ಹುಟ್ಟಿಸಲು ಕಾರಣವೂ ಇದೆ. ಇದುವರೆವಿಗೂ ಡಬಲ್, ಟ್ರಿಪಲ್ ಪಾತ್ರಗಳಲ್ಲಿ ಮಾತ್ರವಲ್ಲ 'ಮೈಖೆಲ್ ಮದನ್ ಕಾಮರಾಜನ್' ತರಹದ ಚಿತ್ರದಲ್ಲಿ ನಾಲ್ಕು ಪಾತ್ರಗಳನ್ನು ನಿರ್ವಹಿಸಿರುವ ಕಮಲ್‌ಹಾಸನ್ ಈ ಚಿತ್ರದಲ್ಲಿ ದಶಾವತಾರವನ್ನು ತಾಳಿ ದಾಖಲೆ ನಿರ್ಮಿಸಲಿದ್ದಾರೆ.

ಈ ಚಿತ್ರದ ನಾಯಕಿಯಾಗಿ ಮೆಳ್ಳಗಣ್ಣು ಸುಂದರಿ ಅಸಿನ್ ನಟಿಸುತ್ತಿದ್ದಾಳೆ. ಸಾಮಾನ್ಯವಾಗಿ ಒಂದು ಸಿನಿಮಾವೆಂದರೆ ನಾಯಕಿಗೆ ಒಂದು ತಿಂಗಳೋ ಎರಡು ತಿಂಗಳೋ ಕಾಲ್‌ಶೀಟ್ ಸಾಕಾಗುತ್ತದೆ. ಆದರೆ ಈ ಚಿತ್ರಕ್ಕಾಗಿ ಅಸಿನ್ ಬರೋಬ್ಬರಿ ಆರು ತಿಂಗಳ ಕಾಲ್‌ಶೀಟ್ ನೀಡಿದ್ದಳಂತೆ.

ಈ ಚಿತ್ರದ ಮತ್ತೊಂದು ಆಕರ್ಷಣೆ ಬಾಲಿವುಡ್‌ನ ಬಿಚ್ಚಮ್ಮ ಮಲ್ಲಿಕಾ ಶೆರಾವತ್. ಮಲ್ಲಿಕಾ ಶೆರಾವತ್ ಎಂದರೆ ಕೇವಲ ಅರೆಬರೆ ಬಟ್ಟೆಯಲ್ಲಿ ಕುಣಿಯುವ ನಟಿ ಎಂಬುದು ಎಲ್ಲರ ಅಭಿಪ್ರಾಯ.




ಆದರೆ 'ದಶಾವತಾರಂ'ನಲ್ಲಿ ಮಲ್ಲಿಕಾ ತನ್ನ ನಟನಾ ಚಾತುರ್ಯವನ್ನು ಹೊರಗೆಡಹುವಂತಹ ಒಂದೊಳ್ಳೆಯ ಪಾತ್ರವನ್ನು ನೀಡಿದ್ದಾರೆ ನಿರ್ದೇಶಕ ಕೆ.ಎಸ್. ರವಿಕುಮಾರ್.

ಇಷ್ಟೇ ಅಲ್ಲದೆ, 'ಆಪ್ತಮಿತ್ರ' ಖ್ಯಾತಿಯ ನಿರ್ದೇಶಕ ಪಿ.ವಾಸು ಅಪರೂಪಕ್ಕೊಮ್ಮೆ ಮತ್ತೆ ಬಣ್ಣ ಹಚ್ಚಿದ್ದಾರಲ್ಲದೆ, ಮೊದಲ ಬಾರಿಗೆ ವಿಲನ್ ಆಗಿ ನಟಿಸುತ್ತಿದ್ದಾರೆ. ಈ ಚಿತ್ರದ ಆಡಿಯೋವನ್ನು ಮಾರ್ಷಲ್ ಆರ್ಟ್ ಖ್ಯಾತಿಯ ಅಂತಾರಾಷ್ಟ್ರೀಯ ನಟ ಜಾಕಿಚಾನ್ ರಿಲೀಸ್ ಮಾಡಿದ್ದಾರೆ.

ಹಾಲಿವುಡ್ ಲೆವೆಲ್ಲಿನಲ್ಲಿ ತಯಾರಾಗುತ್ತಿರುವ ಈ ಚಿತ್ರ ದಲ್ಲಿ ಕಮಲ್ ಪ್ರೇಕ್ಷಕರ ಹೃದಯವನ್ನು ಕಮಾಲ್ ಮಾಡುತ್ತಾರಾ? ಎಂಬುದೇ ಪ್ರಶ್ನೆ.

■ ಜೆ. ಅರುಣ್



ಬಣ್ಣಮಯವಾಗಲಿರುವ 'ಸತ್ಯ ಹರಿಶ್ಚಂದ್ರ'

'ಸತ್ಯ ಹರಿಶ್ಚಂದ್ರ' ಚಿತ್ರವನ್ನು ಯಾರು ತಾನೆ ಮರೆಯಲು ಸಾಧ್ಯ? ಕಪ್ಪು ಬಿಳುಪಿನ ಈ ಚಿತ್ರವನ್ನು ಈಗ ಕೆಸಿಎನ್ ಚಂದ್ರು ಅವರು ಸುಮಾರು ಎರಡು ಕೋಟಿ ರೂಪಾಯಿ ವೆಚ್ಚದಲ್ಲಿ ಸಂಪೂರ್ಣವಾಗಿ ಕಲರ್ ಪ್ರಿಂಟ್‌ನಲ್ಲಿ ಹೊರತರುತ್ತಿದ್ದಾರೆ. ಇತ್ತೀಚೆಗಷ್ಟೇ ಹಿಂದಿಯಲ್ಲಿ 'ಮೊಗಲ್ ಎ ಆಜಾಂ' ಚಿತ್ರವನ್ನು ಸಂಪೂರ್ಣವಾಗಿ ಬಣ್ಣದಲ್ಲಿ ಹೊರತಂದಿದ್ದನ್ನು ಜನ ಅದ್ಭುತವಾಗಿ ಸ್ವೀಕರಿಸಿದ್ದರು.

ಈಗ 'ಸತ್ಯ ಹರಿಶ್ಚಂದ್ರ' ಚಿತ್ರಕ್ಕೆ ಒಂದು ಹೊಸ ಹಾಡನ್ನು ಸೇರಿಸಲು ಕೆಸಿಎನ್ ಚಂದ್ರು ಆಲೋಚಿಸಿದ್ದಾರೆ. ಅದಕ್ಕಾಗಿ ಸಂಗೀತ ನಿರ್ದೇಶಕ ಹಂಸಲೇಖ ಹಾಡೊಂದನ್ನು ಬರೆಯುತ್ತಿದ್ದಾರೆ.

ಈಗ ಹೊಸ ಹಾಡಿಗಾಗಿ ಜನ ಈ ಸಿನಿಮಾ ನೋಡುತ್ತಾರೋ? ಅಥವಾ ಬಣ್ಣದ ಹರಿಶ್ಚಂದ್ರನನ್ನು ನೋಡಲು ಥಿಯೇಟರಿಗೆ ಹೋಗುತ್ತಾರೋ? ನೋಡ ಬೇಕು.


ರೈಟ್ ಅಲ್ಲ, ರಾಂಗ್ ಆದ ಸಿನಿಮಾಗಳು

ಒಂದೆಡೆ ದೊಡ್ಡ ದೊಡ್ಡ ನಿರ್ಮಾಪಕರೆಲ್ಲ ತಮ್ಮ ಬಿಗ್‌ಬಜೆಟ್ ಸಿನಿಮಾಗಳನ್ನು ಬಿಡುಗಡೆ ಮಾಡಲು ಹರಸಾಹಸ ಮಾಡುತ್ತಿದ್ದರೆ, ಇನ್ನೊಂದೆಡೆ 'ರೈಟ್ ಆದ್ರೆ...', 'ಪ್ರೀತಿಯ ಹುಚ್ಚ', 'ಆಪರೇಶನ್ ಅಂಕುಶ' ಎಂಬ ತಗಡು ಸಿನಿಮಾಗಳು ಮಾತ್ರ ಸದ್ದಿಲ್ಲದೇ ಬಿಡುಗಡೆಗೊಂಡು ಪ್ರೇಕ್ಷಕರನ್ನು ಪಡಿಪಾಟಲಿಗೆ ಸಿಲುಕಿಸಿವೆ.



ಕಳೆದ ವಾರ ಬಿಡುಗಡೆಯಾದ 'ರೈಟ್ ಆದ್ರೆ' ಎಂಬ ವಿಲಕ್ಷಣ ಹೆಸರಿನ ಸಿನಿಮಾ ಜನರಿಗೆ ತಲೆಚಿಟ್ಟು ಹಿಡಿಸಿತ್ತು. ಆದರೆ ಈ ಚಿತ್ರದ ತಂಡಕ್ಕೆ ಅದೆಂತಹ ಆತ್ಮವಿಶ್ವಾಸ ಅಂದರೆ ಅವರು ಚಿತ್ರದ ನಾಯಕ, ನಾಯಕಿಯರ ಫೋಟೋಗಳನ್ನೂ ಪೋಸ್ಟರ್‌ಗಳ ಮೇಲೆ ಹಾಕಿರಲಿಲ್ಲ. "ಯಾಕೆ ಹೀಗೆ"! ಎಂದು ಪ್ರಶ್ನಿಸಿದರೆ "ಚಿತ್ರ ನೂರು ದಿನ ಓಡಿದ ನಂತರ ಹಾಕುತ್ತೇವೆ" ಎಂದು ಉತ್ತರಿಸಿದ್ದರು. ಆದರೆ ನೂರು ದಿನವಿರಲಿ, ನೂರನೆ ನಿಮಿಷಕ್ಕೇ ಇವರ 'ರೈಟ್ ಆದ್ರೆ' ಎಂಬ ಚಿತ್ರ ಸಂಪೂರ್ಣವಾಗಿ 'ರಾಂಗ್' ಹೊಡೆದಿತ್ತು.

ಇದರ ಜೊತೆಗೆ ಈ ವಾರ ರಿಲೀಜ್ ಆಗಿರುವ 'ಆಪರೇಶನ್ ಅಂಕುಶ' ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದೆ. ದೇಸಾಯಿಯವರ 'ನಿಷ್ಕರ್ಷ'ದಂತೆ 24 ಗಂಟೆಯಲ್ಲಿ ಒಂದೇ ಬಂಗಲೆಯಲ್ಲಿ ನಡೆಯುವ ಕಥೆ ಈ ಚಿತ್ರದ ಮೂಲವಸ್ತು. ಆದರೆ ನಿರ್ದೇಶಕರ ಕಳಪೆತನಕ್ಕೆ ಹಿಡಿದ ಕನ್ನಡಿಯಂತಿದೆ ಈ ಚಿತ್ರ. ಈ ಚಿತ್ರವನ್ನು ನೋಡಿ ಹೊರಬಂದ ಚಿತ್ರದ ನಾಯಕನೇ ಗೊಳೋ ಎಂದು ಅತ್ತು ಪತ್ರಕರ್ತರಲ್ಲಿ ಕ್ಷಮೆ ಯಾಚಿಸಿದ್ದಾನೆ ಅಂದಮೇಲೆ ಈ ಚಿತ್ರ ಇನ್ಯಾವ ಪರಿ ಕುಲಗೆಟ್ಟಿರಬೇಕು ನೀವೇ ಯೋಚಿಸಿ.




'ಆಪರೇಷನ್ ಅಂಕುಶ' ಚಿತ್ರ ಯಾವ ರೀತಿಯಲ್ಲೂ ಯಾರಿಗೂ ಒಂದಿಷ್ಟೂ ಸಮಾಧಾನ, ಸಂತೋಷ ನೀಡದ ಚಿತ್ರ. ಇಂತಹ ಚಿತ್ರಗಳನ್ನು ನಿರ್ಮಿಸಿ ಅನವಶ್ಯಕವಾಗಿ ಕೈಸುಟ್ಟುಕೊಳ್ಳುವ ನಿರ್ಮಾಪಕರಿಗೆ ಎಂದು ಬುದ್ಧಿಬರುತ್ತದೋ ಗೊತ್ತಿಲ್ಲ, ಒಟ್ಟಿನಲ್ಲಿ ಇಂತಹ ಪ್ರಯೋಗಾತ್ಮಕ ಚಿತ್ರಗಳ ಬಗ್ಗೆ ಪ್ರೇಕ್ಷಕ ಎಚ್ಚರದಿಂದಿದ್ದರೆ ವಾಸಿ.

ಬೆಳ್ಳಿತೆರೆಗೆ ಪ್ರವೀಣ್ ಗೋಡ್ಖಿಂಡಿ


ಪ್ರವೀಣ್ ಗೋಡ್ಖಿಂಡಿ ಕಿರುತೆರೆಯಿಂದ ಬೆಳ್ಳಿಪರದೆಗೆ ಕಾಲಿಟ್ಟಿದ್ದಾರೆ.

ಈ ಟೀವಿಯಲ್ಲಿ 'ರಾಗರಂಜಿನಿ' ಕಾರ್ಯಕ್ರಮ ನೀಡಿ ಕರ್ನಾಟಕದ ಮನೆಮಾತಾದ ಪ್ರವೀಣ್ ಗೋಡ್ಖಿಂಡಿ 'ಕರೆಯೋ ಕೋಗಿಲೆ ಮಾಧವನ' ಎಂಬ ಚಿತ್ರಕ್ಕೆ ಸಂಗೀತ ನಿರ್ದೇಶನ ಮಾಡುವ ಮುಖಾಂತರ ಬೆಳ್ಳಿತೆರೆಗೂ ಕಾಲಿಡುತ್ತಿದ್ದಾರೆ.



ಪುಟ್ಟಣ್ಣ ಕಣಗಾಲ್ ಅವರ ಸಾವಿರ ಮೆಟ್ಟಿಲು ಚಿತ್ರ ಮೊನ್ನೆ ಮೊನ್ನೆ ಪುನರಾರಂಭವಾದಾಗ ಅದಕ್ಕೆ ಗೋಡ್ಖಿಂಡಿ ಸಂಗೀತ ನೀಡಿ ಚಿತ್ರ ಸಂಪೂರ್ಣವಾಗಲು ಸಹಕರಿಸಿದ್ದರು. ಆದರೆ ಸ್ವತಂತ್ರ ಚಿತ್ರವೊಂದಕ್ಕೆ ಪೂರ್ಣಪ್ರಮಾಣದಲ್ಲಿ ಸಂಗೀತ ನೀಡುತ್ತಿರುವುದು ಇದೇ ಮೊದಲು. ಅಂದ ಹಾಗೆ ಈ ಹಿಂದೆ ಅನೇಕ ಚಿತ್ರಗಳಿಗೆ ಕಥೆ-ಸಂಭಾಷಣೆ ಬರೆದಿರುವ ಕೃಷ್ಣಮೂರ್ತಿ ನಾಡಿಗ್ ಈ ಚಿತ್ರದ ಮುಖಾಂತರ ಸ್ವತಂತ್ರ ನಿರ್ದೇಶಕರಾಗಿದ್ದಾರೆ.


ಅಂಬಿ ಮಿಂಚಿಂಗ್ ವಿಷ್ಣು ಫೇಡಿಂಗ್



ವಿಷ್ಣುವರ್ಧನ್ ಮತ್ತು ಅಂಬರೀಶ್ ಇಬ್ಬರೂ ಒಂದೇ ಕಾಲಘಟ್ಟದಲ್ಲಿ ಸಿನಿಮಾ ರಂಗಕ್ಕೆ ಕಾಲಿಟ್ಟು ತಮ್ಮದೇ ಆದ ಪ್ರೇಕ್ಷಕ ವೃಂದವನ್ನು ರಚಿಸಿಕೊಂಡಿದ್ದರು. ಆದರೆ ಇತ್ತೀಚೆಗೆ ಈ ಇಬ್ಬರು ಗಳಸ್ಯಕಂಠಸ್ಯ ಮಿತ್ರರ ದಾರಿ ಬೇರೆ ಬೇರೆ ಆಗಿದೆ.

ಕಳೆದ ಒಂದು ದಶಕದಿಂದ ರಾಜಕೀಯದತ್ತ ಹೆಚ್ಚು ಗಮನ ಹರಿಸಿದ್ದ ಅಂಬಿ ಇತ್ತೀಚೆಗೆ ವಿವಿಧ ಪಾತ್ರಗಳನ್ನು ಒಪ್ಪಿಕೊಂಡು ಮತ್ತೆ ಚಿತ್ರರಂಗದಲ್ಲಿ ಸಕ್ರಿಯರಾಗಿದ್ದಾರೆ. ಪ್ರೇಮ್ ನಿರ್ದೇಶನದ 'ಪ್ರೀತಿ ಯಾಕೆ ಭೂಮಿ ಮೇಲಿದೆ' ಚಿತ್ರದಲ್ಲಿ ಸ್ಮಶಾನ ಕಾಯುವ ಮುದುಕನಾಗಿ, ಅರ್ಜುನ್ ಸರ್ಜಾ ತಂಗಿಯ ಮಗನ 'ವಾಯುಪುತ್ರ'ದಲ್ಲಿ ಮನೋವೈದ್ಯನಾಗಿ, 'ತಿಪ್ಪಾರಳ್ಳಿಯ ತರ್ಲೆಗಳು' ಚಿತ್ರದಲ್ಲಿ ಕನ್ವರ್ ಲಾಲ್‌ನಾಗಿ ಮತ್ತೆ ಮಿಂಚುತ್ತಿದ್ದಾರೆ.

ಆದರೆ ಇದೇ ಹೊತ್ತಿನಲ್ಲಿ ವಿಷ್ಣು ಕತೆಯೇ ಬೇರೆಯಾಗಿದೆ. ಕಳೆದ ಒಂದು ದಶಕದಿಂದ ವಿಷ್ಣುವರ್ಧನ್ ನಟಿಸಿದ್ದ ಪುರುಷ ಪ್ರಧಾನ ಸಿನಿಮಾಗಳನ್ನು ನೋಡಿ ನೋಡಿ ಜನ ಬೇಸತ್ತಿದ್ದಾರೆ. ವಿಷ್ಣು ತನ್ನ ಮೀಸೆಯನ್ನು ಎತ್ತ ತಿರುಗಿಸಿದರೂ ಜನ ಇವರತ್ತ ನೋಡದ, ಕಲರ್ ಕಲರ್ ಗಡ್ಡ ಕೂಡ ವರ್ಕ್‌ಔಟ್ ಆಗದಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ.



ಈ ವರ್ಷವೇ ನೋಡಿ, ವರ್ಷದ ಆರಂಭದಲ್ಲಿ ಬಿಡುಗಡೆಯಾದ 'ಏಕದಂತ' ದಂತಭಗ್ನಗೊಂಡು ಎರಡೇ ವಾರಕ್ಕೆ ಎತ್ತಂಗಡಿಯಾಯಿತು. ಅನಂತರ ರೈತರ ಸಮಸ್ಯೆಗಳಿಗೆ ನಾಗತಿಹಳ್ಳಿಯವರ ಕಲ್ಪಿತ ಪರಿಹಾರವನ್ನು ಹಿಡಿದು ಮಾತನಾಡಲು ಬಂದ ಮಲ್ಲಿಗೆಯನ್ನು ಜನ ಮಾತನಾಡಿಸಲೇ ಇಲ್ಲ. ಇವೆರಡಲ್ಲದೆ, 'ಕ್ಷಣ ಕ್ಷಣ' ಕೂಡ ಕ್ಷಣ ವೇಗದಲ್ಲಿ ಮಾಯವಾಯಿತು.

ಪರಿಣಾಮವಾಗಿ 'ವಿಷ್ಣುಭಕ್ತ' ನಿರ್ಮಾಪಕರೆಲ್ಲ ಚೊಂಬು ಹಿಡಿಯು ವಂತಾಗಿದೆ. ಈಗ ಉಳಿದಿರುವುದು 'ಈ ಬಂಧನ' ಮಾತ್ರ. ಈ ಚಿತ್ರ ಬಿಡುಗಡೆಗೆ ಸಿದ್ಧವಾಗಿದ್ದರೂ ಹಲವಾರು ಎಡವಟ್ಟುಗಳನ್ನು ಎದುರಿಸುತ್ತಿದೆ. 'ಈ ಬಂಧನ' ಬಿಡುಗಡೆಯಾಗಿ ಯಶಸ್ವಿಯಾದರೆ ಮಾತ್ರ ವಿಷ್ಣು ಚಿತ್ರರಂಗ ದಲ್ಲಿ ಉಳಿದ ಹಾಗೆ. ಇಲ್ಲವಾದಲ್ಲಿ 'ವಿಷ್ಣು ಜಮಾನ' ಮುಗಿ ದಂತೆಯೇ.

ವಿಷ್ಣುವರ್ಧನ್‌ರಂತಹ ನುರಿತ ಕಲಾವಿದರು, ಬರೀ ನಾಯಕ ಪಾತ್ರಕ್ಕೇ ಅಂಟಿಕೊಳ್ಳದೇ ತಮ್ಮ ಹೀರೋಯಿಸಂಗಳನ್ನು ಬದಿಗಿಟ್ಟು ಅಂಬರೀಶ್, ಅನಂತ್‌ರಂತೆ ಬೇರೆ ಬೇರೆ ಪಾತ್ರಗಳಲ್ಲೂ ಕಾಣಿಸಿಕೊಂಡರೆ ಎಷ್ಟು ಚೆನ್ನ ಅಲ್ಲವೇ?

ಪ್ರೇಮದಲ್ಲಿ ಬಿದ್ದಿರುವ ಮುದುಕನೆಂದರೆ ಚಳಿಗಾಲದಲ್ಲಿನ ಹೂವಿದ್ದಂತೆ -ಪೋರ್ಚುಗೀಸ್ ಗಾದೆ

R B P LANKESH, Kannada Weekly Price Rs. 10/- 19-12-2007 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4.

ಜೈಲಿಗೆ ಹೋದ ನಟನಿಗೆ ಕೊಲೆ ಮಾಡು ಅಂದಿದ್ರೆ?



ಆನೇಕಲ್ ಬಾಲರಾಜ್ ತಮ್ಮ ಮಗನಿಗಾಗಿ ನಿರ್ಮಿಸುತ್ತಿರುವ 'ಗೊಲ್ಲ' ಅಲಿಯಾಸ್ 'ಕೆಂಪ' ಚಿತ್ರದ ನಾಯಕ ಸಂತೋಷ್‌ನನ್ನು ಎರಡು ದಿನ ಜೈಲಿನಲ್ಲಿ ಕೊಳೆಸಲಾಗಿದೆ.

ಹಾಗಂತ ಈ ಕೆಂಪ ಯಾವುದೇ ಕ್ರೈಂ ಮಾಡಿರಲಿಲ್ಲ. ಈ ಚಿತ್ರದಲ್ಲಿ ನಾಯಕ ಜೈಲು ಪಾಲಾಗಿ ಮತ್ತೆ ಬಿಡುಗಡೆಯಾಗುವ ದೃಶ್ಯವಿದೆಯಂತೆ. ಜೈಲಿಗೆ ಎಂಟ್ರಿ ಕೊಡುವಾಗ ಚೆನ್ನಾಗಿ ಲವಲವಿಕೆಯಿಂದ ನಟಿಸಿದ ನಾಯಕ ಬಿಡುಗಡೆ ದೃಶ್ಯದಲ್ಲಿ ನಿರ್ದೇಶಕರಿಗೆ ತೃಪ್ತಿಯಾಗುವಂತೆ ನಟಿಸಲಿಲ್ಲವಂತೆ. ಟೇಕುಗಳ ಮೇಲೆ ಟೇಕು ತೆಗೆದೂ ತೆಗೆದೂ ಹೈರಾಣಾದ ನಿರ್ದೇಶಕ ಜಗದೀಶ್ ಪರಪ್ಪನ ಅಗ್ರಹಾರ ಜೈಲಿನ ಅಧಿಕಾರಿಯೊಬ್ಬರನ್ನು ವಿನಂತಿಸಿ ಈ ನಾಯಕನನ್ನು ಎರಡು ದಿನ ಜೈಲಿನಲ್ಲಿ ಬಂಧಿಸಿಟ್ಟರಂತೆ. ನಂತರ ಆ ದೃಶ್ಯವನ್ನು ಚಿತ್ರೀಕರಿಸಿದರಂತೆ.

ಇದರಿಂದ ದೃಶ್ಯಕ್ಕೆ ನೈಜತೆ ಬಂದಿದೆ ಎಂಬುದು ನಿರ್ದೇಶಕರ ವಾದ. ಒಂದು ವೇಳೆ ಈ ಚಿತ್ರದಲ್ಲಿ ನಾಯಕ ಹೊಡೆದಾಡುವ ದೃಶ್ಯವಿದ್ದಲ್ಲಿ ನ್ಯಾಚುರಲ್ ಫೀಲ್‌ಗೋಸ್ಕರ ಆತನ ಕೈಗೆ ಲಾಂಗು ಮಚ್ಚು ನೀಡಿ ಒಂದೆರಡು ಹೆಣ ಉರುಳಿಸುತ್ತಿದ್ದರಾ? ಹಾಗೆಯೇ ರೇಪ್ ದೃಶ್ಯವಿರುವಾಗ.....?



ಹಾಳು ಬಿತ್ತು ಇವರ ನೈಜತೆಗೆ.

ಇದೆಲ್ಲಾ ಒಂದೆಡೆ ಇರಲಿ, ಯಾವುದೇ ಕ್ರೈಂ ಮಾಡದ ಈ ಹುಡುಗನನ್ನು ಹೇಗೆ ಬಂಧಿಸಿದಿರಿ? ಅದೂ ಸೆಂಟ್ರಲ್ ಜೈಲಲ್ಲಿ? ಎಂದು ಪ್ರಶ್ನಿಸಿದರೆ "ನಾವು ಲೀಗಲ್‌ಆಗಿ ಅರೆಸ್ಟ್ ಮಾಡ್ಲಿಲ್ಲ ಸಾ... ಇಲ್ಲೀಗಲ್ಲು! ಆಫೀಸರ್‌ನ ರಿಕ್ವೆಸ್ಟ್ ಮಾಡ್ದೆ. ಅದಕ್ಕೆ ಅವ್ರು ನನ್ನ ಹೆಸ್ರು ಎಲ್ಲೂ ಹೇಳ್ಬಾರ್ದು ಕಣ್ರೀ... ಅಂತ ಪರ್ಮೀಶನ್ ಕೊಟ್ರು" ಅಂತ ಪೆಕರುಪೆಕರಾಗಿ ಉತ್ತರಿಸುತ್ತಾನೆ ನಿರ್ದೇಶಕ ಜಗದೀಶ್.

ಈ ಬಗ್ಗೆ ಯಾರಾದರೂ ಕಂಪ್ಲೇಂಟ್ ಕೊಟ್ಟರೆ ಆ ಆಫೀಸರ್ ಸಮೇತ ನಿರ್ದೇಶಕ ಜಗದೀಶನೂ ನಿಜವಾಗಿ ಕಂಬಿ ಎಣಿಸಬೇಕು ಎಂಬುದು ಈ ಮಹಾನುಭಾವನಿಗೆ ತಿಳಿದಂತಿಲ್ಲ.

ನಿರ್ದೇಶಕ ಜಗದೀಶ್ ಪಬ್ಲಿಸಿಟಿಗೋಸ್ಕರ ಇಂತಹ ಗಿಮಿಕ್‌ಗಳನ್ನು ಮಾಡುವುದು ಅಚ್ಚರಿ ಏನಲ್ಲ. ಎಷ್ಟೇ ಆದರೂ ಈತ ಗಿಮಿಕ್ ವೀರ ಪ್ರೇಮ್ ಗರಡಿಯಿಂದ ಬಂದವ ತಾನೆ?

'SO'ರುತಿಹುದು ಪ್ರೇಮ್ ನಾಲಿಗೆ!



ಮುಕ್ಕಾಲು ವರ್ಷದಿಂದ ಸುತ್ತೀ ಸುತ್ತೀ ಸುಸ್ತಾಗಿರುವ ಪ್ರೇಮ್ ತಮ್ಮ 'ಪ್ರೀತಿ ಏಕೆ ಭೂಮಿ ಮೇಲಿದೆ' ಯನ್ನು ಸದ್ಯದಲ್ಲೇ ಬಿಡುಗಡೆ ಮಾಡಲು ಪಣತೊಟ್ಟು ನಿಂತಿದ್ದಾರೆ.

ಈಗ ಬರುತ್ತೆ, ಆಗ ಬರುತ್ತೆ ಎಂದು ಕಾದೂ ಕಾದೂ ಸುಮ್ಮನಾದ ಜನ ಈಗ 'ಪ್ರೀತಿ ಏಕೆ ಭೂಮಿ ಮೇಲಿದೆ' ಹೆಸರು ಕೇಳಿದರೆ ವಾಕರಿಕೆ ಬಂದವರಂತೆ ಮುಖ ಕಿವುಚುವಂತಾಗಿದೆ.

ಪ್ರೇಮ್ ಎಂಥದ್ದೇ ಗಿಮಿಕ್ ಮಾಡುತ್ತಿದ್ದರೂ ಗಾಂಧಿನಗರಿಗಳು ಮಾತ್ರ ಚಿತ್ರದ ಬಗ್ಗೆ ಅಂಥಾ ಒಳ್ಳೇ ಮಾತುಗಳನ್ನು ಆಡುತ್ತಿಲ್ಲ. "ಗಾಂಧಿನಗರದ ಮಾತಿಗೆ ಐ ಡೋಂಟ್ ಕೇರ್. ನಾನು ಸಿಕ್ಕಾಪಟ್ಟೆ ರಿಸ್ಕ್ ತಗೊಂಡು ಬ್ಯೂಟಿಫುಲ್ ಸಿನಿಮಾ ಮಾಡಿದ್ದೀನಿ. ಸೊ.. ಜನ ನನ್ನ ಸಿನಿಮಾ ನೋಡೇ ನೋಡ್ತಾರೆ. ಟಿಕೆಟ್‌ಗಾಗಿ ಈಗ್ಲೇ ಜನ ಕಪಾಲಿ ಮುಂದೆ ಕ್ಯೂ ನಿಂತವ್ರೆ, ಸೊ... ನನ್ನ ಸಿನಿಮಾ ಸಕ್ಸಸ್ ಆಗೇಆಯ್ತದೆ" ಎಂಬ ಮಾತುಗಳನ್ನು ಪ್ರೇಮ್ 'SO'ರಿಸುತ್ತಿದ್ದಾರೆ.

ಪ್ರೇಮ್ ಏನೇ ಹೇಳಿದರೂ ಚಿತ್ರ ಬಿಡುಗಡೆಯಾದ ನಂತರವೇ ಅದರ ಬಂಡವಾಳ ಬಯಲಾಗುತ್ತದೆ. ಹಾಗೆಂದು ಈ ಪ್ರಚಾರ ಪ್ರಿಯ ಪ್ರೇಮ್‌ನನ್ನು ಅಷ್ಟು ಸುಲಭವಾಗಿ ತಳ್ಳಿಹಾಕುವಂತಿಲ್ಲ. ಸಿನಿಮಾ ಮಾಧ್ಯಮದ ಮೇಲೆ ಪ್ರೇಮ್‌ಗೆ ಬಲವಾದ ಹಿಡಿತವಿದೆ ಎಂಬುದು ಈತನ ವಿರೋಧಿಗಳೂ ಒಪ್ಪುವ ಸತ್ಯ. 'ಪ್ರೀಯಾಭೂಮೇ' ಈ ಸತ್ಯವನ್ನು ಅಸತ್ಯವಾಗಿಸುತ್ತದೆಯೋ ಎಂಬುದನ್ನು ನೋಡಬೇಕು.





ಮಳ್ಳಿ ಪುಟ್ಟಿಂಟುಕು

ನಮ್ಮ ಆಂಧ್ರವಾಳ್ಳು ಸಾಯಿಪ್ರಕಾಶ್ ನಿರಂತರ ಸೋಲಿನಿಂದ ಸುಸ್ತಾಗಿದಿದ್ದಾರೆ. ರವಿಚಂದ್ರನ್‌ನಂಥ ಸ್ಟಾರ್ ನಟನನ್ನು ಹಾಕಿಕೊಂಡು ಮಾಡಿದ 'ಯುಗಾದಿ' ಮೊದಲಿಗೆ ಹಾದಿತಪ್ಪಿತ್ತು, ನಂತರ ಬಿಡುಗಡೆಯಾದ 'ರೋಡ್ ರೋಮಿಯೋ' ನನ್ನು ಜನ ತಿರುಗಿಯೂ ನೋಡಲಿಲ್ಲ. ಇನ್ನು ಎರಡು ವಾರಗಳ ಹಿಂದೆ ಬಂದ 'ಹೆತ್ತರೆ ಹೆಣ್ಣನ್ನೇ ಹೆರಬೇಕು' ಚಿತ್ರಕ್ಕೆ ಸರಿಯಾದ ಪ್ರಸವವಾಗದೆ ಸಾಯಿ ಸಂಕಟಕ್ಕೆ ಸಿಲುಕಿದ್ದಾರೆ.

ಹೆತ್ತ 'ಹೆಣ್ಣು' ಕೈಕೊಟ್ಟಿರುವ ಈ ಪರಿಸ್ಥಿತಿಯಲ್ಲಿ ಸಾಯಿ ನಂಬಿರುವುದು 'ಲವ-ಕುಶ' ಎಂಬ ಅವಳಿ ಮಕ್ಕಳನ್ನು ಮಾತ್ರ. "ಲವ-ಕುಸ ತುಂಬ ಬಾಗುಂದಿ. ಶಿವಣ್ಣ-ಉಪ್ಪಿ ಇಬ್ಬರೂ ಚೆನ್ನಾಗಿ ನಟಿಸಿದ್ದಾರು..." ಎಂದು ತೆಲುಗನ್ನಡದಲ್ಲಿ ಕೊಚ್ಚಿಕೊಳ್ಳುತ್ತಿದ್ದಾರೆ ಸಾಯಿ. ಒಂದು ವೇಳೆ ಈ ಚಿತ್ರವೂ ಕೈಕೊಟ್ಟರೆ ವಿಧಿ ಇಲ್ಲದೆ ಸಾಯಿ ಗಂಟುಮೂಟೆ ಸಮೇತ ಆಂಧ್ರಕಡೆ ಪ್ರಯಾಣ ಬೆಳೆಸಬೇಕಾಗುತ್ತದೆ. ಪಾಪ ಎನ್ನದೆ ನಮ್ಮಲ್ಲಿ ಬೇರೆ ಪದವಿಲ್ಲ.

ಕಳ್ಳ | ಕಳ್ಳ | ಕತೆ | ಕಳ್ಳ!






'ಮೊಗ್ಗಿನ ಮನಸ್ಸು' ಚಿತ್ರ ಈಗ ಮುಕ್ತಾಯಗೊಂಡಿದೆ. 'ಮುಂಗಾರು ಮಳೆ' ಖ್ಯಾತಿಯ ನಿರ್ಮಾಪಕ ಕೃಷ್ಣಪ್ಪ ನಿರ್ಮಾಣದ ಈ ಚಿತ್ರ ಈಗ ಅನಗತ್ಯವಾಗಿ ಸುದ್ದಿಯಲ್ಲಿದೆ.

"ಈ ಚಿತ್ರದ ಕಥೆ ನನ್ನದು. ಇದನ್ನು ಶಶಾಂಕ್ ಕಳ್ಳತನ ಮಾಡಿದ್ದಾರೆ" ಎಂದು ಹಿರಿಯ ನಿರ್ದೇಶಕ ರಾಜೇಂದ್ರಸಿಂಗ್ ಬಾಬು ಛೇಂಬರ್‌ಗೆ ದೂರು ನೀಡಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿದ ಯುವ ನಿರ್ದೇಶಕ ಶಶಾಂಕ್ "ಈ ಕಥೆ ಜರ್ಮನ್ ಚಿತ್ರದ ಒಂದು ಎಳೆ. ಅದನ್ನು ನೋಡಿಯೇ ಬಾಬು 'ಟಿನ್ ಟಿನ್' ಎಂಬ ಚಿತ್ರ ಮಾಡಲು ಹೊರಟಿದ್ದರು. ಆ ಚಿತ್ರದ ಕಥೆಯ ಚರ್ಚೆಯಲ್ಲಿ ನಾನೂ ನಾಲ್ಕು ದಿನ ಭಾಗವಹಿಸಿದ್ದೆ ನಿಜ. ಆದರೆ ಈ ಕತೆ ಅವರದ್ದಲ್ಲ" ಎಂದು ಎದುರೇಟು ನೀಡಿದ್ದಾರೆ. ಇಲ್ಲಿ ಇನ್ನೊಂದು ತಮಾಷೆಯ ಸಂಗತಿ ಯಾವುದೆಂದರೆ ಈ ಚಿತ್ರದ ಮುಹೂರ್ತದ ಸಂದರ್ಭದಲ್ಲಿ "ಇದು ನನ್ನ ಸ್ವಂತ ಕತೆ" ಎಂದು ಶಶಾಂಕ್ ಜಂಬ ಕೊಚ್ಚಿಕೊಂಡಿದ್ದರು!

ಈ ಕತೆ 'ಕಳ್ಳರ' ವಿವಾದಕ್ಕೆ ಮೂಲ ಕಾರಣ ಹಂಸಲೇಖ. ತಮ್ಮ ನಿರ್ಮಾಣದ 'ಸುಗ್ಗಿ' ಚಿತ್ರ ಸೋತ ನಂತರ ಹಂಸಲೇಖ 'ಕಥಾಕಣಜ'ವೆಂಬ ಸಂಸ್ಥೆಯನ್ನು ಹುಟ್ಟುಹಾಕಿದ್ದರು. ಆ ಸಂಸ್ಥೆಯಲ್ಲಿ ಸಿನಿಮಾಗಳ ಕಥೆಗಳ ಹೆಣೆಯುವಿಕೆಯೇ ಮುಖ್ಯ ಉದ್ಯಮವಾಗಿತ್ತು. ಆ ಸಂದರ್ಭದಲ್ಲೇ ಸಿಂಗ್ ಬಾಬು ಮತ್ತು ಶಶಾಂಕ್ ಹಲವಾರು ವಾರಗಳನ್ನೇ ಹಂಸಲೇಖರ ಜೊತೆ ಕಳೆದಿದ್ದರು. ಆದರೆ 'ಕಥಾಕಣಜ' ಟೇಕ್ ಆಫ್ ಆಗಲೇ ಇಲ್ಲ. ಅದರ ಬದಲಿಗೆ ಕಣಜದಲ್ಲಿದ್ದ ಒಳ್ಳೆಯ ಕಥೆಯೊಂದನ್ನು ಈ ಹಿರಿಯ ಮತ್ತು ಕಿರಿಯ ನಿರ್ದೇಶಕರು ಕದ್ದುಕೊಂಡಿದ್ದಾರೆ. ಈಗ ಕಳ್ಳ ಯಾರು ಮಳ್ಳ ಯಾರು ಎಂಬುದನ್ನು ನಿರ್ಧರಿಸಲು ಹಂಸಲೇಖರವರೇ ಸೂಕ್ತ ವ್ಯಕ್ತಿ ಎನಿಸುತ್ತದಲ್ಲವೇ?!




ಕೆಂಪಾದ ಗೊಲ್ಲ

ಆನೇಕಲ್ ಬಾಲರಾಜ್ ಅವರ 'ಗೊಲ್ಲ' ಕೊನೆಗೂ 'ಕೆಂಪ' ಆಗಿದ್ದಾನೆ. ಈ ಚಿತ್ರ ಆರಂಭವಾಗುವಾಗಲೇ ಗೊಲ್ಲ ಜನಾಂಗದವರು ಚಿತ್ರದ ಹೆಸರಿನ ಬಗ್ಗೆ ಆಕ್ಷೇಪ ಎತ್ತಿದ್ದರು. ಆದರೆ ಅಂತಹ ಆಕ್ಷೇಪಾರ್ಹ ವಿಷಯಗಳು ಯಾವುದೂ ಇಲ್ಲ ಎಂದು ಸ್ವತಃ ಗೊಲ್ಲ ಜನಾಂಗದವರೇ ಆದ ಬಾಲರಾಜ್ ಸ್ಪಷ್ಟೀಕರಣ ನೀಡಿದ್ದರು. ಅಷ್ಟೇ ಅಲ್ಲ, ಯಾವುದೇ ಕಾರಣಕ್ಕೆ ಚಿತ್ರದ ಹೆಸರನ್ನು ಬದಲಾಯಿಸುವುದಿಲ್ಲ ಎಂದು ಹಠ ಹಿಡಿದಿದ್ದರು.

ಈಗ ಚಿತ್ರ ಮುಕ್ತಾಯದ ಹಂತ ತಲುಪಿದೆ. ದಿಢೀರನೆ ಬಾಲರಾಜ್ ಈಗ ಹಿಂದಿನ ಆರ್ಭಟ ಕಳೆದುಕೊಂಡು ಮೌನವಾಗಿಬಿಟ್ಟಿದ್ದಾರೆ. ಅಷ್ಟೇ ಅಲ್ಲ, ಗೊಲ್ಲ ಜನಾಂಗದವರ ಒತ್ತಾಯಕ್ಕೆ ಮಣಿದು ಚಿತ್ರಕ್ಕೆ 'ಕೆಂಪ' ಎಂಬ ಹೆಸರಿಟ್ಟಿದ್ದಾರೆ.

ಈ ಹಿಂದೆ ರವಿಚಂದ್ರನ್ ನಟಿಸುತ್ತಿದ್ದ 'ಬ್ರಾಹ್ಮಣ' ಚಿತ್ರಕ್ಕೆ ವಟುಗಳು ಆಕ್ಷೇಪವೆತ್ತಿದಾಗ ಚಿತ್ರಕ್ಕೆ 'ರವಿಶಾಸ್ತ್ರಿ' ಎಂದು ಮರುನಾಮಕರಣ ಮಾಡಲಾಗಿತ್ತು. ಆದರೆ ಅದಕ್ಕಿಂತ ಮೊದಲು 'ಶಾಸ್ತ್ರಿ' ಎಂಬ ಚಿತ್ರದಲ್ಲಿ ನಟ ದರ್ಶನ್ ಲಾಂಗು ಮಚ್ಚುಗಳನ್ನು ಹಿಡಿದಿದ್ದರು. ಆದರೆ ಆಗ ಆದ್ಯಾಕೋ ಜನಿವಾರಿಗಳು ತೆಪ್ಪಗೆ ಕುಳಿತಿದ್ದರು. ಅಂತೂ ಇಂತು ಇತ್ತೀಚೆಗೆ ಸಿನಿಮಾದವರಿಗೆ ಜಾತಿ ಮುಖಂಡರಿಂದ ಇಂತಹ ತೊಂದರೆಗಳು ಮಾಮೂಲಿ ಎಂಬಂತಾಗಿದೆ.

ಎರಡು ದಿನಕ್ಕೆ ಎರಡು ಸಿನಿಮಾ



'ಕೃಷ್ಣ' ಚಿತ್ರ ಹಿಟ್ ಆಗಿರುವುದರಿಂದ ಸ್ಫೂರ್ತಿ ಪಡೆದಿರುವ ಅದರ ನಿರ್ಮಾಪಕ ರಮೇಶ್ ಯಾದವ್ ಈಗ ಹೊಸ ಪ್ರಾಜೆಕ್ಟ್‌ಗಳಿಗೆ ಕೈಹಾಕಲು ಮುಂದಾಗಿದ್ದಾರೆ. ಇದೇ ತಿಂಗಳ ಹದಿಮೂರರಂದು ಪ್ರಜ್ವಲ್ ನಟಿಸುವ 'ಕೆಂಚ'ದ ಮುಹೂರ್ತವಿದ್ದರೆ, ಅದರ ಮಾರನೆ ದಿನವಾದ ಹದಿನಾಲ್ಕರಂದು ದಿನೇಶ್ ಬಾಬು ನಿರ್ದೇಶನದ, ಪ್ರೇಮ್ ನಟಿಸುತ್ತಿರುವ ಹೊಸ ಚಿತ್ರ ಆರಂಭವಾಗುತ್ತಿದೆ. ಹೀಗೆ ಎರಡು ದಿನಕ್ಕೆ ಎರಡು ಹೊಸ ಚಿತ್ರಗಳನ್ನು ಆರಂಭಿಸುವ ಮುಖಾಂತರ ರಮೇಶ್ ಯಾದವ್ ಇಡೀ ಗಾಂಧಿನಗರದವರನ್ನು ತನ್ನತ್ತ ನೋಡುವಂತೆ ಮಾಡಿದ್ದಾರೆ.

ರಂಗದಲ್ಲಿ ಫೇಲ್ ಆದ ಜೋಡಿ ಮುಸ್ಸಂಜೆಯಲ್ಲಿ ಪಾಸ್!



ಸುದೀಪ್ ಮತ್ತು ರಮ್ಯಾ ಮೂರು ವರ್ಷಗಳ ನಂತರ ಮತ್ತೆ ಜೊತೆಯಾಗಿ ನಟಿಸುತ್ತಿದ್ದಾರೆ. ಈ ಹಿಂದೆ 'ರಂಗ ಎಸ್ಸೆಸ್ಸೆಲ್ಸಿ' ಚಿತ್ರದಲ್ಲಿ ನಟಿಸುತ್ತಿದ್ದಾಗ ಅವರಿಬ್ಬರ ನಡುವೆ ಭಿನ್ನಾಭಿಪ್ರಾಯ ಹುಟ್ಟಿದ್ದರಿಂದ ಇಬ್ಬರೂ ಉತ್ತರ, ದಕ್ಷಿಣ ದಿಕ್ಕಿನತ್ತ ತಿರುಗಿದ್ದರು. ಈಗ ಸುಮಾರು ಮೂರು ವರ್ಷದ ನಂತರ ಮತ್ತೆ ಇವರಿಬ್ಬರೂ 'ಮುಸ್ಸಂಜೆಯ ಮಾತು' ಎಂಬ ಚಿತ್ರದಲ್ಲಿ ನಟಿಸಲಿದ್ದಾರೆ. ಅಂದರೆ ಅವರ ನಡುವಿನ ಭಿನ್ನಾಭಿಪ್ರಾಯ ಕೊನೆಗೊಂಡಿದೆ ಎಂದು ಪ್ರೇಕ್ಷಕ ಮಹಾಪ್ರಭು ಅರ್ಥೈಸಿಕೊಳ್ಳಬೇಕಾಗಿದೆ. ಆದರೆ ಅವರ ನಡುವಿನ ಸಮಸ್ಯೆ ಯಾವುದಿತ್ತು? ಅದನ್ನು ಪರಿಹರಿಸಿದವರು ಯಾರು? ಪರಿಹಾರ ಸೂತ್ರ ಯಾವುದು? ಇದ್ಯಾವುದೂ ಅವರಿಬ್ಬರಿಗೆ ಬಿಟ್ಟರೆ ಬೇರೆ ಯಾರಿಗೂ ಗೊತ್ತಿಲ್ಲ. ಅದು ಗೊತ್ತಿಲ್ಲದಿರುವುದೇ ವಾಸಿ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44